1937
ACC NO
017

ಶಿವಾನುಭವ ಗ್ರಂಥಮಾಲಾ ನಂ॥ ೪೪.

017

# ಹರಿಹರನ ರಗಳೆಗಳು.

ಭಾಗ ೬.

ಗ್ರಂಥಾಲಯ

ಸಂಪಾದಕರು,

**ರಾ॥ ಸಾ॥ ಫ. ಗು. ಹಳಕಟ್ಟಿ,**

ಬಿ. ಎ. ಎಲ್. ಎಲ್. ಬಿ. ವಿಜಾಪುರ.

೧೯೩೭.

**ಬೆಲೆ ೬ ಆಣೆ.**

(ಈ ಗ್ರಂಥದ ಎಲ್ಲ ಹಕ್ಕುಗಳನ್ನು ಗ್ರಂಥಕರ್ತರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.)

ACC NO
017

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
**"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"** ನಲ್ಲಿ ಮುದ್ರಿಸಿದರು
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ತಮ್ಮ ೧೬೨೦ (ಅ) ನೇ
ಮನೆಯಲ್ಲಿ ಪ್ರಸಿದ್ಧಿಸಿದರು.

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ

# ಪ್ರಸ್ತಾವನೆ.

ಈ ಗ್ರಂಥದಲ್ಲಿ ನಾವು ಶಿವಶರಣರ ಆರು ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವರೆಲ್ಲರೂ ಬಹುತರವಾಗಿ ಬಸವೇಶ್ವರನ ಕಾಲಕ್ಕೆ ಸಮೀಪಸ್ಥರಾಗಿರುವರು. ಇವರ ಚರಿತ್ರೆಗಳಿಂದ ಆ ಮಹತ್ವದ ಕಾಲದಲ್ಲಿ ಯಾವ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳು ಉದ್ಭವಿಸಿದವೆಂಬದನ್ನು ಊಹಿಸಬಹುದಾಗಿದೆ. ಈ ರಗಳೆಗಳಾದರೂ ಹರಿಹರನ ಇತರ ರಗಳೆಗಳಂತೆಯೇ ಬಹು ಸುಂದರವಾಗಿವೆ.

ಈ ಗ್ರಂಥವನ್ನು ಸಿದ್ಧಪಡಿಸುವಲ್ಲಿ ತುಮಕೂರು ಜಿಲ್ಲಾ ದಂಡಿನ ಶಿವರದಲ್ಲಿರುವ ಶಿ॥ ಮೂ॥ ಕಲ್ಲಯ್ಯನವರು ಶಿ॥ ಮೂ॥ ಶಿವಮೂರ್ತಿ ಶಾಸ್ತ್ರಿಗಳು ಕೀರ್ತನಕೇಸರಿ ತುಮಕೂರು ಮತ್ತು ಹುಬ್ಬಳ್ಳಿಯ ಶ್ರೀ. ಜಗದ್ಗುರು ಗುರುಸಿದ್ಧ ಮಹಾಸ್ವಾಮಿಗಳವರು ಕಳಿಸಿದ ಪ್ರತಿಗಳು ಬಹಳ ಸಹಾಯವಾದವು. ಈ ಹಸ್ತಲಿಖಿತ ಗ್ರಂಥಗಳನ್ನು ನಮಗೆ ಈ ಮಹಾನುಭಾವರು ಕಳಿಸಿಕೊಟ್ಟದ್ದಕ್ಕೆ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

**ವಿಜಾಪುರ**
ತಾ॥ ೬-೨-೧೯೩೭.

**ಫ. ಗು. ಹಳಕಟ್ಟಿ.**
ಸಂಪಾದಕ.

## ಅನುಕ್ರಮಣಿಕೆ.


| | | ಪುಟ. |
|---|---|---|
| ೧. | ಏಕಾಂತರಾಮಿತಂದೆಗಳ ರಗಳೆ. | ೧ |
| ೨. | ವೈಜಕ್ಕವ್ವೆಯ ರಗಳೆ. | ೧೭ |
| ೩. | ಕೆಂಭಾವಿ ಭೋಗಣ್ಣಗಳ ರಗಳೆ. | ೩೦ |
| ೪. | ಕೇಶಿರಾಜ ದಣ್ಣಾಯಕರ ರಗಳೆ | ೩೯ |
| ೫. | ಕುಂಬರಗುಂಡಯ್ಯನ ರಗಳೆ. | ೫೯ |
| ೬. | ಹಾವಿನಹಾಳ ಕಲ್ಲಿದೇವನ ರಗಳೆ. | ೭೦ |


# ಹರಿಹರನ ರಗಳೆಗಳು.

ಭಾಗ ೬.

## ಏಕಾಂತರಾಮಿ ತಂದೆಗಳ ರಗಳೆ.

**ಕಂದ॥** ನತಜನ ಸಮೀಪನಭವಂ ।
ಶ್ರುತಿ ದೂರಂ ಸಕಲದೇವಸೇವ್ಯಂ ಮೆರೆದಂ ॥
ಕ್ಷಿತಿಯೊಳಗೇಕಾಂತರಾಮು ।
ನತಿಶಯದಿಂ ಕರುಣಿ ಹಂಪೆಯ ವಿರೂಪಾಕ್ಷಂ ॥

### ರಗಳೆ.

ಶ್ರೀಮೇರುವಿಂಗೆ ತೆಂಕಣ ದಿಶಾಭಾಗದೊಳು
ಭೂಮಿಗೆ ವಿಭೂಷಣವೆನಿಪ್ಪುದತಿ ರಾಗದೊಳು
ಹೆಸರೆನಿಪ್ಪಬ್ಬಲೂರೆಂಬ ಪೆರ್ಮೆಯ ಪುರಂ
ವಸುಧೆಗೆಸೆದಿಪ್ಪುದರ ಕೀರ್ತಿ ಮಿಗೆ ಸಡಗರಂ
ಮುಗಿಲನಲ್ಲಿರುವ ಕೋಂಟೆಯ ಸೀಳ್ದ ತೆನೆಗಳಿಂ
ಗಗನದೊಳ್ಪಸರಿಸುವ ಬಿರಿದಿನಟ್ಟಳೆಗಳಿಂ
ಬಗಿದು ಪಾತಾಳಮಂ ಮುಟ್ಟುವಗಳುದ್ದದಿಂ
ನೆಗಳ್ದಂಬರದೊಳೆಸೆವ ಹಳವಿಗೆಗಳೊಪ್ಪದಿಂ
ಹೊಳೆಹೊಳೆವ ಹೊಸ ಪರಿಯ ಸೋಮವೀಧಿಗಳಿಂದ
ನಳನಳಿಸುತಿಪ್ಪ ಜಿನಭವನ ಕೋಟಿಗಳಿಂದ
ದೆಸೆದೆಸೆಗೆ ಸಂಭ್ರಮಿಪ ಜೈನರೊತ್ತೊತ್ತೆಯಿಂ

ಎಸೆವುದಾ ಪುರವದರೊಳಗೆ ಮಾಸ್ಯವೃತ್ತಿಯಿಂ
ಕತ್ತಲೆಯ ನಡುವೆ ಮಿನುಮಿನುಪ ಜ್ಯೋತಿಯ ತೆರದಿ

ಸುತ್ತಿರ್ದ ಬಕದ ನಡುವಣ ಮರಾಳನ ತೆರದಿ
ತರುಗುಲ್ಮಲತೆಗಳೊಳಗಿರ್ಪ ಚಂದನದಂತೆ
ನೆರೆದ ಕಬ್ಬುನದೊಳಗೆ ಸಿಕ್ಕಿದ ಪರುಷದಂತೆ
ಬಸದಿಗಳ ನಡುವಿರ್ದುದೊಂದು ಶಿವನಾಲಯಂ
ಮಿಸುಪ ಬ್ರಹ್ಮೇಶ್ವರಂ ನೆಲಸಿದ ಶಿವಾಲಯಂ
ಆ ಶಿವಾಲಯದೊಳಗೆ ಜಡವಾಗಿ ಶಂಕರಂ
ದೇಶಿಗರ ತೆರದಿ ಸರ್ವೇಶ ತಾನಿರೆ ಕರಂ
ಜೈನರುಂ ಮಾಡುವ ನಿರೋಧಮಂ ನೋಡುತುಂ
ತನತನಗೆ ನುಡಿವ ದುಶ್ಕೃತಿಗಳಂ ಕೇಳುತುಂ
ಪೂಜೆ ಇಲ್ಲದೆ ಮಜ್ಜನಕ್ಕೆರೆವರಿಲ್ಲದಿರೆ
ಓಜೆಗೆಟ್ಟಿರುಹನವರೆಲ್ಲರುಂ ಬಗೆಯದಿರೆ
ಎನ್ನಯ ನಿರೋಧಮಂ ಕೇಳರೆನ್ನವರೆಂದು
ಇನ್ನುದಾಸೀನವ ಮಾಡರೆನ್ನವರೆಂದು
ಇಂದು ಉದಯವ ಚಕೋರಿಗಳು ಹಾರೈಪಂತೆ
ತಂದೆ ಪುತ್ರನ ಬರವ ಮೋಹದಿಂ ನೋಳ್ಪಂತೆ
ಬಯಸುತಿರ್ದಂ ತನ್ನೊಳಿಂದಿರ್ಪ ವೀರನಂ
ಬಯಸುತಿರ್ದಂ ನಿಷ್ಠೆ ಬೇರ್ವರಿವ ಧೀರನಂ

ಇರಲಿತ್ತಲತ್ತಲುತ್ತರ ದಿಶಾಭಾಗದೊಳು
ಹರಭಕ್ತನೇಕಾಂತ ರಾಮಯ್ಯನೊಪ್ಪದೊಳು
ಇಪ್ಪನಾತನ ನಿಲವನೇನೆಂದು ಬಣ್ಣಿಪೆಂ
ಸರ್ಪಭೂಷಣನೊಲ್ಮೆಯವನ ತಾನೆಂದಪೆಂ
ನುಡಿಯಂ ನುಡಿದ ಬಳಿಕ ತಪ್ಪನಚಳಿತ ವಚನ
ಹಿಡಿದ ಭಾಷೆಯ ಬಿಡದೆ ಕಡೆಗಣಿಪ ದೃಢದ ಮನ
ಎಡೆಗೊಡಂ ಕೊಟ್ಟು ಹಿಮ್ಮೆಟ್ಟನಂತಹಹ ಕಲಿ
ತೊಡಕಮಂ ತೊಡಕಿ ಬಿಡಿಸಲ್ಬಾರದಂತು ಛಲಿ
ಇಂತೆನಿಪ ಶಿವನ ಭಕ್ತಿಯ ನಿಷ್ಠೆಯಿಂ ನಿಂದು
ಚಿಂತಿಸಿದನಿರ್ದಿರ್ದು ತನ್ನ ಮನದೊಳಗಂದು
ಆರೆಬಿರಿದರಂ ವೀರರಂ ಸತ್ಯ ಭಕ್ತರಂ
ಹರವರಿಸುವಪ್ರತಿಮ ಶಿವಭಕ್ತಿಯುಕ್ತರಂ



ದಿವ್ಯ ಶಿವಲಿಂಗಂಗಳಂ ಶಿವಕ್ಷೇತ್ರಮಂ
ಸೇವ್ಯರೆನಿಸಿರ್ದ ಹರಶರಣಸಂಕುಲಮುಮಂ
ನೋಡುವುದ್ಯೋಗಮನನಾಗಿ ಚಿಂತಿಸತೊಡಗೆ
ನೋಡಬ್ಬಲೂರ ಜಿನನ ಪ್ರತಮೆ ನಡನಡುಗೆ

ಪೊರಮಟ್ಟನಪ್ರತಿಮನತುಳಬಲನುರವಣಿಸಿ
ನೆರೆ ಮನದಿ ಶಿವಭಕ್ತನಾನಂದಮಂ ಧರಿಸಿ
ಸಕಳ ಭವಿಗಳ ಪಾಪಮಂ ನೋಡಿ ಕಳೆವುತಂ
ಸಕಳ ದೇಶಂಗಳಂ ಪಾವನಂ ಮಾಡುತಂ
ದುರಿತಕುಲಮೇಘಮಾರುತಮೂರ್ತಿ ಬರುತಿರ್ದ
ಉರವಣಿಪ ನಿಂದಕಧ್ವಾಂತರವಿ ಬರುತಿರ್ದ
ಇಂತು ಪಲವೆಡೆಗೈದಿ ನಲಿನಲಿದು ಬರುತಮಿರೆ

ಮುಂತೆ ದೂರದೊಳಬ್ಬಲೂರಲ್ಲಿ ತೋರುತಿರೆ
ನೆರೆದಿರ್ದ ಬಸದಿಗಳು ಕಣ್ಗೆ ಬಿಳಿದಾಗಿರಲು
ಹರಭವನವೆಂದು ಕೈಯ್ಯೆತ್ತಿ ಪೊಡಮಡುತಿರಲು
ನಡುಗುತುಂ ಬೆಮರುತಲ್ಲಿಯ ಜಿನಪ್ರತಿಮೆಗಳು
ಘುಡುಘುಡಿಸಿ ಕಣ್ಣನೀರಿಕ್ಕುತಂ ಪ್ರತಿಮೆಗಳು
ಮುಂದಿಂಗೆ ಮೂಗೂರಿದವು ಜಿನಪ್ರತಿಮೆಗಳು
ಒಡನೆದ್ದವಾ ಬಾಗಿಲೊಳ್ಕಂಪಿರುಂಪೆಗಳು
ನಿಡುಸರಂಗೊಂಡು ಕರೆದುವು ಪಗಲ ಬಳ್ಳಿಗಳು
ಈ ತೆರದೊಳುತ್ಪಾತವಾಗುತಿರೆ ನಡೆತಂದು
ನೀತಿ ಇಲ್ಲದ ಸವಣರೂರಹತ್ತಿರೆ ಬಂದು
ಕೂಡೆ ಪುರದೊಳ್ಪೊಕ್ಕು ಬಾಗಿಲುಗಳೊಳ್ನಿಂದು
ನೋಡೆ ಚಿತ್ತಲೆಯ ಬೊಂಬೆಗಳಿರಲ್ಕಳವಳಿದು
ತಿರುಗಿದಂ ಹರಹರ ನಮಃಶಿವಾಯೆಂದೆನುತೆ
ಪರಮ ಭಕ್ತಂ ಹೇಸಿದಂ ಸುಡುಸುಡೆಂದೆನುತೆ
ಎಲ್ಲವುಂ ಜಿನಭವನವಾಗೆ ಸುತ್ರನೆ ಸುಯ್ದು
ಸೊಲ್ಲವಾಯ್ತೆನುತೆ ಮಿಗೆ ಮರುಗಿ ಮುಮ್ಮಳವಾಯ್ದು
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಛೀ, ಛೀ ಎನುತೆ

ನೆಲನಪೊಯ್ದು ತನ್ನಂ ಬೈದುಕೊಳುತುಂ ಬರುತೆ
ಹುಟ್ಟಿದಂದಿಂದವೀ ಪ್ರತಿಮೆಯಂ ಬಲ್ಲೆನೇ
ಕೆಟ್ಟೆನಿಂತೇಕಾಯ್ತು ತಾಂ ಭಕ್ತನಲ್ಲೆನೇ
ಪೋಪೊಡಿರುಳಾಯ್ತಿರಲ್ಬಾರದೇವೇಂ ಶಿವನೆ
ಆಪತ್ತೆನಗಿದರಿಂದಧಿಕವಿಲ್ಲೆಲೆ ಶಿವನೆ

ಎನುತಿರಲ್ಬ್ರಹ್ಮೇಶ್ವರಂ ಕರುಣದಿಂ ಬಂದು
ತನಗೆ ಸೊಗಸುವ ಭಕ್ತವೇಷಮಾರ್ಗದಿ ನಿಂದು
ರಾಮತಂದೆಗಳ ಕೆಲಬಲದಲ್ಲಿ ಸುಳಿವುತಿರೆ
ಕಾಮಹರನಲ್ಲಿ ತನ್ನಂ ಮರಿಸಿ ನಿಲುತಮಿರೆ
ಕಂಡಿದೇನೀ ಪುರದೊಳಿರ್ಪವರ ಪರಿಯಲ್ಲ
ಖಂಡೇಂದುಮೌಳಿಯ ಶರಣರೋರ್ವರೂ ಇಲ್ಲ
ಶಿವನ ಭಕ್ತರ ವೇಷಮಾರ್ಗದಂತಿರ್ಪುದು
ಹವಣಿಸದೆ ಎನ್ನ ಮುಂದೆಡೆಯಾಡುತಿರ್ಪುದು
ನೆರೆದ ಕಲ್ಗಳ ನಡುವೆ ಪರುಷದ ಕಣಿಯು ಕಂಡೆ
ಸರ ಹರಿದ ಮಣಿಗಳೊಳ್ಚಿಂತಾಮಣಿಯು ಕಂಡೆ
ಗುಣಹೀನ ಧೇನುಗಳೊಳಗೆ ಕಾಮಧೇನುವಿದೆ
ಕಣಿಗಿಲೆಯ ತೋಪಿನೊಳು ಸಲೆ ಕಲ್ಪವೃಕ್ಷವಿದೆ
ನುಡಿಸಿ ನೋಡುವೆನಾದುದಕ್ಕೆಂದು ಸಾರ್ತಂದು
ನಿಡು ಸುಯ್ವುತುಮ್ಮಳಿಸುತೆಂತಕ್ಕೆ ಎಯ್ತಂದು
ಶರಣಾರ್ಥಿ ನಿಮ್ಮ ಮತವಾವುದೆಂದೆನುತೆರಗೆ
ಪುರದೊಳಗೆ ಬ್ರಹ್ಮೇಶನಾಲಯವೆನುತೆ ಪೋಗೆ
ಎಲ್ಲಿ ಬ್ರಹ್ಮೇಶ್ವರಂ ಎನುತ್ತೆ ಕಣ್ಬಂದಂತೆ
ನಿಲ್ಲದುರವಣಿಸುತಲ್ಲೈದಿ ಗುರುಗಳ್ಪಿಂತೆ
ನಡೆದೊಡೆ ನಡೆದು ಪರಿದೊಡೊಡನೊಡನೆ ನಡೆತಂದು
ಮೃಡನಾಲಯಂಬುಗಲ್ಬೆನ್ನಲ್ಲಿ ಪುಗುತಂದು
ಘೊಪ್ಪೆನಲ್ಶಂಕರನ ಚರಣತಳದೊಳು ಬಿರ್ದು
ಕುಪ್ಪಳಿಸಿ ಕಣ್ಣನೀರೊಡೆಯುಲಳಲುತ್ತಿರ್ದು
ಎನ್ನೈಯ್ಯ ಶಿವನೆ ಉಮ್ಮಳಿಸುತಿರ್ದೈ ತಂದೆ
ಎನ್ನೈಯ್ಯ ಕರನಿರೋಧದೊಳಿರ್ದೆ ಎಲೆ ತಂದೆ



ಎಂದೆನುತ್ತಪ್ಪಿಕೊಂಡಡಿಗಡಿಗೆ ಮುಂಡಾಡಿ
ಬಂದಾಯಸಮನುಸುರ್ದು ಕಡು ಮೋಹದಿಂ ನೋಡಿ
ದೇವ ಇಂತಿರತಕ್ಕುದೇ ದೂಷಕರ ನಡುವೆ
ದೇವ ಇಂತಿರ್ಪರೆ ಶಿವದ್ರೋಹಿಗಳ ನಡುವೆ

ಎನೆ ಶಶಿಧರಂ ರಾಮತಂದೆಯಂ ಬಿಗಿದಪ್ಪಿ
ಎನಗೊಡೆಯರಿನಿತು ದಿನವಿಲ್ಲೆನುತಮರ್ದಪ್ಪಿ
ನಿನ್ನ ಬರವಂ ಪಾರುತಿರ್ದೆನೆಲೆ ರಾಮೈಯ್ಯ
ಎನ್ನೊಲವು ಬರ್ಪಂದದಿಂ ಬಂದೆ ರಾಮೈಯ್ಯ
ಅರುಹನರ ಪ್ರತಿಮಾದಿಗಳನೆತ್ತಿ ಬಿಸುಟು ಕಳೆ
ನೆರೆದಿರ್ಪ ಜೈನಸಂಕುಳವನೆಬ್ಬಟ್ಟಿ ಕಳೆ
ಎಂದು ಬೆಸಸಲು ರಾಮತಂದೆ ಹರುಷಂದಳೆದು
ಅಂದಿನಿರುಳಂ ಹರನೊಳೇಕಾಂತವಂ ಕಳೆದು
ವಸುಧೆಗಿನಕಿರಣ ಶಿವಭಕ್ತಿ ಪಸರಿಸುವಂತೆ
ದೆಸೆದಿಕ್ಕನಾವರಿಸಿ ತೊಳಗಿ ಬೆಳಗುತ್ತಿಂತೆ

ಬೆಳಗಾಗೆ ಶಿವನ ಪೂಜೆಗೆ ಪೂವ ತರಲೆಂದು
ಗಳಗಳನೆ ಬರೆ ರಂಗಮಂಟಪದ ನಡುವಂದು
ಹರನತ್ತ ಕಾಲಾಗಿ ಪಟ್ಟಿರೆ ಸವಣಗುನ್ನಿ
ಹರನಣುಗನೀಕ್ಷಿಸುತ್ತೇಳೆಲೆ ಹುಳಿತಗುನ್ನಿ
ಹರನಿರ್ದ ದೆಸೆಯೊಳೀ ಪರಿ ಇರಲ್ತಕ್ಕುದೇ
ನರಕಿ ಏಳೇಳು ಶಿವದ್ರೋಹಿ ಇರತಕ್ಕುದೇ

ಎಂದ ನುಡಿಗೇಳಿ ಸವಣಂ ಕರಂ ಘುಡುಘುಡಿಸಿ
ಡಂಬಿನ ಗೊರವ ಗಳಹದಿರು ನಿನ್ನ ಮಾತು ಹುಸಿ
ಶಿವನೆಂದಡಾರೆಲ್ಲಿಯಾರ್ಗಿತ್ತನೆಲೆ ಗೊರವ
ಹವಣರಿಯದೆನ್ನೊಡನೆ ನುಡಿವರೆ ಮರುಳ್ಗೊರವ
ಎನೆ ರಾಮತಂದೆ ಘುಡುಘುಡಿಸಿ ಮಸಗಿದನಂದು
ಕೊನೆ ಮೀಸೆ ಕೆತ್ತಿ ಸೆಡಿಲೇಳೆ ಎಳ್ದಂ ನಿಂದು

ಕೇಳ್ದಿಲವೊ ಮೂರುಂಪುರಂಗಳುರುಪಿದುದನರಿಯ
ಕಾಲನಂ ಭಸ್ಮೀಕೃತವ ಮಾಡಿದುದನರಿಯ
ಕಾಮನಂ ನೊಸಲಗಣ್ಣಿಂದುರುಪಿದುದನರಿಯ

ಸೋಮನಂ ಸಿರಿಮುಡಿಯೊಳಗೆ ಸೂಡಿದುದನರಿಯ
ಹರಿಯಜರ ನಡುವೆ ಉರಿಲಿಂಗವಾದುದನರಿಯ
ಅರೆಯಟ್ಟಿ ಬಪ್ಪ ವಿಷಮಂ ಧರಿಸಿದನನರಿಯ
ಹುಲಿಗೆರೆಯೊಳುದಯಿಸಿದ ಸೋಮನಾಥನನರಿಯ
ಎಲೆ ಮರುಳೆ ಬಾಣಂಗೆ ಕಯ್ಯನಿತ್ತುದನರಿಯ
ಎಲೆಲೆ ಮಯ್ಯೂರಂಗೆ ಮೈಯ್ಯನಿತ್ತುದನರಿಯ
ಎಲೆ ಕಾಳಿದಾಸಂಗೆ ಕಣ್ಣನಿತ್ತುದನರಿಯ
ಎಲೆಲೆ ನಂಬೆಣ್ಣಂಗೆ ತನ್ನನಿತ್ತನನರಿಯ
ಎಲವೊ ದಾಸಂಗೆ ತವನಿಧಿಯನಿತ್ತುದನರಿಯ
ಓಹಿಲನನಿಳೆಯರಿಯೆ ಒಯ್ದ ದೇವನನರಿಯ
ಆಹ ಉದ್ಭಟನ ಪುರವೆರಸಿ ಒಯ್ದನನರಿಯ
ಎಲವೊ ಕರುಕುಚಿಕಂಗೆ ತಂದೆ ಇತ್ತನನರಿಯ
ಎಲವೋ ಕೊಡಗೂಸಿಯ ಹಾಲ ಸವಿದನನರಿಯ
ಎಂದು ಘರ್ಜಿಸಿ ರಾಮತಂದೆಗಳ್ಮಾದಲಿಸಿ
ಸಂದ ಭಕ್ತಂಗೆ ಸವಣ ನುಡಿದನಗ್ಗಲಿಸಿ

ಎಲೆ ಭಕ್ತ ತೆಗೆ ಪುರಾಣದ ಮಾತು ನಿನಗೇಕೆ
ಎಲೆ ಭಕ್ತ ಹಿಂದಾದ ಹಳೆಯ ಮಾತುಗಳೇಕೆ
ಇಂದೆಮ್ಮ ಮುಂದೆ ನಿನ್ನಯ ತಲೆಯನರಿದು ಪಡೆ
ಸಂದುದು ಬಳಿಕ್ಕ ನುಡಿಯಾವೆಲ್ಲರುಂ ನೋಡೆ
ಪಡೆಯಲ್ಜಿನಪ್ರತಿಮೆಗಳನೆತ್ತಿ ಬಿಸುಡುವೆವು
ನಡುವೆ ಶಿವಲಿಂಗಪ್ರತಿಷ್ಠೆಯಂ ಮಾಡುವೆವು
ಎನುತಿದನೋಡಂಬಟ್ಟೆವೆಂದು ಸವಣರ್ನುಡಿಯೆ
ತನಗಿಚ್ಛೆಯಂತಿರ್ದುದಂತವರದಂ ನುಡಿಯೆ

ಆ ರಾಮತಂದೆ ಪುಳಕಿತನಾಗಿ ಹಿಗ್ಗುತುಂ
ಭೋರೆಂದು ಗುಡಿಗಟ್ಟಿ ಮತ್ತೆ ಮೈವೆಚ್ಚುತುಂ
ಇದು ಭಾಷೆ ಭಾಷೆ ಬರೆ ಬರೆ ಇದನೊಡಂಬಟ್ಟೆ
ಇದನಾರದೊಡೆ ಬಳಿಕ ಬಹುದೇ ಶಿವನ ಬಟ್ಟೆ
ಎಂದು ಭಾಷಾಪತ್ರಮಂ ಬರೆಯಿಸಿದನಂದು
ತಂದು ನೆರಹಿರೆ ನಿನ್ನ ಸವಣರನೆನುತ್ತಂದು



ಕರೆಯುವೇಳ್ದಂ ಜಗದೊಳುಳ್ಳ ಶಿವಭಕ್ತರಂ
ಬರುತಲಿರ್ದುದು ಹರನ ಗಣ ಸಮಿತಿಯೊತ್ತರಂ
ಅಗ್ಗಣಿಯ ಹೊನ್ನಿತಂದೆಗಳವರ್ಮುಂತಾಗಿ
ಅಗ್ಗಳೆಯ ದೇವರಸರವರ್ಗಳುಂ ಸಹಿತಾಗಿ
ದೆಸೆ ನೂರು ಗಾವುದದೊಳುಳ್ಳ ಶರಣರ ಮೊತ್ತ
ಎಸೆಯೆ ನೆರೆದುದು ಲಕ್ಕಲೆಕ್ಕದಿಂದತ್ತತ್ತ
ರಜತಗಿರಿ ಜಯಿಸಿ ಭಕ್ತರ ರೂಪುಗೊಂಡಂತೆ
ನಿಜಭಸಿತಕಾಂತಿಯುಂ ಚಂದ್ರಿಕೆಯೊಳಿರ್ದಂತೆ
ಮಕುಟದ ಮಹಾಮಹಿಮರಪ್ರತಿಮರಲ್ಲಲ್ಲಿ
ಅಕಳಂಕಚರಿತರನುಪಮಕೃಪಾಕರರಲ್ಲಿ
ಒಪ್ಪುವ ಕರಸ್ಥಲ ಉರಸ್ಥಲದಚಲರಲ್ಲಿ
ನಿಪ್ಪಸರದಚ್ಚ ಶಿವಲಿಂಗಪ್ರತಿಗಳಲ್ಲಿ
ಪಂಚಾಕ್ಷರಿಯೆ ರೂಪುಗೊಂಡಂದದಿಂ ಕೆಲರು
ಪಂಚಭೌತಿಕವಿಲ್ಲದೊಡಲೊಳಿರ್ಪರ್ಕೆಲರು
ಶಾಂತರುಗ್ರರು ಸತ್ಯರನುಪಮತ್ಯಾಗಿಗಳು
ಸಂತೋಷಿಗಳ್ಸುಖಿಗಳಸಮಶಿವಯೋಗಿಗಳು
ನೀಡಿ ನೆಗಪಿದ ಕೋಟಿವೃಷಭಧ್ವಜದ ನಡುವೆ
ಕೂಡೆ ಕೇಳಿಸುವ ಶರಣರ ಸಂದಣಿಯ ನಡುವೆ
ಗಿರುಘಟಿಯ ಮದ್ದಳೆಯ ಕರಡೆಗಳ ಧ್ವನಿಯೊಳಗೆ
ತುರುಗಿದವುಜೆ ತಾಳ ಕಮಸಾಳದ ರವದೊಳಗೆ
ಕೊಂಬುಗಳ ಚಿರುಲುಗಳ ಕಹಳೆಗಳ ಧ್ವನಿಯೊಳಗೆ
ಬೊಂಬುಳಿಯ ಕಿನ್ನರಿಯ ಶಂಖಧ್ವನಿಗಳೊಳಗೆ
ಅರರೆ ನಡೆತಪ್ಪ ಸಿಂಹದ ಜಂಗುಳಿಗಳಂತೆ
ಉರವಣಿಸಿ ಘುಳುಘುಳಿಪ ಶರಭನ ನೆರವಿಯಂತೆ
ಮೊಳಗಿ ಮಿಂಚುತೆ ಬರ್ಪ ಸಿಡಿಲಬಳಗದ ತೆರದಿ
ತೋಳಗುತ್ತೆ ಬೆಳಗುತ್ತೆ ಬರ್ಪ ಕವಿಗಳ ತೆರದಿ
ಬಂದು ನೆರೆದುದು ಭೂಮಿಯಗಲಕ್ಕೆ ಹರಗಣಂ
ನಿಂದುಘೇ ಚಾಂಗು ಬೊಲ್ಲೆನುತಿರೆ ಶಿವನ ಗಣಂ
ಇಂತು ನೆರೆದಿರ್ದುದೊಂದೆಸೆಯೊಳಭವನ ಗಣಂ

ಮುಂತೆ ಮತ್ತೊಂದೆಸೆಗೆ ಸಾರ್ದು ಜೈನರ ಗಣಂ
ನೆರೆದು ಬರುತಿರ್ದುದು ಜಿನವ್ರತಿಗಳಲ್ಲಲ್ಲಿ
ಹರಿದು ಸಡಗರಿಸಿ ಸಾಲ್ವಿಡಿದು ಬರುತಲ್ಲಲ್ಲಿ
ಕೈಯ್ಯಗುಂಡಿಗೆ ಮೋಟ ಕುಂಚದ ಹರಿದ ತಟ್ಟು
ಮೈಯ್ಯಗೇಣುದ್ದದ ಮಲಂ ಹರಿದ ತಲೆಕಟ್ಟು
ಮಿಂಚುವಲೆ ಹಡಿಕೆವಾಯಿ ಹಗೆ ಹಲ್ಲುಗಳ ಮೊರೆ
ಸಂಚಿಸಿದ ಹಲವು ಮಲವೆತ್ತು ಹೊಲಸು ನಾರೆ
ಕುರುಡರುಂ ಕುಂಟರುಂ ಡಂಭರುಂ ಸೀತರುಂ
ಬರಡರುಂ ನಿಃಕರಡರುಂ ನಿಜದ ಹುಸಿಕರುಂ
ಕ್ಷುದ್ರರುಂ ವಾಚಾಳರುಂ ಕೆಟ್ಟ ಸವಣರುಂ
ನಿದ್ರೆಯಿಂದೆದ್ದು ಬಂದಂತಿಪ್ಪ ಜಾಡ್ಯರುಂ
ಬತ್ತಲೆಗರುಂ ಬಡಕರುಂ ವೀತರಾಗರುಂ
ಕತ್ತಲಿಪ ಮುಖದ ಭಾಗ್ಯದ ಭೋಗಹೀನರುಂ
ಮುತ್ತ ಮುದುನರಿಯಂತೆ ಬಳ್ಳುಗರೆವರ್ಕೆಲರು
ಕತ್ತೆಯಂತರಿಚಿಕಾಳ್ಗೆಡೆವುತಿರ್ಪರ್ಕೆಲರು
ಗೂಗೆಯಂತಿರೆ ಮಿಗೆ ಪಲುಂಬುತಿರ್ಪರ್ಕೆಲರು
ಕಾಗೆಯಂತಿರೆ ಕಾಕುಗೆಡೆಯುತಿರ್ಪರ್ಕೆಲರು
ಉಮ್ಮಳಿಪ ಕಪಿಯಂತೆ ಸುಮ್ಮನಿರ್ಪರ್ಕೆಲರು
ತಮ್ಮೊಳಗೆ ತಾವು ಗುಜುಗುಜುಗುಟ್ಟುವರ್ಕೆಲರು
ವಾದದಿಂ ವಸಿಷ್ಠನಂ ಗೆಲಿವ ಪಂಡಿತರಲ್ಲಿ
ಸಾಧಿಸಿ ಸಕಲ ಮಂತ್ರ ಶಕ್ತಿಯಿಂದಂತಲ್ಲಿ
ವಾದವಶ್ಯಂ ಮೋಹನಸ್ತಂಭನವ ಬಲ್ಲ
ಭೇದಂಗಳಂ ದಂಡ ಸಾಮಂಗಳಂ ಬಲ್ಲ
ಪಂಡಿತರ್ಸವಣರುಂ ಜೈನರಾರ್ಹತರಲ್ಲಿ
ತಂಡತಂಡದ ಋಷಿಗಳೆಂಬ ಶ್ರಾವಕರಲ್ಲಿ
ಸವಣಪಡೆಕೂಡೆ ನೆರೆದುದು ಗಣಂಗಳ ಮುಂತೆ
ರವಿಕಿರಣದುರವಣೆಗೆ ಸಾರ್ದ ಕತ್ತಲೆಯಂತೆ
ದಾವಾನಲಂ ನೋಡಿ ನೆರೆದ ತರಗೆಲೆಯಂತೆ
ಭಾವಿಸೆ ಮಹಾನಿಲಂಗೊಂಡಿರ್ದ ಮುಗಿಲಂತೆ
ಇಂತು ನೆರೆದಿರ್ದುದಾಶೇಷಶ್ರವಣರಲ್ಲಿ



ಅಂತದಂ ನೋಡಿ ನಗುತಾನಂದದಿಂದಲ್ಲಿ
ಆ ಸಮಯದೊಳು ರಾಮತಂದೆ ತಾನೊಪ್ಪಿದಂ
ಭಾಸುರವೆನಿಪ್ಪ ಭಕ್ತ್ಯಂಗನೆಯನಪ್ಪಿದಂ
ನಳನಳಿಪ ಘುಳುಘುಳಿಪ ಸಿಂಗರಂ ಮಾಡಿದಂ
ಬೆಳಬೆಳಗುತಿರ್ಪ ಪೊಸ ಭಸಿತಮಂ ಪೂಸಿದಂ
ಕರದೊಳುಂ ಕಂಠದೊಳು ರುದ್ರಾಕ್ಷಿಯಂ ಧರಿಸಿ
ಶಿರ ಕೊರಲು ತೋಳುಗಳೊಳಂತಮಂ ಸಿಂಗರಿಸಿ
ಸುರುಚಿರ ಸುವರ್ಣ ಪಳಿಯಂ ತೆಗೆದು ಬಿಗಿದುಟ್ಟು
ನೆರೆದ ಸವಣರ್ನಡುಗಲು ಬುಬೆಂದು ಬೊಬ್ಬಿಟ್ಟು
ಗಾಳಿಯಂ ಸೀಳ್ವ ಪೊಸ ಕೂರಸಿಯನಳವಡಿಸಿ
ಬಾಲೇಂದುಧರನಣುಗನುಬ್ಬಿನಿಂದಗ್ಗಳಿಸಿ
ಕಾಲ ತೊಡರುಲಿಯೆ ಘುಲುಘುಲುಕೆಂದು ನಡೆತಂದು
ಲೀಲೆ ಮಿಗೆ ಭಕ್ತರುಘೆ ಚಾಂಗು ಬೊಲ್ಲೆನಲಂದು
ಬಂದ ಶಿವಭಕ್ತರ್ಗೆ ಮಯ್ಯಿಕ್ಕಿ ಹೋ ಎಂದು
ನಿಂದು ನುಡಿದಂ ರಾಮತಂದೆ ಹಿಗ್ಗುತ್ತಂದು
ಈ ಶಿರವನರಿದು ಹತ್ತಿಸಿ ಶಿವನನೊಲಿಸುವೆಂ
ಸಾಸಿರ ಜಿನರನೊಡೆದು ಲಿಂಗಮಂ ನಿಲಿಸುವೆಂ
ಇದು ಭಾಷೆ ಇದನಳುಪೆ ಜೈನರೇನೆಂದುದಂ
ಮುದದಿಂದೊಡಂಬಟ್ಟೆನೆಂದಲಗನೆತ್ತಿದಂ

ಆಗಳಾ ಜೈನರೆಲ್ಲಂ ಕೌತುಕಂ ಬಡಲು
ರಾಗದಿಂ ಭಕ್ತರೆಲ್ಲಂ ಸಂತಸಂ ಬಡಲು
ಎಡದ ಕೆಯ್ಯಿಂದ ಜಡೆಯಂಸುತ್ತಿ ಸಿಡಿಸಾಗ
ಎಡೆಗುಡದೆಯಲಗಂ ಶಿರಕ್ಕೆ ಮೋಹಿಸುತಾಗ
ಏನೆಂಬೆನೇನೆಂಬೆನೆಲೆಲೆಲೆಲೆ ಕೌತುಕಂ
ಆನರಿಯೆ ನಾನರಿಯೆನಾಹ ಧೀರಾಂತಕಂ
ಘರಿಲೆಂಬ ದನಿ ಪುಟ್ಟುವಲ್ಲಿಂದ ಮುನ್ನರಿದು
ಹರನಿರ್ದ ದೆಸೆಗಟ್ಟೆ ತಲೆವಿಡಿದು ನಲಿನಲಿದು
ಶಿರವನೇರಿಸಿ ಮಲೆದು ಸರಸರನೆ ಹಿಮ್ಮೆಟ್ಟಿ
ಬರುತ ಹಿಂದಣ ನಂದಿಯಂ ಮಲಂಗಿರೆ ಮುಟ್ಟೆ

ಸವಣರೆಲ್ಲಂ ನಡನಡನೆ ನಡುಗಿ ಘೋಳಿಟ್ಟು
ತಮತಮಗೆ ಭೀತಿಗೊಂಡೆಲ್ಲರುಂ ಮರವಟ್ಟು
ಮಾಯವಿದು ಮಂತ್ರವಿದು ಮಾಹೇಂದ್ರಜಾಲವಿದು
ಕಾಯವೇಳ್ದಿಂತು ಮಾಡುವದು ಕೌಟಿಲ್ಯವಿದು
ಎಮಗಿದರ ಪರಿ ತಿಳಿಯದೆನುತಾಹತರಳುಕಿ
ನೆವದಿಂದಲೇಳಲುದ್ಯುತರಾಗಿ ಮನವಳುಕಿ

ಅಂತದಂ ಕಂಡಗ್ಗಣಿಯ ಹೊನ್ನಿತಂದೆಗಳು
ಇಂತಾಗಲಾಗವೆನೆ ನುಡಿದು ಪರವಾದಿಗಳು
ಚನ್ನಾಯಿತೈಯ್ಯ ಕಪಟವಿದೆನಲು ತಮ.ತಮಗೆ
ಬಿನ್ನಾಣವೇಕೆ ಮಾಡುವುದನುಸುರುವುದೆಮಗೆ
ಎನೆ ಸವಣರೇಳ್ದು ತಮ್ಮೊಳ್ವಿಚಾರಿಸಿ ನೋಡಿ
ತನತನಗೆ ನುಡಿವೇಕ ವಾಕ್ಯವಾಗುತೆ ಕೂಡಿ
ಇಂತೆಂದರೇಳು ದಿವಸಕ್ಕೆ ಶಿರವಂ ಕೂಡೆ
ಮುಂತೆ ಶಿರವಂ ಪಡೆವುದೆಮ್ಮ ಮತವೆಂದಾಡೆ

ನುಡಿಯೆ ಕೈಕೊಂಡೆವೆನುತಂ ಹೊನ್ನಿತಂದೆಗಳು
ಮೃಡನ ಮೊಗವಂ ನೋಡಿ ತಲೆವಾಗಿ ತಂದೆಗಳು
ಇಂತು ಮಾಡಿದಿರೀ ಸವಣರಿದಕ್ಕೇನೆಂದು
ಕಂತುಹರಮೂರ್ತಿ ಮಿಗೆ ಪೊಸತು ಮಾಡುವೆನೆಂದು
ಏಳು ದಿನವೀ ಶಿರವನಿಂತೀ ತೆರದೊಳಿರಿಸಿ
ಬಾಲೇಂದುಧರನಣುಗನಿಚ್ಚೆಯಿಂದನುಕರಿಸಿ
ಮೊರೆಯುವೇಳ್ಕೇಳು ದಿವಸಕ್ಕೆ ಶಿರವಂ ಕೂಡಿ
ನೆರೆ ಲೋಕವರಿಯೆ ಮೆರೆವೇಂ ಪಡೆವೆನಿಳೆ ನೋಡಿ
ಪಡೆಯದೊಡೆ ಬ್ರಹ್ಮಾಂಡವೊಡೆಯದೇಕಿರ್ದಪುದು
ಪಡೆಯದೊಡೆ ಶಿವನ ಕೈಲಾಸವೆಂತಿರ್ದಪುದು
ನುಡಿದು ತೋರದೊಡೆ ಶಿವಭಕ್ತಿಯೆಂತಿರ್ದಪುದು
ಮೃಡನ ಸಮ್ಮುಖದಿ ಪಡೆವೇಂ ಪಡೆವೆನೆನುತಿರ್ದ

ಎಂದು ಗರ್ಜಿಸುತೆ ಕಂಕಣದಾರವಂ ಕಟ್ಟಿ
ಅಂದು ಸವಣರ ಮನಂ ನಡುಗಿ ಸರಕಂ ಕಟ್ಟಿ



ಒಡನೆ ನಾನೂರೊಡೆಯರುಂ ಕಂಕಣಂಗಟ್ಟಿ
ಸಡಿಫಡ ಜಿನನ ಬೊಂಬೆಗಳನೆಲ್ಲ ಹುಡಿಗಟ್ಟಿ
ಕಳೆಯಬೇಕೆನುತಾರುತುಂ ಬೊಬ್ಬಿರಿವುತಿರಲು
ಘುಳುಘುಳಿಸಿ ಘೂರ್ಮಿಸುತೆ ಕುಪಿತರಾಗುತ್ತಿರಲು
ಆ ಸಮಯದೊಳು ಹೊನ್ನಿತಂದೆಗಳು ಸಡಗರಿಸಿ
ಲೇಸಪ್ಪ ಹೊನ್ನ ಹೊಸ ಪರಿವಾಣಮಂ ತರಿಸಿ
ಅದರೊಳ್ದಣಿಂಬಮಂ ಪಾಸಿ ಭಸಿತವನಿಟ್ಟು
ಮುದದಿಂದ ಪಾದೋದಕ ಪ್ರಸಾದವನಿಟ್ಟು
ಸುಲಿದ ಪಲ್ಮಿನುಗೆ ಕೆತ್ತುವ ಮೀಸೆಯಿಂದೊಪ್ಪೆ
ಫಲದಿಂದೆ ಗಂಟಿಕ್ಕಿ ಬಿಗಿದ ಪುರ್ಬಿಂ ವೊಪ್ಪೆ
ಘುಳುಘುಳಿಪ ರಾಮತಂದೆಗಳ ಶಿರವಂ ತಂದು
ಇಳುಪಿದಪರ್ಪರಿವಾಣದೊಳಗೆ ಬೊಬ್ಬಿಡುತಂದು

ಎತ್ತಿದಂ ಶಿವಭಕ್ತರೆಲ್ಲರುಘೆಯುಘೆ ಯೆನಲು
ಸುತ್ತಿರ್ದ ಸವಣ ಪಡೆ ಕೌತುಕಂಬಡುತಿರಲು
ಶಿವನ ಪ್ರಸಾದಮಂ ಸಿಂಧು ಹೊರುವಂದದಿಂ
ಭವನ ಕೀರ್ತಿಯನೊಪ್ಪದಿಂ ಧರಿಸುವಂದದಿಂ
ಗಿರಿಶನಭಿಮಾನಮಂ ಪೊತ್ತು ಸಿತ್ತರಿಪಂತೆ
ಶರಣ ಸಂಕುಳದ ಹರಣಮನರರೆ ಹೊರುವಂತೆ
ಹೊತ್ತು ಕೊಂಡಂ ಹೊನ್ನಿತಂದೆ ಹರಿವಾಣಮಂ
ಹೊತ್ತುಕೊಂಡರ್ಸವಣರೆಲ್ಲ ದುಮ್ಮಾನಮಂ
ಹಿಂದೆ ದೇಹಕ್ಕೆ ಕಾಪಿಟ್ಟು ನೆರೆ ಧೀರರಂ
ಮುಂದೆ ನಡೆಗೊಂಡನಪ್ರತಿಮನಭಿನವಹರಂ
ಹೊತ್ತ ಬಾಳೆತ್ತಿದ ಕರಾರಿ ಕಿತ್ತಲಗುಗಳು
ಸುತ್ತಂ ತಳಿತರ್ ಥಳಥಳಿಪ ಪೊಸಕೈದುಗಳು
ನೋಡಲೆಂದವನಿಯಗಲಕ್ಕೆ ನೆರೆದರಸುಗಳು
ಕೂಡೆ ನೆರೆ ತೀವಿತ್ತು ಶಿವಭಕ್ತರಿಕ್ಕೆಗಳು
ಗಗನವೆಡೆಯಿಲ್ಲೆನಿಸಿ ತುರುಗಿದ ವೃಷಧ್ವಜವ
ಜಗವದಿರೆ ಹೊಯ್ಪ ನಿಸ್ಸಾಳದ ಮಹಾರವವ

ದೆಸೆಗೇಕ್ತ ತೆರದಿ ಮೊಳಗುವ ಭೇರಿಗಳ ನಡುವೆ
ಅಸಮಾಕ್ಷನಣುಗನಾ ವೀರವೃಂದದ ನಡುವೆ
ನಡೆತಂದನಾಗಳೆಳೆ ಬೆರಗಾಗಿ ತಲೆದೂಗೆ
ಒಡನೆ ಭಾಷೆಯ ಗಣಂಗಳ್ಸಹಿತ ಒಂದಾಗೆ

ಬಂದು ಪುಲಿಗೆರೆಯ ಪಟ್ಟಣಮನೊಲವಿಂ ಪೊಕ್ಕು
ಸಂದಣಿಸಿ ಮೆರೆವುತ್ತೆ ಬರುತಂ ಮನಂ ಮಿಕ್ಕು
ಸೋಮನಾಥನ ಪದಕ್ಕೇರಿಸುತೆ ಪೊಡಮಟ್ಟು
ಭೂಮಿಗಜ್ಜರಿಯೆನಲ್ಕಲ್ಲಿಂದ ಪೊರಮಟ್ಟು
ಅಣ್ಣಿಗೆರೆಯಮೃತನಾಥನ ಚರಣಮಂ ಕಂಡು
ಬಣ್ಣಿಸುತ್ತಲ್ಲಿ ನೆಲೆವರಕೆಯಂ ಕೈಕೊಂಡು
ಕೆಂಭಾವಿಯೊಳ್ಭೋಗನಾಥನಲ್ಲಿಗೆ ಬಂದು
ಬೆಂಬಳಿಯೊಳುರುಳ್ದಾತನೆ ಕರುಣಿ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿಗೈತಂದು
ಒಪ್ಪವಾ ರಾಮತಂದೆಯ ಶಿರಂ ಶರಣೆಂದು
ಆ ವೃಂದದೊಳು ನಾಗನಾಥನಲ್ಲಿಗೆ ಬಂದು
ದೇವ ನಿಮ್ಮಯ ಕರುಣಮೀಯೆನುತ್ತಂ ನಿಂದು
ಸೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮಂಗೆ
ನಿನ್ನ ಪ್ರಸಾದಮೀಯೆನುತೆ ಕರುಣಂಬಡುಗೆ
ಹಂಪೆಗೈತಂದು ವಿರುಪಾಕ್ಷ ಲಿಂಗವ ಕಂಡು
ಹೆಂಪಿಂದೆ ಹೆಚ್ಚುತ್ತೆ ಹಿಗ್ಗುತ್ತೆ ನಡೆಗೊಂಡು
ಇವು ಮೊದಲ್ಗೊಂಡು ಶಿವಪುರವೆಲ್ಲರೊಳ್ಮೆರಸಿ
ಭುವನವೆಲ್ಲರಿಯೆಲೇಳುಂ ದಿವಸವುಂ ಮೆರೆಸಿ
ತಿರುಗಿ ಬರುತಿರ್ದುದಪ್ರತಿಮನಭವನ ಗಣಂ
ನೆರೆದು ಬರುತಿರ್ದುದಹಿಧರನ ನಚ್ಚಿನ ಗಣಂ
ಈ ಬಂದುದರುಹಕುಲವಿಲಯಾಗ್ನಿ ಮುಖವೆಂಬ
ಈ ಬಂದು ದಲೆ ಜೈನ ಹರಿಶರಭ ಮುಖವೆಂಬ
ಬಿರುದೆತ್ತಿ ಕರೆವ ಕಹಳೆಯನಲ್ಲಿ ಪಿಡಿಸುತಂ
ಬರುತಿರ್ದರಬ್ಬಲೂರತ್ತಲುರವಣಿಸುತಂ



ಉರವಣಿಸಿ ನಡೆತಂದು ಬ್ರಹ್ಮೇಶ್ವರನ ಮುಂದೆ
ಹರಿವಾಣ ಸಹಿತ ತಂದಿಳುಪಿ ಭಕ್ತರ ಮುಂದೆ
ಹೋಹೋ ಉಘೇ ಜಾಂಗುಬೊಲ್ಲೆಂದು ಸಂಭ್ರಮಿಸಿ
ಆಹೊ ಶಿವ ತಾನೆ ಎಂದೆನುತೆ ಮಿಗೆ ಹಾರೈಸಿ
ಶಿರಮಂ ತೆಗೆದು ಶಿವನ ಪೀಠ ಮೂಲದೊಳಿರಿಸಿ
ಹರನ ಪ್ರಸಾದ ಪಾದೋದಕದಿ ಸಿಂಗರಿಸಿ
ತೆಗೆದು ತಂದಾ ಶಿರವನೆತ್ತಿ ನಲವಿಂ ತೋರಿ
ಬೊಗುಳ್ತ ಸವಣರ್ನೋಡಿರೋ ಎನುತ್ತಂ ಸಾರಿ
ಜಡಿಯುತೀ ಸವಣ ಗುನ್ನಿಗಳ ಕೈಕೊಂಬರೇ
ಮೃಡನ ಭಕ್ತರ್ಮುನಿಯಲೇನುಮಂ ಬಗೆವರೇ

ಎನುತಗ್ಗವಣಿ ಹೊನ್ನಿತಂದೆಗಳ್ಸಡಗರಿಸಿ
ಘನ ಸಂಭ್ರಮದಿ ಕುಣಿದು ಕುಕಿಲಿರುವುತಬ್ಬರಿಸಿ
ಶರಣರ್ಜಿನಪ್ರತಿಮೆಗಳನೆತ್ತಲನುವಾಗೆ
ಸುರಸಮಿತೆ ಪೂಮಳೆಗಳಂ ಕರೆಯಲನುವಾಗೆ
ತಂದು ಶಿವಲಿಂಗಪ್ರತಿಷ್ಠೆಯಂ ಮಾಳ್ಪಂತೆ
ತಂದು ಪೀಠಿಕೆಯೊಳಗೆ ಲಿಂಗಮನಿಳಿಪುವಂತೆ
ಇಳಿಪಿದರು ರಾಮತಂದೆಗಳ ದೇಹದ ಮೇಲೆ
ಇಳಿಪುವಲ್ಲಿಂ ಮುನ್ನ ಉರವಣಿಸುತಂ ಮೇಲೆ
ಒಂದು ಕೈಯಲಿ ತನ್ನ ಶಿರವ ಹತ್ತಿಸಿಕೊಳುತೆ
ಒಂದು ಕೈ ಕೂರಲಗನಾಯತವನೆಡೆಗೊಳುತೆ
ಮುರಿದೇಳ್ದು ಗರ್ಜಿಸುತೆ ದೆಸೆದೆಸೆಯ ನೋಡುತಂ
ಇರೆ ಕಂಡು ಸವಣವಡೆ ನಡನಡನೆ ನಡುಗುತಂ
ಆಯೇಳ್ದನಾಯೇಳ್ದನಮ್ಮಯ್ಯ ರಾಮಯ್ಯ
ಆಯೇಳ್ದನಾಯೇಳ್ದನೆಲೆಲೆಲೆ ರಾಮಯ್ಯ
ಆ ನಡೆದನತ್ತತ್ತಲೇಕಾಂತರಾಮಯ್ಯ
ಈ ನಡೆದನಿತ್ತಿತ್ತಲೇಕಾಂತರಾಮಯ್ಯ

ಎನುತ ಸವಣರ್ಪರಿಯಲೇಳ್ದು ಹರವರಿವರಿದು
ಮುನಿದು ಭುಗಿಭುಗಿಲೆನುತೆ ಹೊಗೆಯಿಲ್ಲದುರಿ ಉರಿದು

ಕೊರಲಗನೆತ್ತಿ ಭುಗಿಭುಗಿಲೆಂದು ತಿರುಪುತಂ
ಕಾರಮಿಂಚಿನ ತೆರದಿ ಹೊಳೆದು ಥಳಥಳಿಸುತಂ
ಪರಿದನಟ್ಟಿದನೋಡಿಸಿದನರುಹ ನಿಕರಮಂ
ತಿರುತಿರುಗಿ ಕೈವೀಸಿದಂ ಭಕ್ತನಿಕರಮಂ
ಕೈವೀಸಿ ತಮತಮಗೆ ವೀರರೆಲ್ಲರ್ನೇರಿದು
ಕೈವಾರದಿಂದೆ ಬಸದಿಗಳೊಳಗೆ ಪುಗುತಂದು
ಕಿತ್ತು ಬಿಸುಟರ್ಜಿನಪ್ರತಿಮೆಗಳನಲ್ಲಲ್ಲಿ
ಎತ್ತಿದರ್ಬತ್ತಲೆಯ ಬೊಂಬೆಗಳನಲ್ಲಲ್ಲಿ
ನಾನಾ ವಿಧದ ಸಂತಸಂ ಸಾರ್ದ ಕೂಟಮಂ
ಏನೆಂಬೆನಾ ಭಕ್ತರಾನಂದದಾಟಮಂ
ನಲಿನಲಿದು ನೆಗನೆಗೆದು ನಿಂದು ನಿಂದಾಡುತಂ
ಉಲಿದುಲಿದು ಪರಿಪರಿದು ಮುರಿಮುರಿದು ಹಿಗ್ಗುತಂ

ಇರ್ದ ಭಕ್ತರ ನೋಡುತೀಕ್ಷಿಸುತ ರಾಮಯ್ಯ
ಪೊರ್ದಿದವರಂ ಕರೆದನೇಕಾಂತ ರಾಮಯ್ಯ
ಆನಂದದಿಂದೆ ಶಿವಲಿಂಗಂಗಳಂ ತರಿಸಿ
ನಾನಾ ಮುಹೂರ್ತದಿಂದಂ ಲಿಂಗವಂ ನಿಲಿಸಿ
ಲಿಂಗ ಪ್ರತಿಷ್ಠೆಗಳನಲ್ಲಲ್ಲಿ ಮಾಡುತಿರೆ
ಹಿಂಗದೆ ಹರನನಕ್ಕರಿಂದ ಕೊಂಡಾಡುತಿರೆ
ಆಗಳೆರಗಿದವಲ್ಲಿ ಪೂಮಳೆಗಳೊಪ್ಪದಿಂ
ಮೇಗೆ ದುಂದುಭಿಶಂಖನಾದಂಗಳೊಪ್ಪದಿಂ
ಮೊಳಗಿದವು ಮಂಗಳ ಮೃದಂಗಂಗಳಲ್ಲಲ್ಲಿ
ತೊಳಗಿದವು ಧವಳಾತಪತ್ರ ಚಾಮರವಲ್ಲಿ
ಆ ಸಮಯದೊಳು ಸಕಲ ಭಕ್ತರೆಲ್ಲಂ ಪೊಗಳೆ
ಆಸುರದಿ ಹೊಗಳತೊಡಗಿದರುತ್ಸವಂ ನೆಗಳೆ
ಶಿವನ ಕೀರ್ತಿಗೆ ಮೂರ್ತಿಯಾದೆ ಎಲೆ ರಾಮಯ್ಯ
ಭವನ ಕೀರ್ತಿಯ ಲತೆಗಡರ್ಪಾದೆ ರಾಮಯ್ಯ
ಸಂದುದು ಸದಾಚಾರ ನಿನ್ನಿಂದೆ ರಾಮಯ್ಯ
ಓ ಸಂದುದೀಶ್ವರನಲ್ಲಿಗೇಕಾಂತರಾಮಯ್ಯ
ಸಂದ ಭಕ್ತರ ಕಣ್ಣ ಪುಣ್ಯವೇ ರಾಮಯ್ಯ



ಇಂದು ನಿನಗೆಣೆ ಯಾವನೇಕಾಂತರಾಮಯ್ಯ
ಭಾಪುರೇ ವೀರ ಸೋಮೇಶ್ವರನೆ ಕೀರ್ತಿಯೇ
ಭಾಪುಮಜಭಾಪೆನ್ನ ಭಕ್ತ ಚೂಡಾಮಣಿಯೆ

ಎಂದು ಪೊಗಳಲ್ಕೆ ಶಿವಭಕ್ತರ್ಗೆ ಕೈಮುಗಿದು
ನಿಂದು ಪೊಡಮಟ್ಟು ಬಲವಂದು ತನುಮಂ ಸುಗಿದು
ಶರಣರ್ಗೆ ಸಂತಸದ ಗಣಪರ್ವಮಂ ಮಾಡಿ
ಹರಿವರಿಯ ಹರುಷಂಗಳಿಂದಲೋಕುಳಿಯಾಡಿ
ಎಲ್ಲರ್ಗೆಯುಡಕೊಟ್ಟು ಮಿಗೆ ಸಂತಸಂ ಬಡಿಸಿ
ಎಲ್ಲರಂ ನಿಜನಿವಾಸಕ್ಕೆ ಬಿಜಯಂಗೈಸಿ
ಹೊನ್ನತಂದೆಗಳನಿದಿರ್ಗೊಂಡು ಪುರದೊಳ್ಮೆರಸಿ
ಮನ್ನಿಸುತ್ತವರ ಹುಲಿಗೆರೆಗೆ ಬಿಜಯಂಗೈಸಿ
ಇರುತಮಿರೆ ಬಂದ ಪುಷ್ಪಕದೊಳಗೆ ರಾಮಯ್ಯ
ಅರರೆ ಕುಳ್ಳಿರುತಿರ್ದನೇಕಾಂತರಾಮಯ್ಯ

ಆ ಗಣಂಗಳ್ಸಹಿತ ದೇವದುಂದುಭಿ ಸಹಿತ
ಮೇಗೆ ನೆಗೆದುದು ಸರ್ವವಾದ್ಯ ರಭಸಂ ಸಹಿತ
ನಡೆವುತಿರೆ ಗಗನದೊಳಗಿಳೆ ಕೌತುಕಂಬಡಲು
ಮೃಡಭಕ್ತರುತ್ಸವದಿ ಮಿಗೆ ಸಂತಸಂಬಡಲು
ಒಂದು ರಜತಾದ್ರಿಯ ಸಮೀಪಕ್ಕೆ ಸಾರುತಂ
ನಂದೀಶನಿರ್ದ ಬಾಗಿಲೊಳಿರ್ದು ಸಾರುತಂ
ಮೆಯ್ಯಿಕ್ಕುತಂ ಮೃಡನ ಪದತಳದೆಡೆಗೆ ಸಾರ್ದು
ಕೆಯ್ಯಂ ಮುಗಿದು ಮುಗಿದು ಪುಳಕಮುಣ್ಮುತೆ ಸಾರ್ದು
ಇರಲಭವನತಿಶಯ ಸ್ನೇಹದಿಂ ಬಿಗಿಯಪ್ಪಿ
ಗಿರಿಸುತೆಗೆ ಪೇಳುತಂ ಪ್ರೇಮದಿಂ ಬಿಗಿಯಪ್ಪಿ
ನೋಡು ಪಾರ್ವತಿ ಧೀರನಂ ಮಹಾ ಭಕ್ತನಂ
ನೋಡು ನಂದೀಶ ನಿಷ್ಠಾಭಕ್ತಿಯುಕ್ತನಂ
ಅಬ್ಬಲೂರೊಳ್ಸವಣರೊಳು ವಾದಿಸಿದರುಂಟೆ
ನಿಬ್ಬರದ ಭಾಷೆಯುಂ ಕೈಕೊಂಡರಿಂತುಂಟೆ
ಸಿರಿವನರಿದೇಳುದಿನವಿರಿಸಿ ಪಡೆದವರುಂಟೆ

ಉರವಣಿಸಿ ಎನ್ನ ವಿಶ್ವಾಸಿಸಿದರಿಂತುಂಟೆ
ಎಂದು ಬೋಳೈಸುತಂ ಗಣಕುಲಕೆ ತೋರುತಂ
ಸಂದಣಿಪ ಲೀಲೆಯಿಂ ಸುಖರಸದೊಳಾಳುತಂ
ರಾಮತಂದೆಗೆ ಒಲ್ದು ಗಣಪದವನೀವುತಂ
ಕಾಮಹರನಲ್ಲಿ ಸಾಮೀಪ್ಯ ಪದವೀವುತಂ
ಶಂಕರಂ ಶಶಿಧರಂ ಗಿರಿಜೇಶನೊಪ್ಪಿದಂ
ಪಂಕಜೋದ್ಭವ ಶಿರಃ ಕಂಜಕರನೊಪ್ಪಿದಂ
ಅಭಯಹಸ್ತಂ ಶೂಲಪಾಣಿ ಇಂತೊಪ್ಪಿದಂ
ವಿಭವದಿಂ ಡಮರುಘಂಟಾಹಸ್ತನೊಪ್ಪಿದಂ
ಹೆಂಪೆಸೆವಲಂಪಿನಿಂ ಪ್ರಮಥನಿಧಿಯೊಪ್ಪಿದಂ
ಹಂಪೆಯ ವಿರೂಪಾಕ್ಷಲಿಂಗನಿಂತೊಪ್ಪಿದಂ

ಕಂದ॥ ವಸುಧೆಯೊಳು ಜೈನರಂ ವಾ।
ದಿಸಿ ಗೆಲ್ದೇಕಾಂತರಾಮ ತಂದೆಯ ಶಿಶುವಂ॥
ದೊಸೆದೆನಗೆ ಕೃಪೆಯನೀವುದು।
ಶಶಿಯಂ ಸೂಡಿದನೆ ಹಂಪೆಯ ವಿರೂಪಾಕ್ಷಂ॥

---

# ನೈಜಕ್ಕವ್ವೆಯ ರಗಳೆ.

ಕಂದ॥ ಅರುಹ ಕುಲಕುಮುದ ಭಾಸ್ಕರ।
ನರುಹದ್ವಿಪ ಸಿಂಹ ಹಂಪೆಯ ವಿರೂಪಾಕ್ಷಂ।
ಶರಣರ್ಜಯ ಎನೆ ಮೆರೆದಂ।
ಪರಿವಳಿಗೆಯ ನೈಜಕಾಂಬೆಯಂ ಧಾರುಣಿಯೊಳ್॥

## ಉತ್ಸಾಹ ರಗಳೆ.

ಒಂದು ಶಿವಪುರಂ ವಿರಾಜಿಸಿರ್ಪುದುತ್ತರಾಭಿಯಲ್ಲಿ
ಇಂದುಧರನ ಹರನ ಶರಣ ವೃಂದದಿಂದಲೊಪ್ಪುತಲ್ಲಿ
ಶಿವನ ಭಕ್ತನೋರ್ವನಿರ್ಪನಾತನರಸಿ ಪರಮ ಭಕ್ತೆ
ಭವನ ಭಾವ ಭರಿತ ಚರಿತೆ ಸರ್ವ ಲಕ್ಷಣ ಪ್ರಯುಕ್ತೆ
ಅಂತವರ್ಗೆ ಪುಟ್ಟಿದಳ್ವಿವೇಕ ಸಿಧಿ ಯೆನಿಪ್ಪ ಬಾಲೆ
ಕಂತುಹರನ ನೊಲಿಸಬಲ್ಲ ನಿರ್ವಿಕಾರಯುಕ್ತ ಶೀಲೆ
ನಾಮವಾಗೆ ಓಜೆವೆತ್ತ ನೈಜಕವ್ವೆ ಎಂಬುದಾಗೆ
ಸೋಮಧರನ ಕಿವಿಗೆ ಸವಿಗಳೀವ ಕರ್ಣಪೂರವಾಗೆ
ಬೆಳೆಯುತಿರ್ದಳಿಂದುಕಳೆಗೆ ಮುಖದ ಬೆಳಗನೀವುತಲ್ಲಿ
ಬೆಳೆಯುತಿರ್ದಳಮಮ ನಿತ್ಯನೇಮದಚಲ ಭಕ್ತಿಯಲ್ಲಿ
ಬೆಳೆಯೆ ಬಾಲಲೀಲೆ ಕಳೆದು ಯೌವ್ವನಂ ತಳಿರ್ತು ತೋರೆ
ತೊಳಗುವಂಗರೇಖೆ ಕನಕಲತೆಯೊಲಂತೆಯೊಪ್ಪಿ ಮೀರೆ
ಪದತಳಂ ಸರಾಗ ನಳಿನ ದಳದ ಕಂಪನೇಳಿಸುತ್ತೆ
ಮುದದೆ ಗುಲ್ಫಗಳ್ಸುವರ್ಣ ಘುಟಿಕೆಯಂತೆ ರಂಜಿಸುತ್ತೆ
ಜಾನುದೇಶವಾನತರ್ಗನೂನ ಪದವನಿತ್ತು ತಣಿಪೆ
ಭೂನುತಂಗಳೂರುದಂಡವಲ್ಲಿ ರಂಭೆಯೊಳ್ಪನಳಿಪೆ
ಕೃತಕ ಗಿರಿಯ ಸಿರಿಯನೆಳೆದು ಸೆಳೆದುಕೊಂಡು ಜಘನ ಒಪ್ಪೆ
ಅತನುವಿಂಗೆ ಪುಗಃವೊಡಡ್ಡಲಾದ ತೆರದಿ ತ್ರಿವಳಿಯೊಪ್ಪೆ
ಸೊಕ್ಕಿ ಗುಣ್ಪನರಿವೊಡತನುಗರಿದೆನಿಪ್ಪ ನಾಭಿ ಎಸೆಯೆ
ಮಿಕ್ಕು ಮೀರಿ ಸೈತನಾಗಿ ಸೂಸದಡರ್ದ ಬಾಸೆ ಎಸೆಯೆ

ಮಿಸುಪ ಮೊಲೆ ಮನೋಜಕುಂಭಿ ಕುಂಭಯುಗಮನೆಯ್ದೆ ನೆಗಳೆ
ಎಸೆವ ತೋಳವೊಡಲನಂಗ ಖಡ್ಗಲತೆಯ ಹೊಗರನುಗುಳೆ
ವದನ ಮಂಡಲಂ ಮೃಗಾಂಕ ಬಿಂಬಮಂ ನಗುತ್ತ ಪಳಿಯೆ
ಸುದತಿಯಕ್ಷಿ ಮದನಬಾಣದುದಯಮಂ ನಿಮಿರ್ಚಿ ಕಳೆಯೆ
ಕುಂತಳಂ ಕವರ್ತು ಕೊರ್ವಿ ಕುಸುಮ ಗಂಧದಿಂದ ಮೆರೆಯೆ
ಇಂತು ವೈಜಕವ್ವೆಯೊಪ್ಪಿ ಯೌವ್ವನಂ ಪೊದಳ್ದು ಮೆರೆಯೆ

ತಂದೆ ಕಂಡು ಮಗಳರೂಪ ಯೌವ್ವನಕ್ಕೆ ನೇಹದಿಂದೆ
ಇಂದುಮುಖಿಗೆ ವರನನರಸವೇಳ್ಕುಮೆಂಬ ಚಿತ್ತದಿಂದೆ
ಇರುತಿರಲ್ಕೆ ಬಂದಳೂರ್ಗೆ ತನ್ನ ತಂಗಿ ನೋಡಲೆಂದು
ಪರಿವಳಿಗೆಯೊಳಿರ್ಪ ಜೈನನರಸಿ ಹರ್ಷದಿಂದೆ ಬಂದು
ಸುಖದೊಳಿರ್ದ ವೈಜಕವ್ವೆ ಇರವನಳ್ಕರಿಂದೆ ನೋಡಿ
ನಿಖಿಳ ಸಂಪದಕ್ಕೆ ನೆಲೆಯದಪ್ಪುದೆಂದು ಮತ್ತೆ ನೋಡಿ
ತನ್ನ ಪುತ್ರನಪ್ಪ ನೇಮಿಸೆಟ್ಟಿಗುಚಿತಮೀಕೆ ಯೆಂದು
ಉನ್ನತ ಪ್ರಮೋದೆ ಯೌವ್ವನಂ ಸಮಾನಮಪ್ಪುದೆಂದು
ನೆನೆದು ನೋಡಿದಳಣ್ಣನಲ್ಲಿ ನಲಿದು ಸಲುಗೆಯಿಂದೆ
ಮನದೊಳುತ್ಸಹಂಬಡುತ್ತೆ ಬೇಡಿದಳ್ಸ್ನೇಹದಿಂದೆ
ನಿನ್ನ ಮಗಳನೆನ್ನ ನಿಜತನೂಭವಂಗೆ ಕುಡುವುದೆಂದು
ಸನ್ನುತಂ ಸಲಕ್ಷಣಂ ವರಾನ್ವಿತಂ ಸಮಾನವೆಂದು
ನುಡಿಯೆ ಕೇಳ್ದು ಸೋದರಳಿಯನಾದೊಡೇನು ಭವಿಗೆ ಕೊಡೆನು
ಮೃಡನ ಭಕ್ತರಾವು ಸವಣಗುನ್ನಿಗಳ್ಗೆ ಹೆಣ್ಣ ಕುಡೆನು

ಎಂಬ ನುಡಿಗೆ ತಂಗಿಯೊಟ್ಟಿಯೊರಲಿಯುಳುತೆ ಬೇಡಿ ಕಾಡಿ
ನಂಬಿ ನೆಚ್ಚಿ ಬೆನ್ನ ಬಂದ ಸೋದರಕ್ಕೆ ಲೇಸು ಮಾಡಿ
ನುಡಿದರಪ್ಪುದಪ್ಪುದೆನ್ನ ಸೊಸೆಯನೆಂತು ಬಿಡುವಳಲ್ಲ
ಕುಡದೆ ನಿಂದೊಡೆನ್ನ ತನುವನಳಿವಳಲ್ಲದುಳಿವಳಲ್ಲ
ಎಂದು ನುಡಿಯುತೊಂದುಪಾಸವೆರಡುಪಾಸವಿರ್ದಳಲ್ಲಿ
ಅಂದು ನೆರೆಯ ಹೊರೆಯ ನಂಟರಿಷ್ಟರೆಲ್ಲ ನೆರೆವುತಲ್ಲಿ
ನೋಡು ನಿನ್ನ ತಂಗಿ ಪಟ್ಟಿರುತ್ತೆ ಸತ್ತೊಡಕಟ ಲೇಸೆ
ಪೇಡ ಜೀಯ ಜೈನರಾದೊಡೇನು ಮಗಳನೀವುದೈಸೆ



ಪಿರಿಯರಲ್ಲಿ ನಂಟರಲ್ಲಿ ನಲ್ಲರಲ್ಲಿ ಛಲವಿದೇಕೆ
ಗುರುವಿನಲ್ಲಿ ಗೋತ್ರದಲ್ಲಿ ತಂಗಿಯಲ್ಲಿ ಬಲ್ಪಿದೇಕೆ
ಎಂದು ಪೇಳೆ ಭಕ್ತನಂದು ಕಂದಿ ಕುಂದಿ ಮನವನಿಳುಪಿ
ನೊಂದು ಮುಯ್ಯೊಡಂಬಡುತ್ತೆ ಬಂಧುಜನವನೆಯ್ದೆ ಕಳುಪಿ
ಇಹದ ಕೀರ್ತಿಗಂಜಿ ಪರದ ಗತಿಯನೆಯ್ದೆ ಮರೆದು ಕಳೆದು
ಅಹಹ ಕುಡುವೆನೆಂಬ ಬುದ್ಧಿ ಚಿತ್ತದೊಳಗೆ ಬೇಗ ಹೊಳೆದು
ಕೊಟ್ಟೆನೇಳು ತಂಗಿ ಬಟ್ಟೆಗುತ್ತತನವಿದೇವುದೆಂದು
ಕೊಟ್ಟೆನವ್ವ ಪುತ್ರಿಯಂ ಸುಧರ್ಮದಿಂದೆ ರಕ್ಷಿಸೆಂದು

ನುಡಿಯೆ ಪುಳಕವೇಳಲೆಳ್ದು ಪರಮ ಹರುಷ ಚಿತ್ತೆಯಾಗಿ
ಒಡನೆ ಹುಟ್ಟಿದಣ್ಣನಂ ಸರಾಗದಿಂದಲಪ್ಪಿ ಪೋಗಿ
ಕರೆಯಿಸಲ್ಕೆ ಬಂದ ಜೋಯಿಸಂಗೆ ದಕ್ಷಿಣೆಗಳನಿತ್ತು
ಹರುಷದಿಂದೆ ಲಗ್ನಮಂ ಸಮೀಪ ದಿನದೊಳೆಯ್ದೆ ಪೊತ್ತು
ಇರೆ ವಿವಾಹಮಂಟಪಂ ಸವಿಸ್ತರಂ ನಿಮಿರ್ಚುತಲ್ಲಿ
ಅರರೆ ತಳಿರ ಮಕರತೋರಣಂಗಳೊಪ್ಪಿ ನೆಗೆದವಲ್ಲಿ
ನಡುವೆ ವೇದಿಕಾ ವಿಳಾಸವಾಗಳೊಪ್ಪುತಿರ್ದುದಲ್ಲಿ
ಮಡದಿಯರ್ಕಳೆಲ್ಲ ದಂಡೆತೊಂಡಿಲಿಂದೆ ಮೆರೆಯಲಲ್ಲಿ
ಇಂತು ಮದುವೆಯುತ್ಸವಂ ವಿರಾಜಿಸುತ್ತಮಿರ್ದುದಿತ್ತ

ಕಂತುಹರನ ಭಕ್ತೆ ವೈಜಕವ್ವೆ ನಿತ್ಯನೇಮದತ್ತ
ಬಂದು ಶಿವನ ಮುಂದೆ ನಿಂದು ಸೂಸಿ ಸುಯ್ದು ಗಾಸಿಯಾಗಿ
ಇಂದುಮೌಳಿ ಕರುಣಿಸೆನುತೆ ನಿತ್ಯನೇಮ ಹಸ್ತೆಯಾಗಿ
ದೇವ ಭವಿಗೆ ಮದುವೆ ಎಂದು ತಾಪಿಸಿರ್ದು ಏವೆನೈಯ್ಯ
ಭಾವಿಸಲ್ಕೆ ಭವಿಯ ಸೋಂಕದಾವ ತೆರದೊಳಾರ್ಪೆನೈಯ್ಯ
ತಿಳಿವಿನೊಳಗೆ ಪುಟ್ಟಿ ಮರವೆಯೊಳಗದೆಂತು ಪುಗುವೆನೈಯ್ಯ
ಬೆಳಗಿನೊಳಗೆ ಬೆಳೆದು ತಮದೊಳೆಂತು ಪೋಗಿ ಬೀಳ್ವೆನೈಯ್ಯ
ನಿನ್ನನರಿಯದಚ್ಚ ಬಚ್ಚ ಬರಿಯ ಭವಿಗಳಲ್ಲಿ ದೇವ
ನಿನ್ನನೆಂತು ನೆನವೆನೆಂತು ಮಾಳ್ಪೆನೆಂತದೆಂತು ದೇವ
ಏಕೆ ಭಕ್ತರೊಳಗೆ ಬರಿಸಿ ಭವಿಗಳೊಳಗೆ ನೂಂಕಿದಪ್ಪೆ
ಏಕೆ ನಿನ್ನನರುಪಿ ಯರಿಯಲೀಯದಿಂತು ನೋಡುತಪ್ಪೆ

ಕರುಣಿ ಎಂಬರಭವ ಕರುಣವಿಲ್ಲದಂತಿರಿಪ್ಪಿರಯ್ಯ
ಕರುಣಿ ಯೊರಲುತಿರ್ದೆನೆನ್ನನಕ್ಕಟಾ ನಿರೀಕ್ಷಿಸಯ್ಯ
ದೇವ ಚಂದ್ರಮೌಳಿ ಶೂಲಿ ಗರಳಕಂಠ ಕರುಣಿಸಯ್ಯ
ದೇವ ಸಲಿಲಶಯನ ನಯನ ಚರಣಕಮಲ ಕರುಣಿಸಯ್ಯ

ಎಂದು ಪುಯ್ಯಲಿಡುವ ಪುಯ್ಯಲಂ ಪುರಾರಿಯಾಲಿಸುತ್ತೆ
ಬಂದು ವೈಜಕವ್ವೆಗೊಂದು ಮರಹನಲ್ಲಿ ಕೇಲಿಸುತ್ತೆ
ಕನಸಿನೊಳಗೆ ನಿಂದು ವೈಜಕವ್ವೆ ನಿನಗೆ ಚಿಂತೆ ಬೇಡ
ಅನುದಿನಂ ಸಮೀಪದಿಂದ ನಗಲೆನವ್ವ ನಂಬು ಬೇಡ
ಮದುವೆಯಾಗಿ ಪೋಗು ಮಗಳೆ ಮರೆವುದಿಲ್ಲ ನಿನ್ನನೆಂದು
ಮದನವೈರಿ ಕರುಣದಿಂದೆ ನಿಂದು ಬೆಸಸಿ ಪೋಗಲಂದು
ಮೆಲ್ಲನೆಚ್ಚರೊಳಗೆ ಸಂದು ವೈಜಕವ್ವೆ ತಿಳಿದು ನೋಡಿ
ಅಲ್ಲಿಗಲ್ಲಿಗಡರ್ದ ನಳನಳಿಪ್ಪ ಪುಳಕದೊಳಗೆ ಕೂಡಿ
ಶಂಭು ಬೆಸಸಿತಕ್ಕೆ ಮನವನಿಂಬುಗೈದು ನಂಬಿ ನಚ್ಚಿ
ಡಂಭರಹಿತೆ ಗರ್ವರಹಿತೆ ಜೈನರಹಿತೆ ನಚ್ಚಿ ಮೆಚ್ಚಿ
ಇರೆ ವಿವಾಹಮುತ್ಸಹಂ ವಿರಾಜಿಸುತ್ತಮಿರ್ದುದಲ್ಲಿ
ಕರುಣಿಯರ್ಕಳೆಸೆವ ಸಿಂಗರಂಗಳೊಪ್ಪುತಿರ್ದುದಲ್ಲಿ
ಅಗಳೆಲ್ಲ ತೆರದ ಸಂಭ್ರಮಂಗಳೊಳಗೆ ನಲಿದು ಬಂದು
ರಾಗದಿಂದೆ ಮದುವೆ ಮಂಟಪಾಂತರಂಗದೊಳಗೆ ನಿಂದು
ಸಕಲ ವಸ್ತು ನಿಕರ ಹಸ್ತವಾದ ಬಂಧುಜನಗಳೊಳಗೆ
ಸುಕರವೆನಿಪ ಮುಕುರಕಳಶಲಿಸಿತಲಲನೆಯರ್ಕಳೊಳಗೆ
ಮಂನಿರಲ್ಕೆ ವೈಜಕವ್ವೆಗೊಪ್ಪಿ ಸಿಂಗರಂಗಳಾಗೆ
ತರುಣಿಯರ್ಕಳಿಂಬುಗೊಂಡು ಬರ್ಪ ಗಾಡಿ ಗಮಕವಾಗೆ
ತಂದು ತಂಡುಲಂಗಳೊಳಗೆ ಬೇರೆ ಬೇರೆ ನಿಲಿಸಲಲ್ಲಿ
ಅಂದು ನಡುವೆ ತೆರೆ ವಿರಾಜಿಸಲ್ಕೆ ಬಂಧುನಿಕರವಲ್ಲಿ
ಆಯತಪ್ರಣಾದ ಚಿತ್ರರಾಲಿಸುತ್ತೆ ನೋಡೆ ನೋಡೆ
ಜೋಯಿಸನ ಮುಹೂರ್ತ ವಚನದೊಡನೆ ತೆರೆಗಳಲ್ಲಿ ಕೂಡೆ
ವೈಜಕವ್ವೆಗಳ್ಗೆ ಸೋಲ್ತು ನೇಮಿಸೆಟ್ಟಿಯೊಪ್ಪಲಾಗೆ
ಮೂಜಗಂಗಳರಿಯೆ ಮುಂದೆ ಮೆರೆವುದಕ್ಕೆ ಚಿನ್ನವಾಗೆ



ವರ ಸುವಾಸಿನೀ ಜನಂಗಳೆತ್ತು ವಾರತಿಗಳು ಮೆರೆಯೆ
ಪರಸುತಿರ್ಪ ಪರಕೆ ಮಂಗಳಂಗಳಂ ನಿಮಿರ್ಚೆ ಕರೆಯೆ
ಇಂತು ಮದುವೆ ಬಳೆಯುತಿರೆ ಚತುರ್ಥಿಯಂ ಸಡಿಲ್ಚಿ ಕಳೆದು

ಮುಂತೆ ಪರಿವಳಿಗೆಗೆ ನಡೆದು ಪೊಕ್ಕು ಸುಖವನೊಲ್ದು ತಳೆದು
ತಮದ ನಡುವೆ ನಿರ್ಮಳ ಪ್ರಭಾಂತರಾಂಶು ಮಿರ್ಪತೆರದಿ
ಅಮಮ ತರುಗಳೊಳಗೆ ಚಂದನಂ ವಿರಾಜಿಸಿರ್ಪ ತೆರದಿ
ನೇಮಿಸೆಟ್ಟಿಯೊಡನೆ ವೈಜಕವ್ವೆ ಸುಖದೊಳೊಂದಿರುತ್ತೆ
ಕಾಮಹರನೊಳಗೆ ನೆನೆಯುತೊಳಗೆ ಕಂಡು ಪೂಜಿಸುತ್ತೆ
ಭಸಿತ ರುದ್ರರಕ್ಷೆಯಂ ಮನಶ್ಶರೀರದೊಳಗೆ ತಳೆದು
ಮುಸಿವು ಕಾಮವಾಸೆ ಲೋಭವೆಂಬ ಕಸವನುಡುಗಿ ಕಳೆದು
ಹೃದಯ ನಿಳಯಕಮಳವಳಯ ಕರ್ಣಿಕಾಸುಪೀಠದೊಳಗೆ
ಸದಮಳ ಪ್ರಕಾಶರಾಶಿ ರೂಪುಲಿಂಗ ಒಳಗೆ ತೊಳಗೆ
ಮನದ ಪುಷ್ಪ ಪೂಜೆ ನೆಗಳೆ ನೇಹದುಸಿರ ಧೂಪವೆಸೆಯೆ
ನೆನಹ ನರಿವಿನಚ್ಚ ಬೆಳಗಿನ ಪ್ರಕಾಶ ದೀಪವೆಸೆಯೆ
ಭಕ್ತಿಯೋಗರಂ ವಿರಾಜಿಸಲ್ಕೆ ಶಿವನನೆಯ್ದೆ ತಣಿಪೆ
ಮುಕ್ತಿ ಸುಖದೊಳಿಂತು ಬಾಳುತಿರ್ಪಳಖಿಳ ಭವವನಿಳಿಪೆ
ಜಲದ ಜಲಜದಂತೆ ಪವನನಂತೆ ತರಣಿ ಕಿರಣದಂತೆ
ತಿಲದ ತೈಲದಂತೆ ವನ್ಹಿಯಂತೆ ಯಾತ್ಮತೇಜದಂತೆ
ಜೈನರೊಳಗೆ ಹೊದ್ದಿಹೊದ್ದದಿರ್ಪಳಮಮ ನಿರ್ಮಳಾಂಗಿ
ದಾನನಿಧಿ ನವೀನ ಭಕ್ತೆ ಪರಮ ಶೀಲೆ ಸುರುಚಿರಾಂಗಿ
ವಿಮಳಭಕ್ತೆ ಶಾಂತಿಯುಕ್ತೆ ಯತಿವಿರತೆ ವೈಜಕವ್ವೆ
ಅಮಮ ಗುಪ್ತೆ ಭವಸಮಾಪ್ತೆ ಶೈವಭಕ್ತೆ ವೈಜಕವ್ವೆ
ಇಂತೆನಿಪ್ಪ ಗುಣಗಣಕ್ಕೆ ನಿಳಯವೆನಿಸಿ ನೆನೆಯುತಿರ್ದು
ಸಂತತಂ ಪುರಾರಿಯಂ ಸರಾಗದಿಂದೆ ಬಯಸುತಿರ್ದು
ದೇವ ಭವಿಗಳೊಳಗಣಿರವಿದೆಂದು ಮಾಣ್ಬುದೆಂದೆನುತ್ತೆ
ದೇವ ನಿನ್ನನೆನ್ನ ಕಣ್ಗಳಾರೆ ಕಾಣ್ಬೆನೆಂದೆನುತ್ತೆ
ದೇವ ಚಿತ್ತವೃತ್ತಿ ತಣಿಯೆ ಪೂಜಿಸುವೆನದೆಂದೆನುತ್ತೆ
ದೇವ ಜೈನರೊಳಗೆ ಸಿಲ್ಕಿದೆಂ ಪುರಾರಿ ಬಿಡಿಸೆನುತ್ತೆ

ಇಂತು ಶಂಕರಂಗೆ ಸಾರಿ ತೋರಿ ಮೀರಿ ದೂರಿಸುತ್ತೆ
ಚಿಂತೆ ಬಲಿಯೆ ಭಕ್ತಿ ನಲಿಯೆ ಶಂಭು ನಲಿಯೆ ಭಾವಿಸುತ್ತೆ

ಇರುತಿರಲ್ಕೆ ನೇಮಿಸೆಟ್ಟಿ ಹರುಷದಿಂದೆ ಮನೆಗೆ ಬಂದು
ಕರೆದು ವೈಜಕವ್ವೆ ಕೇಳ ಸಕಳ ಋಷಿಗಳೆಲ್ಲ ನೆರೆದು
ಚರಿಗೆ ಮಾಡಿದಪ್ಪರಿಲ್ಲಿ ಬೋನಮಂ ವಿರಾಜಿಸೆಂದು
ಸರಸ ವಸ್ತು ನಿಕರಮಂ ಸರಾಗದಿಂದೆ ಮುಂದೆ ತಂದು
ತೋರಿಕೊಟ್ಟು ವೈಜಕವ್ವೆಗಿಸಿದೆನಿಪ್ಪ ಮಾತನಾಡಿ
ಮೀರದಂತೆ ಮುಳಿಯದಂತೆ ಬೋಳವಣೆಯನೆಯ್ದೆ ಕೂಡಿ
ಮಾಡುತಿರ್ದಳಲ್ಲಿ ಬೋನಮಂ ಮಹೇಶಭಕ್ತಿಯುಕ್ತೆ
ನೋಡೆ ನೋಡೆ ಮೃಡ ವಿವೇಕನಿಧಿ ದಯಾಂಬುನಿಧಿ ವಿರಕ್ತೆ

ಹಾಲಲವುಗು ಹಾಲಲುಂಡೆ ಹಾಲಮಂಡಿಗೆಗಳನಟ್ಟು
ಮೇಲೆನಿಪ್ಪ ತರಗಪೂಷಣಂಬುಮಂ ತೆರಳ್ಕೆ ಇಟ್ಟು
ಲಡ್ಡುಗೆಗಳನೆಸೆವ ಬೀಸುಹೊರಿಗೆಗಳನೆಯ್ದೆ ಸಾರ್ಚೆ
ಇಡ್ಡಲಿಗೆಯ ನಣ್ಣಿಪಾಲ ಪಾಯಸಂಗಳಂ ನಿಮಿರ್ಚೆ
ಚಂದ್ರಿಕಾಸುಬೀಜವೆನಿಪ ಕಳವೆಯೋಗರಂಗಳಾಗೆ
ಸಾಂದ್ರ ರುಚಿಯ ಕಂಪನಾಂತ ಶಾಕಪಾಕ ತತಿಯುಮಾಗೆ
ಕಿವಿಗೆ ಕಣ್ಗೆ ಜಿಹ್ವೆಗೈದೆ ನಾಸಿಕಕ್ಕೆ ತೀವಿ ಮೆರೆವ
ರಪದ ಚೆಲ್ವ ಮೃದುಸುಗಂಧರುಚಿಗಳಿಂದೆ ಸವಿಗಳೊರಿವ
ಮಧುರವಾಮ್ಲ ಕಟುಕ ತಿಕ್ತ ಲವಣ ಕೈಪೆ ಹೆಸರನುಳ್ಳ
ಮಧುಗೆ ವಿಧುಗೆ ಸುಧೆಗೆ ಮಿಗಿಲೆನಿಪ್ಪ ರುಚಿಯ ರೂಪನುಳ್ಳ
ಸಕಲ ಸುಖವನಾಂತ ಷಡುರಸಾಯನಂಗಳೊಪ್ಪ ಮಾಡಿ
ಸುಕರ ಚಿತ್ತೆ ಸಚ್ಚರಿತ್ರೆ ವೈಜಕವ್ವೆ ಮಾಡಿ ನೋಡಿ

ಅಕ್ಕಟಾ ಸುವಸ್ತುವಂ ಮಹೇಶ ನಿನಗೆ ಸಲಿಸಲಿಲ್ಲ
ತಕ್ಕ ಭಕ್ತವಿತತಿಗೆಯ್ದೆ ತವಕದಿಂದೆ ತಣಿಸಲಿಲ್ಲ
ಇಂತು ಮಾಡಿದೆಯ್ಯ ಎನ್ನ ತಂದೆ ಜೈನರೊಳಗೆ ಕೂಡಿ
ಕಂತು ವೈರಿ ನಿನಗೆ ಭಕ್ತಿ ಮಾಡಲಿಲ್ಲದಂತೆ ಮಾಡಿ
ಇಂತಿದಂ ಪುರಾರಿ ನಿಮ್ಮನರಿಯದಚ್ಚ ಪಾಪಿಗಳ್ಗೆ



ಎಂತು ಮಾಡಿ ನೋಡಿ ಕುಡುವೆನಯ್ಯ ಸವಣಗುನ್ನಿಗಳ್ಗೆ
ಎಂದಳಲ್ದು ಕಂದಿ ಕುಂದಿ ನೊಂದು ಕಣ್ಣನೀರನಿಕ್ಕೆ

ಬಂದು ತಾಗಿತಭವನಂ ಸಮರ್ಥ ಸತ್ಯ ಭಕ್ತಿಯುಕ್ತೆ
ತಾಗೆ ಶಂಭುವರಿದು ಮೆಚ್ಚಿ ಕರುಣದಿಂದೆ ಗಿರಿಜೆಗೆಂದ
ರಾಗವಲರಿ ನುಡಿದನಲ್ಲಿ ಕೇಳು ನಿನಗೆ ಪೇಳ್ವೆನೊಂದ
ವೈಜಕವ್ವೆಯಕ್ಕೆಯಂ ಸಡಿಲ್ಚಿ ಕೊಂಡು ಬರ್ಪೆನೆಂದು
ರಾಜಿಸುತ್ತೆ ದೇವ ಶರಣವೇಷದಿಂದೆ ಬರುತಲಂದು
ದಶಭುಜಂಗಳಂ ಭುಜದ್ವಯಂಗಳಾಗೆ ನಿರ್ಮಿಸುತ್ತೆ
ಎಸೆವ ಪಂಚಮುಖವನೊಂದು ವದನದೊಳಗೆ ರಂಜಿಸುತ್ತೆ
ಹೆರೆಯನಲ್ಲಿ ಕಿರಿಯ ಜಡೆಗೆ ಮಿಸುಪ ಕುಸುಮವಾಗಿ ಮಾಡಿ
ನೆರೆವ ಕೊರಲಗರಳಮಂ ಶರೀರವರ್ಣದೊಳಗೆ ಕೂಡಿ
ಪುಲಿದೊವಲ್ವಿಭೂತಿ ಭೂಷಣಂ ವಿಶೇಷವಾಗಲೊಪ್ಪೆ
ನಲಿದು ಕುಣಿವ ಕುಂಡಲಂಗಳುಭಯ ಗಂಡತಟದೊಳೊಪ್ಪೆ
ಸುಲಿದ ಪಲ್ಲ ಬೆಳಪ ಕಣ್ಗಳಭವನಲ್ಲಿ ಚೆಲ್ವುಗೊಂಡು
ನಲಿಯುತಜಕಪಾಲ ಪಾತ್ರೆಯೊಪ್ಪೆ ಕರದೊಳಾಂತುಕೊಂಡು
ಬಂದು ಪರಿವಳಿಗೆಯ ನೇಮಿಸೆಟ್ಟಿ ಇರ್ಪ ಮನೆಯ ಮುಂದೆ

ನಿಂದು ವೈಜಕವ್ವೆ ಕಾಣ್ಬ ಕೇಳ್ವ ತೆರದಿ ಕರುಣದಿಂದೆ
ಭವನ ವೇಷದಚ್ಚ ಶರಣವೇಷದಿಂದೆ ರಂಜಿಸುತ್ತೆ
ಶಿವನ ಕರುಣವಕ್ಕೆ ನಿಮಗೆ ಭಿಕ್ಷೆ ಈವುದೆಮಗೆನುತ್ತೆ
ಇರೆ ಸದರ್ಥೆ ವೈಜಕವ್ವೆ ಹರುಷದಿಂದೆ ಕೇಳುತಂದು
ಸರವನಾಲಿಸುತ್ತೆ ಕಿವಿಗೆ ಕಣ್ಗಳಾದ ತೆರದೆ ಬಂದು
ನೆನೆವ ಮನಕೆ ಕಾಮಧೇನುವಾದ ತೆರದಿ ಬಂದಿರಯ್ಯ
ಮನದ ಬಯಕೆ ಭಾವಿಸಲ್ಕೆ ರೂಪುಗೊಂಡ ತೆರದೊಳಯ್ಯಾ
ಎನುತೆ ಪುಳಕಿಸುತ್ತೆ ಕಂಪಿಸುತ್ತೆ ಪದದ ಮೇಲೆ ಬೀಳ್ದು
ವಿನುತ ಭಕ್ತೆ ಹರುಷಚಿತ್ತೆಯಾಗಿ ಬೇಗ ಮೆಲ್ಲನೇಳ್ದು
ದೇವ ಪಾತ್ರೆ ಕಿರಿದು ವಸ್ತು ಪಿರಿದದೆಂತು ನೊಳ್ಪೆನೆಂದು
ಭಾವಭಕ್ತಿಭರಿತೆ ತೀವುತಿರ್ದಳಲ್ಲಿ ತಂದು ತಂದು
ತಂದು ತೀವಲೊಳಕೊಳುತ್ತಲಿರ್ದುದಲ್ಲಿ ದೇವಪಾತ್ರೆ

ಅಂದು ಕೌತುಕಂಬಡುತ್ತಲಿಕ್ಕಿದಳ್ಸರೋಜನೇತ್ರೆ
ಒಳಗೆ ಶೀರೆ ಪಾತ್ರೆ ತೀವೆ ವೈಜಕವ್ವೆ ನೋಡಿ ನಲಿದು
ಎಳಸಿ ಹಿಗ್ಗಿ ಬಳಸಿ ಮೆಚ್ಚಿ ಹೆಚ್ಚಿ ನಚ್ಚಿ ಪವಣನರಿದು
ದೇವ ಪೋಗವೇಳ್ಪದಭವ ಪಸಿದಿರಿನ್ನು ಇರಲ್ಕೆವೇಡ
ದೇವ ಮತ್ತೆ ಭವಿಗಳಿಲ್ಲಿ ಬಂದು ಸುಳಿಯೆ ಕಾಣವೇಡ
ಎನೆ ವಿಭೂತಿಯಂ ಕೊಡುತ್ತೆ ಮಾತನಾಡಿ ಪೊಳ್ತುಗಳೆದು
ತನು ಮರುಳ್ವುದೇಕೆ ವೈಜಕವ್ವೆ ನಿನಗೆ ಚಿಂತೆ ಪಿರಿದು

ಎನುತಿರಲ್ಕೆ ಬರುತೆ ನೇಮಿಸೆಟ್ಟಿ ಋಷಿಯರೆಲ್ಲರಂದು
ಮನದೊಳತಿ ನಿರೋಧದಿಂದೆ ನೋಡೆ ನೋಡೆ ನೆಗೆದನಂದು
ನೆಗೆಯೆ ಋಷಿಯರೆಲ್ಲ ಮುಟ್ಟಿಘಡವಿದಾದುದೊಳ್ಳೆನೆಂದು
ಬಗೆಯೊಳತಿ ವಿಷಾದವೇರೆ ನೊಂದು ತಿರುಗಿ ಪೋಗಲಂದು
ಮನೆಗೆ ಬಂದು ನೇಮಿಸೆಟ್ಟಿ ಮುನಿದು ಮುಯ್ದು ನುಡಿದನಂದು
ವನಿತೆ ನೀನಿದೇಕೆ ಇಂತು ಮಾಡಿ ಎನ್ನನಿರಿದೆ ಎಂದು
ಋಷಿಯರೋಗರಂಗಳಂ ತಪಸ್ವಿಗಿಕ್ಕಿ ಕೆಡಿಸಿ ಕಳೆದೆ
ಹೊಸೆದ ಹುವ್ವಿನಂತೆ ಋಷಿಯರೆಲ್ಲ ಪಸಿದು ಪೋದರುಣದೆ
ಗೊರವನೆಂಜಲಾಯ್ತು ಮುಟ್ಟಿಘಡವನಿಂತು ಮಾಡಿ ನಿಂದೆ
ಅರುಹನ ವ್ರತಕ್ಕೆ ಪೊಲ್ಲಗೆಯ್ದು ಕುಂದನಿಂತು ತಂದೆ

ಎಂದ ನೇಮಿಸೆಟ್ಟಿಗಂದು ನುಡಿದಳೆಮ್ಮ ವೈಜಕವ್ವೆ
ಇಂದುಧರನ ಭಕ್ತಿಯುಕ್ತೆ ನಿಜದ ನೀರೆ ವೈಜಕವ್ವೆ
ಶಿವನ ನೊಸಲನಯನದಂಜಲೆಂಬುದರಿಯ ಲೋಕವೆಲ್ಲ
ಭವನ ಕರುಣದಿಂದಲಿರ್ಪುದೆಂಬುದರಿಯ ಭುವನವೆಲ್ಲ
ನೇಮಿಸೆಟ್ಟಿ ನೀನದಕ್ಕೆ ಮರುಳನಾಗಿ ಕೆಟ್ಟು ನುಡಿದೆ
ಭೂಮಿಯೊಳಗೆಯರುಹನೆಂದಡಾರದೆಲ್ಲಿ ಬರಿದೆ ಮುನಿದೆ
ವೇದದೊಳಗೆ ಶಾಸ್ತ್ರದೊಳಗೆ ನೋಡಲಿಲ್ಲ ನುಡಿಯಲಿಲ್ಲ
ಆದಿದೇವರಾದಿಯಲ್ಲಿ ಹೇಳಲಿಲ್ಲ ಕೇಳಲಿಲ್ಲ
ಬಯಲ ಬರಿಯ ಬೊಂಬೆಗಳ್ಗೆ ಭಕ್ತಿ ಮಾಡಿ ಮರುಗಲೇಕೆ
ನಯವಿಹೀನ ಪರದ ಗತಿಯ ನಳಿದು ಕೆಟ್ಟು ಪೋಗಲೇಕೆ



ಎಂದ ವೈಜಕವ್ವೆಗುತ್ತರಕ್ಕೆ ತೆರಹುಗಾಣದಿರ್ದು
ನೊಂದು ನೇಮಿಸೆಟ್ಟಿ ಕೋಪದಿಂದೆ ಬಂದು ಹತ್ತೆಸಾರ್ದು
ತನ್ನ ಭಾಗ್ಯ ಕುಸುಮಮಾಲೆಗಲಸಿ ಪೊಸೆದು ಬಿಸುಡುವಂತೆ
ತನ್ನ ಪುಣ್ಯ ಫಲವನಂದು ಜಡಿದು ಘಾಸಿ ಮಾಡುವಂತೆ
ಪಾಪಿ ಮುಟ್ಟಿ ಬಡಿದನಲ್ಲಿ ವೈಜಕವ್ವೆ ಸೆಡೆದು ನೋಯೆ
ಕೋಪಿ ಬಡಿದನಲ್ಲಿ ರಜತ ಗಿರಿಯೊಳಭವನೈದೆ ನೋಯೆ
ಬಡಿಯೆ ವೈಜಕವ್ವೆ ಶಿವನನಂದು ನೆನೆಯುತಿರ್ದಳಲ್ಲಿ
ಮೃಡನನಂತರಂಗದೊಳಗೆ ಭಾವಿಸುತ್ತಮಿರ್ದಳಲ್ಲಿ
ಇರಲಿರಲ್ಕೆ ಭಕ್ತೆನೋಯೆ ನೋಡಲಾರೆನೆಂಬ ತೆರದಿ
ತರಣಿ ಇಳಿದನಪರ ಜಳಧಿವಳಯದೊಳಗೆ ಮೆಲ್ಲನುರದಿ
ಇಳಿಯ ವೈಜಕವ್ವೆಯೊಡನೆ ವೇಳೆಗೊಂಡ ತೆರದಿ ಬಳಲೆ
ನಳಿನ ಸಮಿತಿ ಮುಗಿಯೆ ಕುಮುದವಲರೆ ಚಕ್ರವಾಕವಗಲೆ
ಕವಿಯೆ ತಮವನಂತರಂ ಸುತಾರಕಾಳಿ ಥಳಿಲನೊಗೆಯೆ
ನವಕರಂಗಳಿಂದೆ ಬೆಳಗುತೋಷಧೀಶನಂದು ನೆಗೆಯೆ
ವೈಜಕವ್ವೆ ನೊಂದು ಕಂದಿ ಕುಂದಿ ಮಧ್ಯನಿಶಿಯೊಳೆಯ್ದೆ
ರಾಜಶೇಖರಂಗೆ ಮುಯ್ಯಲಿಕ್ಕಿ ನೋವು ಶಿವನನೆಯ್ದೆ

ಕನಸಿನಲ್ಲಿ ಮುನ್ನ ಬಂದ ತೆರದಿ ಶಂಭು ಒಲ್ದು ಬಂದು
ಮನದ ಕೊನೆಯ ಮೊನೆಯ ಭಾವದಚಲದೀಪ್ತಿಯೊಳಗೆ ನಿಂದು
ನಿನಗೆ ಚಿಂತೆ ಬೇಡ ಬೇಡ ವೈಜಕವ್ವೆ ನಾಳೆ ನೋಡ
ಜಿನನ ಸಿರವ ನೊಡೆದು ಜಡಿದು ಮೂಡಿ ನಿಲ್ವೆ ನಂಜಬೇಡ
ಎಂದು ಬೆಸಸಿ ಪೋಗೆ ಮೆಲ್ಲನೆಚ್ಚರೊಳಗೆ ಸಂದು ತಿಳಿದು
ಇಂದುಧರನ ಕೃಪೆ ಇದೆಂದು ಹರುಷಚಿತ್ತೆ ಮನದೊಳರಿದು
ಇರೆ ಪುರಾರಿ ಜಿನನನೊಡೆದು ಮೂಡುವುದನೆ ನೋಳ್ಪೆನೆಂದು
ತರಣಿಯೊಗೆದನಲ್ಲಿ ವೈಜಕವ್ವೆಗಿತ್ತ ನಲವಿನಂದು
ಅರಿವುತೆಲ್ಲರರಿಯಲೆಂದು ಭಸಿತಮಂ ತೆರಳ್ಚಿ ಪೂಸಿ
ಅರಿಮರುಳ್ಗಳೆನಿಸಿ ಜೈನ ಕುಲವ ಕಲೆಗೆ ಹೇಸಿ
ಸುಲಿದ ಪಲ್ಲ ಸುಲಲಿತಾಂಗಿ ಧವಳ ವಸನದಮೃತ ಮೂರ್ತಿ
ಥಳದ ಲಲನೆ ನಲಿವಿನೊಲವು ಶಿವನ ಭವನ ಭುವನಕೀರ್ತಿ
ವೈಜಕವ್ವೆ ನಿಳಯದೊಳಗೆ ಸುಖದೊಳೊಪ್ಪುತಿರ್ದಳಿತ್ತ

ರಾಜಿಸುತ್ತ ಧರಣಿಯೊಳಗೆ ಜೈನರೆಲ್ಲ ಬಸದಿಯತ್ತ
ಬಂದು ಕದವನೊತ್ತಿ ತೆರೆಯದಿರ್ದೊಡಲ್ಲಿ ಸವಣರೆಲ್ಲ
ನಿಂದು ಕೌತುಕಂಬಡುತ್ತೆ ವಿಕೃತಿವೇಷನಿಹತರೆಲ್ಲ
ಹಾರೆ ದಬ್ಬಕಂಗಳಿಂದೆ ಒತ್ತಿ ಒತ್ತಿ ನೂಂಕಿ ಸೆಡೆಯೆ
ನೇರೆಯಿಲ್ಲದಚಲ ಕಠಿಣತರುಗಳಿಂದೆ ಒತ್ತಿ ಕೆಡೆಯೆ
ಮತ್ತ ಕರಿಗಳಿಂದ ಒತ್ತಿ ನೂಂಕಿಸುತ್ತೆ ಬಾಡಿ ಬಳ್ಕಿ
ಮತ್ತೆಯುಂ ಸಹಸ್ರವೇಳೆಯಂತುವಿರದೆ ನೂಂಕಿ ತಳ್ಕಿ
ಜೈನರೆಲ್ಲ ಜಂಗುಜರಿದು ಋಷಿಗಳೆಲ್ಲ ಮಟ್ಟವಾಗೆ
ಮಾನವಳಿದು ಮೌನ ಉಳಿದು ಹೀನ ಮನದ ದೀನರಾಗೆ
ಏಕೆ ಜಿನ ಕವಾಟವಿಕ್ಕಿತದ್ಭುತ ಪ್ರಕಾರವೆಂದು
ಏಕೆ ತಾನಿದಾದಪುದು ವಿರೋಧವೆಂದು ಮುಳಿದು ನೊಂದು
ಎಮ್ಮ ಪುರದೊಳಿಂದು ನಿನ್ನೆ ಧರ್ಮ ಹಾನಿ ಗೈದರುಂಟೆ
ಉಮ್ಮಳಕ್ಕೆ ಕಜ್ಜವೇನೊ ಜೀವತತಿಯನಳಿದರುಂಟೆ
ಇಲ್ಲದಿರ್ದೊಡರುಹನಿಂತು ಕದವನಿಕ್ಕಿಕೊಳ್ವನಲ್ಲ
ಎಲ್ಲರಂತೆ ಭೂತಹಿಂಸೆ ಮಾಳ್ಪ ಸಮಯವಿಂತಿದಲ್ಲ
ಜೀವತತಿಗೆ ನೋವು ಬಂದೊಡರುಹನಿಲ್ಲಿ ನಿಲ್ವನಲ್ಲ
ಭಾವಿಸಲ್ಕೆ ಸುಮ್ಮನಿರದೆ ಪೇಳಿರಮಗೆ ಜೈನರೆಲ್ಲ

ಎಂದೊಡಾ ನೇಮಿಸೆಟ್ಟಿ ನಿನ್ನೆ ಬಡಿದೆನೆನ್ನ ಸತಿಯ
ಇಂದು ಕದವನಿಕ್ಕಿತೇನನೆಂಬೆನೆನ್ನಗಲ್ದ ಮತಿಯ
ಎನಲು ಜೈನರೆಲ್ಲರುಂ ತೆರಳ್ದು ಕೂಡಿಕೊಂಡು ಬಂದು
ವನಿತೆ ವೈಜಕವ್ವೆಯಲ್ಲಿಗೆಲ್ಲರೈದೆ ಸಾರ್ದು ನಿಂದು
ಚರಣದಲ್ಲಿ ಬೀಳ್ದು ವೈಜಕವ್ವೆ ನಿನ್ನ ನೋವಿನಿಂದೆ
ಅರುಹನಲ್ಲಿ ಕದವನಿಕ್ಕಿಕೊಂಡು ಕಾಡುತಿರ್ದನಿಂದೆ
ಬಂದು ಕದವನಿಂದು ತೆರೆಯಿಸುತ್ತೆ ಕರುಣಿಸೆಂದು ನುಡಿಯೆ
ಇಂದುವದನೆ ನಗುತೆ ನುಡಿದಳಲ್ಲಿ ಪಿರಿಯರೆಯ್ದೆ ಸೆಡೆಯೆ
ಏಕೆ ಬಂದಿರಣ್ಣ ವೈಜಕವ್ವೆ ಎತ್ತಲರುಹನೆತ್ತ
ಲೋಕನಾಥನರುಹಶಿರವನೊಡೆದು ಮೂಡಿ ನಿಂದನತ್ತ
ನೀವು ಬೇಡಿಕೊಳಲಿದೇಕೆ ನಾನೆ ಬರ್ಪೆನೆನ್ನ ಗತಿಗೆ
ನೀವಿದೇಕೆ ಬೇಡವಾಯಸಂಗೊಳಲ್ಕೆ ನೋಡ ಧರೆಗೆ



ಪೊಸತು ಮಾಳ್ಪೆನೆನುತ ನಡೆದಳಭವ ಭಕ್ತೆ ವೈಜಕವ್ವೆ
ಅಸಮ ನಯನನಚಲಭಕ್ತಿ ನೆಲಸಿ ನಿಂದ ವೈಜಕವ್ವೆ
ಬಕನಿಕಾಯ ಮಧ್ಯದೊಳಗೆ ನಡೆವ ರಾಜಹಂಸಿಯಂತೆ
ಸಕಲ ಜನನ ಕುಲವ ನಡುವೆ ವೈಜಕವ್ವೆ ನಡೆಯುತಿಂತೆ

ಬಂದು ಶಿವಕವಾಟದಲ್ಲಿ ನಿಂದು ನೋಡುತಚಲಭಕ್ತೆ
ಇಂದು ವದನೆ ಸುಕೃತ ಸದನೆ ದೇವರಲ್ಲಿ ಸಹಜಯುಕ್ತೆ
ದೇವ ಸತ್ಯ ನಿತ್ಯ ಭರ್ಗ ಭೀಮ ರುದ್ರ ಕರುಣಿಸಯ್ಯ
ದೇವ ಸಕಲ ಭುವನ ತಿಮಿರಹರಣ ಕಿರಣ ಕರುಣಿಸಯ್ಯ
ದೇವ ಗಿರಿಶ ಗಿರಿಜೆಯರಸ ತತ್ವದರ್ಶ ಕರುಣಿಸಯ್ಯ
ದೇವ ಚಂದ್ರ ಸುರನದಿ ಕಳಾಪಜೂಟ ಕರುಣಿಸಯ್ಯ
ಎಂದು ಪೊಗಳ್ದ ತುತಿಗಳೊಡನೆ ಶಾಂತಿ ಕುಸುಮ ವರಲ್ದ ತೆರದಿ
ಇಂದುಧರನ ನಿಜದ ಪರಮ ಭಕ್ತಿ ತೆರಹುಗುಡುವ ತೆರದಿ
ಶಿವನ ಕಣ್ಗಳೆವೆಯ ಸಂಪುಟಂಗಳಲ್ಲಿ ಸಾರ್ವ ತೆರದಿ
ಭವನ ನಿಷ್ಠೆಯೊಗ್ಗು ಹಿಗ್ಗಿ ತನ್ನೊಳೆಡೆಯನೀವ ತೆರದಿ
ಶಿವಕವಾಟವಲ್ಲಿ ತೆರೆಯಲೊಳಗೆ ತೋರುತಿರ್ದುದರರೆ
ನವಮರೀಚಿ ಮಸಗಿ ದೆಸೆಗೆ ಪರಿದು ತೊಳಗಿ ಬೆಳಗಲರರೆ

ಜಿನನ ಶಿರವನೊಡೆದು ಶಿವನ ಲಿಂಗವಲ್ಲಿ ಬೆಳೆದು ನೆಗೆಯೆ
ಅನಘನಪ್ರಮಾಣ ನತುಳ ತೇಜ ನಮಳ ಕಾಂತಿಯೊಗೆಯೆ
ಜೈನರೆಲ್ಲ ಕಂಡು ಕಣ್ಗಳುರಿದು ತನುಗಳರಿದು ಬೀಳೆ
ಮಾನವಳಿದು ಗಂಡುಗೆಟ್ಟನೂನ ದುಃಖಜಲದೊಳಾಳೆ
ನೆರೆದ ಋಷಿಯರೆಲ್ಲ ಬೆಂದ ಮರದ ತೆರದಿ ಜಂಗುಜರಿಯೆ
ಪರಮಪಂಡಿತರ್ಕಳೆಲ್ಲ ಮೆಲ್ಲಮೆಲ್ಲನೇಳ್ದು ಸರಿಯೆ
ಆಗಳಲ್ಲಿ ವೈಜಕವ್ವೆ ಭವನನಪ್ಪಿ ಶಿವನನಪ್ಪಿ
ರಾಗವಲರೆ ಚರಣತಳವನಪ್ಪಿ ಮತ್ತೆ ಮಾಣದಪ್ಪಿ
ಪುಳಕವಡರೆ ಗದ್ಗದಂಗಳಡಸೆ ಬೆಮರಬಿಂದು ನೆರೆಯೆ
ಇಳಿವ ಸುಖಜಲಂ ವಿಲೋಚನಂಗಳಿಂದೆ ಸೂಸಿ ಪರಿಯೆ
ಕುಣಿದು ಮಣಿದು ತಣಿದು ತೇಗಿ ತೂಗಿ ಬೀಗಿ ವೈಜಕವ್ವೆ

ಆಣೆಯರಂಗಲುಕ್ಕಲಾಡಿ ಹಾಡಿ ನೋಡಿ ವೈಜಕವ್ವೆ
ತನ್ನ ಚರಣದಲ್ಲಿ ಬೀಳ್ದ ಸೇವಿಸೆಟ್ಟಿಗೆಂದಳಂದು
ಎನ್ನ ಸಂಗವಾದ ನಿನಗೆ ಪಾಪವಾಗಲಾಗದೆಂದು
ಕರುಣದಿಂದೆ ಭಸಿತವಿಟ್ಟು ಶೈವದೀಕ್ಷೆಯಂ ತೊಡರ್ಚಿ
ಪರಮ ಪಂಚವರ್ಣಕರ್ಣ ಕುಹರನಪ್ಪುದಂ ನಿಮಿರ್ಚಿ
ಎನ್ನ ಪೆಸರ ವೈಜನಾಥದೇವರಿವರ ನರ್ಚಿಸುವುದು
ಉನ್ನತ ಪ್ರಮೋದವಂ ಮಹೇಶನಲ್ಲಿ ಪೆರ್ಚಿಸುವುದು

ಎಂದು ನುಡಿವುತಿರಲಿರಲ್ಕೆ ಪುಷ್ಪವೃಷ್ಟಿ ಸುರಿದವಲ್ಲಿ
ದುಂದುಭಿ ಪ್ರಣಾದದೊಡನೆ ಶಂಖನಾದ ಒಗೆದುದಲ್ಲಿ
ನಡುವೆ ಬಂದು ಒಂದು ಪುಷ್ಪಕಂ ಜಗಂಗಳೆಲ್ಲ ಹೊಗಳೆ
ಮೃಡನ ಭಕ್ತಸಂಕುಳಕ್ಕೆ ಸಂತಸಂಗಳೆಯ್ದೆ ನೆಗಳೆ
ಭುವನವೆಲ್ಲ ಪೊಗಳೆ ವೈಜಕವ್ವೆ ಪುಷ್ಪಕದೊಳೆ ಪೊಕ್ಕು
ಶಿವಗಣಂಗಳೊಳಗೆ ಯಂಬರಕ್ಕೆ ನೆಗೆದು ಮೀರಿ ಮಿಕ್ಕು
ಬಂದು ನಂದಿನಾಥನಿರ್ಪ ಬಾಗಿಲಲ್ಲಿ ಭೊಂಕನಿಳಿದು
ಇಂದುಮೌಳಿ ಶರಣೆನುತ್ತೆ ಪುಳಕತತಿಯನೆಯ್ದೆ ತಳೆದು
ಎನ್ನ ನಿಧಿಯೆ ಎನ್ನ ಮಧುವೆ ಎನ್ನ ಸುಧೆಯೆ ಕರುಣಿಸೆಂದು
ಎನ್ನ ಗುರುವೆ ಪರಮ ಗುರುವೆ ಪರಕೆ ಪರವೆ ಕರುಣಿಸೆಂದು
ತಂದೆ ತಾಯೆ ಗತಿಯೆ ಮತಿಯೆ ಚಂದ್ರಚೂಡ ಕರುಣಿಸೆಂದು
ಬಂದು ವೈಜಕವ್ವೆ ಹರನ ಚರಣದಲ್ಲಿ ಬೀಳಲಂದು
ಶಂಭು ಒಸೆದು ನಲಿವುತೆತ್ತಿ ಶಿರದ ಮೇಲೆ ಕರವನಿಟ್ಟು
ಡಂಭರಹಿತ ನೊಲವುಸಹಿತ ವೀಕ್ಷಿಸುತ್ತೆ ಚಿತ್ತನಿಟ್ಟು
ಗಿರಿಜೆ ನೋಡ ವೈಜಕವ್ವೆಯಂತೆ ನಿಷ್ಠೆಯುಳ್ಳರುಂಟೆ
ಪರರ ಸಮಯದೊಳಗೆ ನಿಂದು ಭಕ್ತಿಯುಕ್ತೆಯಾದರುಂಟೆ
ಸವಿಗೆ ಸವಿಗಳೆನಿಪ ವಸ್ತು ಕುಲವನೆನ್ನೊಳಿತ್ತರುಂಟೇ
ಭುವನದೊಳಗೆ ಭಕ್ತಿಯಂ ವಿರಾಜಿಸಲ್ಕೆ ಮೆರೆದರುಂಟೆ
ಎಂದು ಕೊಂಡು ತೊನೆದು ರುದ್ರ ಕನ್ನಿಕಾನಿಯೋಗವಿತ್ತು
ಸಂದ ಗಣನಿಕಾಯದೊಳಗೆ ಸಕಳಸುಖವನೆಯ್ದೆ ಹೊತ್ತು
ರಜತ ಗಿರಿಯ ಪಿರಿಯ ನಿಳಯದೊಳಗೆ ಬೆಳಗುತಿರ್ದನಲ್ಲಿ



ನಿಜಮರೀಚಿ ಕೋಟಿ ರವಿಯ ರುಚಿಯ ನಿಳುಪಲಿರ್ದನಲ್ಲಿ
ಸುರನದೀ ವಿರಾಜಮಾನ ಜೂಟನೊಪ್ಪುತಿರ್ದನಲ್ಲಿ ।
ಗರಳ ಧಂಸು ಪರಶುಹರನು ತ್ರಿಪುರಹರನು ಒಪ್ಪುತಲ್ಲಿ
ಅಂಬಕತ್ರಯಂ ನಭಃ ಪುರಾರಿಯೊಪ್ಪುತಿರ್ದನಲ್ಲಿ
ನಂಬಿ ನೆನೆಯಲಿಂಬುಗೊಂಬ ಶಂಭುವೊಪ್ಪುತಿರ್ದನಲ್ಲಿ
ದೇವಗಣ ಸಹಸ್ರದೊಳಗೆ ಭಾಳನಯನನೊಪ್ಪುತಿರ್ದ
ದೇವನೆಮ್ಮ ಹಂಪೆಯರಸ ವಿರೂಪಾಕ್ಷನೊಪ್ಪುತಿರ್ದ

**ಕಂದ ॥** ಧರೆಹೊಗಳೆ ಕೃಪೆಯೊಳಾಹಾ ।
ಪರಿವಳಿಗೆಯ ವೈಜಕವ್ವೆಯಂ ಮೆರೆದಭವಂ ।
ಕರುಣಿಸುಗೆ ಭಕ್ತಿ ಸುಖವಂ ।
ಹರುಷಂ ಮಿಗಿಲೆಸೆವ ಹಂಪೆಯ ವಿರುಪಾಕ್ಷಂ ॥

—( ವೈಜಕವ್ವೆಯ ರಗಳೆ ಸಮಾಪ್ತಂ. )—

# ಕೆಂಭಾವಿ ಭೋಗಣ್ಣಗಳ ರಗಳೆ.

ಕಂದ ॥ ಅಂಬಿಕೆಯರಸಂ ನಾಟ್ಯಾ ।
ಡಂಬರ ಮುಖನೆಮ್ಮ ಹಂಪೆಯ ವಿರೂಪಾಕ್ಷಂ ।
ಸಾಂಬಂ ಧಾರುಣಿ ಪೊಗಳಲ್ ।
ಕೆಂಭಾವಿಯ ಭೋಗತಂದೆಯಂ ನೆರೆ ಮೆರೆದಂ ॥

## ರಗಳೆ

ವಸುಧಾ ತಳಕ್ಕೆ ರಂಜಿಪುದೊಂದು ಶಿವಪುರಂ ।
ಕುಸುಮ-ಶರ ಪುರ ಕಾಲಹರನ ನಚ್ಚಿನ ಪುರಂ
ಹರ ಭಕ್ತಿ ರಾಗ ರಸಕೂಪವೆಂಬಂತಿರಲ್
ಧರೆಗೆ ಕೆಂಭಾವಿ ಎಂಬಾ ನಾಮ ಒಪ್ಪಿರಲ್
ಅಲ್ಲಿಪ್ಪನೋರ್ವ ಭಕ್ತಂ ಜಂಗಮ ಪ್ರೇಮಿ
ಸಲ್ಲಲಿತನುತ್ತಮಂ ನಿರ್ದೋಷಿ ನಿಃಕಾಮಿ
ತನ್ನ ಪೆಸರಾ ಪುರಕೆ ಭೋಗಣ್ಣನೆಂದೆಸೆದು
ತನ್ನ ಶಿವಭಕ್ತಿ ಹರಚರಣಕ್ಕೆ ಕುಡಿವರಿದು
ಪಲ್ಲವಿಸಿ ಪೂತು ಫಲವಾಗುತಿರಲೊಪ್ಪುವಂ
ಎಲ್ಲ ತೆರದಿಂ ಶಿವನ ಪದಯುಗವನಪ್ಪುವಂ
ಶಿವಭಕ್ತರೊಳಗೆ ಜಾತಿಯ ವಿಚಾರಿಪುದಿಲ್ಲ
ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ
ಭಕ್ತರಂ ಕೊಂಡಾಡುತಿರ್ಪನಾನಂದದಿಂ
ಭಕ್ತರ್ಗೆ ಬೆಸಗೈವುತಿರ್ಪನುತ್ಸಾಹದಿಂ

ಇಂತು ಪಲವುಂ ಕಾಲವಿರುತಿರ್ಪ ಸಮಯದೊಳ್
ಸಂತತಂ ಶಿವಭಕ್ತಿ ಸಂದಣಿಪ ಛಂದದೊಳ್
ಒಂದು ದಿವಸಂ ಭೋಗತಂದೆ ಸುಖದಿಂದಿರಲ್
ಇಂದುಧರನೊಂದು ವೇಷಂ ಪೊತ್ತು ಬರುತಿರಲ್



ಹೆಗಲ ವೀಣೆ ಕೆಯ್ಯ ಸಂಬಳ ಗೋಲಿನೀಶ್ವರಂ
ಸೊಗಯಿಪ ವಿಭೂತಿ ರುದ್ರಾಕ್ಷಿಯ ಕೃಪಾಕರಂ
ಪಿರಿಯ ವೇಷಂಗೊಂಡು ಮನೆಯ ಮುಂದಂ ಸುಳಿಯೆ
ಶರಣನ ಮನಂ ನೋಡಲೆಂದು ಮುದದಿಂ ಸುಳಿಯೆ.

ಬಂದು ಭೋಗಣ್ಣನೈತಂದು ಮಿಗೆ ಕೈಗೆಡೆದು
ಮುಂದೈಸೆ, ಪುಳಕಂಗಳೊಪ್ಪೆ ಪದಮಂ ಪಿಡಿದು
ಕೆಲಬಲದ ವಿಪ್ರರ್ ನೆರೆದು ನೋಡುತಿರೆ
ಉಲಿದೆದ್ದು ತಮತಮಗೆ ಕೌತುಕಂಗೊಂಡುಮಿರೆ
ಕೈಗೊಟ್ಟು ಹರುಷದಿಂ ಮನೆಗೆ ನಡೆತಂದು
ನೈಗರೆದು ಕುಗ್ಗಿ ಭಯ ಭಕ್ತಿಯಿಂದಂ ನಿಂದು
ಉನ್ನತಾಸನಮಿತ್ತಾನಂದಮಂ ತಳೆದು
ಪನ್ನಗಾಭರಣನ ಪದದ್ವಯಮುಮಂ ತೊಳೆದು
ಪಾದೋದಕಂಗಳಂ ಕಣ್ಗಳೊಳಗೊತ್ತುತಂ
ಆದಂ ಮಿಗೆ ತನ್ನ ಹೃದಯದೊಳ್ ಸಾರ್ಚುತಂ
ದೇವಾರ್ಚನೆ ಮಾಡಲಾರೋಗಣೆಗೆ ಕೊಟ್ಟು
ಭಾವಿಸುತ್ತಿರಗೆ ಭಯಭಕ್ತಿಯಂ ಮುಂದಿಟ್ಟು
ಅವರ ಪ್ರಸಾದಮಂ ಸಾದರಂ ಮಿಗೆ ಕೊಂಡು
ಶಿವಭಕ್ತಿಯೊಳಗೆ ನೆರೆ ಸಂತಸಮನೆಡೆಗೊಂಡು

ಇತ್ತಲಾ ಊರ ಮಟ್ಟಿಯ ಮರುಳ್ಗಳ್ ನೆರೆದು
ಚಿತ್ರಜಾರಿಯನರಿಯದಜ್ಞರೆಲ್ಲರ್ ನೆರೆದು
ಸಡಗರಂ ಮಿಗೆ ಚಂದಿಮರಸನಲ್ಲಿಗೆ ಬಂದು
ಕಡು ಮೂರ್ಖರೆಲ್ಲರುಂ ಸಂಭ್ರಮಿಸುತಂ ನಿಂದು
ಕೇಳರಸ ನಿಮ್ಮೂರೊಳಿಂಲಾಗದೆಮಗೆಲ್ಲ
ಊಳಿಗಂ ಸಿರಿದರಸ ನಿಮ್ಮಾಜ್ಞೆ ಇನಿತಿಲ್ಲ
ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀರಿ
ತಮ್ಮ ಭಕ್ತಾಚಾರವೆಗ್ಗಳಂ ತಲೆಗೇರಿ
ಹೊಲೆಗಲಸಿ ನೆಲೆಗೆಟ್ಟು ಛಲ ಉಡುಗಿ ಕುಲವಳಿದು
ಹೊಲೆಯನೆನ್ನದೆ ಹಿರಿಯ ಭಕ್ತನೆಂದರಿದರಿಮು
ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ

ಸಂದ ವಿಪ್ರರ ಕರ್ಮವೆಲ್ಲವಂ ಪುಸಿಮಾಡಿ
ಹೊಲೆಯನಂ ಮುಂದಿಟ್ಟು ಕೊಂಡೈದನೆಲೆ ದೇವ
ಕುಲವೆಲ್ಲ ನಿರ್ಮೂಲವಾದುದಿಂದೆಲೆ ದೇವ
ಆತನಂ ಕರೆಯಿಸುದು ಪೊರಮಡಿಸುದಲ್ಲದೊಡೆ
ಆತನಿರಲಾನೆಲ್ಲ ಪೋದಪ್ಪೆವಲ್ಲದೊಡೆ

ಎನೆ ಚಂದಿಮರಸನಾ ಜಡರ ಮಾತಂ ಕೇಳ್ದು
ಮನದೊಳಗೆ ಮುಳಿವುತಂ ಕಡುಗೋಪಮಂ ತಾಳ್ದು
ಚಾರರಂ ಕಳುಹಿ ಭೋಗಣ್ಣನಂ ಕರೆಯಿಸಲ್
ಮಾರಾರಿಯಣುಗನೈತಂದಲ್ಲಿ ರಂಜಿಸಲ್
ಬೆಳ ಬೆಳಪ ಭಸಿತದಿಂ ತೊಳತೊಳಪಪಲ್ಗಳಿಂ
ನಳ ನಳಿಪ ಕಾಂತಿಯಿಂ ಥಳ ಥಳಿಪ ಕಣ್ಗಳಿಂ
ಲೆಕ್ಕಿಸದೆ ಕೈಕೊಳ್ಳದಕ್ಕರಿಂ ಬಂದಿರಲ್
ಮುಕ್ಕಣ್ಣನವತಾರವೆಂಬಂತೆ ನಿಂದಿರಲ್

ಏನಯ್ಯ ಪುರದೊಳಗೆ ಕೃತ್ಯಮಂ ಮಾಳ್ಪರೇ
ಏನಾದೊಡಂ ಪೊಲೆಯರಂ ಪುಗಿಸಿ ಬಾಳ್ಪರೇ
ಮನೆಯೊಳಗನಾಮಿಕರ ಪುಗಿಸುವರೆ ಭೋಗಯ್ಯ
ಮನವಾರೆ ಸಿಮ್ಮದಾಚರವೇ ಭೋಗಯ್ಯ

ಎನೆ ಪೊಲೆಯನಂ ಪುಗಿಸಲಿಲ್ಲ ಮನೆಯೊಳಗರಸ
ನಿನಗೆ ತಿಳಿವಿಲ್ಲ ತಿಳಿವಿಲ್ಲದೊಡೆ ಕೇಳರಸ
ನಾರಾಯಣ ಕ್ರಮಿಕರಂ ಪುಗಿಸಿದೆನೆ ಮನೆಗೆ
ಸೂರಿಭಟ್ಟರ ನೈದೆ ಪುಗಿಸಿದೆನೆ ಮನೆಯೊಳಗೆ
ಕೃಷ್ಣಪೆದ್ದಿಗಳನೊಮ್ಮೆಯು ಕರೆದು ಬಲ್ಲೆನೇ
ವಿಷ್ಣುಭಟ್ಟರನೊಮ್ಮೆಯುಂ ಸೋಂಕಿ ಬಲ್ಲೆನೇ
ಶಿವನನರಿಯದ ಹೊಲೆಯರಂ ಹೊಗಿಸೆ ನಾನರಸ
ಶಿವಭಕ್ತನಂ ಪುಗಿಸಿದೇಂ ತಪ್ಪೆ ಹೇಳರಸ
ಎಂದ ಮಾತಂ ಕೇಳ್ದು ವಿಪ್ರರುಂ ಹೊಲೆಯರೇ
ಚಂದವಾಯಿತು ಮುಟ್ಟಿಯುಟ್ಟರುಂ ಹೊಲೆಯರೇ
ಇಂತಪ್ಪ ಸಿತಗರೆಮ್ಮೂರೊಳಗಿರಲ್ವೇಡ



ಇಂತಪ್ಪರಂ ಕಂಡೊಡಂಜುವೆವಿರಲ್ವೇಡ
ಪೋಗೆಂದು ಚಂದಿಮರಸಂ ಜರಿದು ನುಡಿವುತಿರೆ
ಭೋಗಣ್ಣನಂ ಲಿಂಗವಂತನಂ ಜರಿವುತಿರೆ

ಕಡು ಮಾನಿ ಕಾಂತನುಂ ನುಡಿಯಂ ಮನಂಗೊಂಡು
ತಡವಿಲ್ಲದೂರಿಂದೆ ಪೊರಮಡಲ್ ನಡೆಗೊಂಡು
ಒಂದಡಿಯನಿಡೆ ಪುರದ ಲಿಂಗ ಒಡನುಬ್ಬುತಿರೆ
ಮುಂದಡಿಯನಿಡೆ ಪುರದ ಲಿಂಗ ಒಡನೇಳುತಿರೆ
ನಡೆಯೆ ನಡೆದವು ಪುರದ ಲಿಂಗಂಗಳೊಂದಾಗಿ
ಒಡನೊಡನೆ ಭೋಗಣ್ಣನೆಡಬಲದೊಳೊಂದಾಗಿ
ಅವನಿ ಸೋಂಕದ ತೆರದಿ ವಾಯು ಮೆಯ್ಯಾಂತು ಬರೆ
ತಮತಮಗೆ ತರುನಿಕರವೆಲ್ಲ ನೆಳಲಾಗಿ ಬರೆ
ತರುಫಲದಿನೊಸರ್ವ ರಸ ಶೀತಮಜ್ಜನವಾಗೆ
ಮರದಿಂದಲುದುರ್ವ ಹೂ ಪತ್ರೆ ಪುಷ್ಪಗಳಾಗೆ
ಎಳಸುತಿರೆ ಲಿಂಗ ತತಿಗಳ್ ನಡೆದವೀ ತೆರದಿ
ಇಳೆಯೊಳುರುಳ್ದವು ಕಾಶಿಗೈದುವ ತೆರದಿ
ಜಂಗಮವೆ ಲಿಂಗಕ್ಕೆ ಲಿಂಗವಾ ಜಂಗಮಕೆ
ಲಿಂಗ ಜಂಗಮವೆಂಬುದವಿಭೇದವೀ ಜಗಕೆ
ಎಂಬಂತೆ ಭೋಗಣ್ಣನೊಡನೊಡನೆ ಬರುತಮಿರೆ
ಕೆಂಭಾವಿಯೊಳಗುಳ್ಳ ಶಿವಲಿಂಗವೆಯ್ದೆ ಬರೆ
ಬಂದು ಲಿಂಗದ ಬಳಿಯಲೊಂದು ತರು ನೆಳಲಾಗೆ
ಬಂದುದಾ ಲಿಂಗದಾರವೆಯೆಂಬ ಚೆಲ್ವಾಗೆ
ಸತ್ಯ ಶರಣಂ ಲಿಂಗಕುಳದೊಳಗೆ ಬರುತಿರ್ದ
ನಿತ್ಯ ಲಿಂಗಾರ್ಚನೆಗೆ ಜಾಣನುಂ ಬರುತಿರ್ದ
ಭಕ್ತಿಯ ಫಳಂಗಳಂ ಸೇವಿಸುವ ಮಾಳ್ಕೆಯಿಂ
ಮುಕ್ತಿ ಇಂಡೆಗಳ ಪೋಣಿಸುತಿರ್ಪ ಮಾಳ್ಕೆಯಿಂ
ಶಿವಲಿಂಗ ಕುಳಮರರೆ ಭೋಗಣ್ಣನೀಕ್ಷಿಸುತೆ
ತವೆ ಮರುಗಿ ದೂರಿಸುತೆ ಕಂಪಿಸುತೆ ಚಿಂತಿಸುತೆ

ದೇವಿಯರನಗಲಿ ಇಂತೆನ್ನೊಡನೆ ಬರ್ಪರೇ
ದೇವಿಯಾಲಿಂಗನವನುಳಿದು ನಡೆತರ್ಪರೇ

ಚಳಿಗಾಳಿ ಬಿಸಿಲಿವಂ ನೋಡದೈತಪ್ಪರೇ
ಇಳೆಗೆ ಪೊಸತಿಂಗೆ ಪೊಸತಂ ಮಾಡಿ ನೋಳ್ಪರೇ
ಎಂದು ಶಿವಲಿಂಗಂಗಳಂ ಸಂತವಿಡುತಿರಲ್
ಛಂದದಿಂ ಶಿವಭಕ್ತಿ ಸಂದಣಿಸುತಿರುತಿರಲ್
ಬಲದ ಲಿಂಗಂಗಳಂ ಬಲದ ಕರದೊಳಗೊಪ್ಪಿ
ಕೆಲದ ಲಿಂಗಂಗಳಂ ಕೆಲದ ಕೆಯ್ಯೊಳಗಪ್ಪಿ
ಮುಂದಿರ್ದ ಲಿಂಗವನುರಸ್ಥಲದೊಳೊಲಿದಪ್ಪಿ
ಪಿಂದಿರ್ದ ಲಿಂಗಂಗಳಂ ಬೆನ್ನೊಳೊಲಿದಪ್ಪಿ
ಆಲೋಕನವೊಳಿರ್ದವಂ ಕಂಗಳಿಂದಪ್ಪಿ
ಮೇಲಿರ್ದ ಲಿಂಗಂಗಳುತ್ತಮಾಂಗದೊಳಪ್ಪಿ
ಸುತ್ತಿರ್ದ ಲಿಂಗಮಂ ಸುಳಿಸುಳಿದು ತಳ್ಕೈಸಿ
ಮುತ್ತಿರ್ದ ಲಿಂಗಮಂ ಮುರಿಮುರಿದು ಮೇಳೈಸಿ
ಫಾಳದೊಳಗೊತ್ತುತುಂ ಕಂಗಳೊಳಗೊತ್ತುತುಂ
ತೋಳೊಳಂ ಕೊಳ್ಳುತೆ ಕಪೋಳದೊಳಗೊತ್ತುತುಂ
ಎಲೆಯುದುರಿ ಬಿಸಲಾಗೆ ಮೆಯ್ಯೊಡ್ಡಿ ನೆಳಲಾಗೆ
ನಲಿನಲಿದು ತಳಿರ್ಗಳಂ ತಳಿವಿಡಿದ ತೆರನಾಗೆ
ಸುಜನ ಜನವಂದ್ಯ ಭೋಗಣ್ಣನತಿ ಹರುಷದಿಂ
ತ್ರಿಜಗದೇಕೈಕ ಲಿಂಗಂಗಳನುರಾಗದಿಂ
ಪೂಜೆಗೆಯ್ಯುತೆ ಭಕುತಿಯಾನಂದ ವೇಷದಿಂ
ಮಾಜಹರನರ್ಚನೆಯ ಮಾಡೆ ಸಂತೋಷದಿಂ
ಇಂತು ಶಿವಲಿಂಗಂಗಳಂ ಸಂತವಿಡುತಿರಲ್
ಸಂತತಂ ಶಿವಭಕ್ತಿ ಬೋಳೈಸುತಿರುತಿರಲ್

ಇತ್ತಲಾ ಕೆಂಭಾವಿಯೊಳಗೆ ವಿಪ್ರರ್ನೆರೆದು
ಸುತ್ತಲುಂ ನೇಮಮಂ ಮಾಡಲೆಂದೈತಂದು
ಶಿವನಿಳಯದೊಳಗೆ ಬರೆ ಪೀಠಂಗಳಿರೆ ಕಂಡು
ಶಿವಶಿವಾ ಎನುತೆ ಮನದೊಳ್ ಕೌತುಕಂಗೊಂಡು
ಚಂದಿಮರಸನ ಸವಿೂಪಕ್ಕೆಲ್ಲರುಂ ಬಂದು
ನಿಂದು ಪೇಳುತ್ತಲಿರ್ದರ್ ಕೌತುಕಮನಂದು
ದೇವಾಲಯಂಗಳೊಳ್ ಬರಿಯ ಪೀಠಂಗಳಿವೆ



ಭೂವಳಯದೊಳಗೆ ಇದರಿಂದದ್ಭುತಗಳೊಳವೆ
ಭೋಗಣ್ಣನೊಡನೆ ಪೋದವು ಲಿಂಗತತಿಯೆಲ್ಲ
ರಾಗದಿಂದೊಡನೊಕ್ಕಲಾದವಳ್ತಿಯೊಳೆಲ್ಲ
ಕರೆದು ಬಿಜಯಂಗೈಸಿ ತರ್ಪುದಾ ಭಕ್ತನಂ
ಹರನ ಪುರಹರನ ಘನ ಸಾಮರ್ಥ್ಯಯುಕ್ತನಂ
ಧರೆಯೊಳಗೆ ಕಟ್ಟಧಿಕ ಶಿವಲಿಂಗವಂತನಂ
ಹರಿಯಜರ್ಗರಿದೆನಿಪ ಘನಲಿಂಗವಂತನಂ
ಸಕಲ ಋಷಿಗಳ್ ಪೇಳ್ವ ಪುಣ್ಯಾಗ್ರಗಣ್ಯನಂ
ಸಕಲ ಲಿಂಗದ ನಡುವೆ ಬಾಳ್ವ ಭೋಗಣ್ಣನಂ
ತಾರದಿರ್ದೊಡೆ ಧರಣಿಯೊಗ್ಗುಡಿಪುದೆಲೆಯರಸಾ
ತಾರದೊಡೆ ವಾರಾಶಿ ಮೇರೆದಪ್ಪುದರಸಾ

ಎಂದು ನುಡಿಯಲ್ ಚಂದಿಮರಸನಾಗಂ ಕೇಳ್ದು
ಮಂದಮತಿಯಾದೆನೆನುತಂ ಚಿಂತೆಯಂ ತಾಳ್ದು
ಪರಿಜನಂ ಪುರಜನಂ ಶರಣಸಂತತಿವೆರಸಿ
ವಾರನಾರಿಯರ್ಕಳಶ ಕನ್ನಡಿ ತಳಿವೆರಸಿ
ಮುರುಜದಾವುಜದ ಕಿರುಘಟೆಯ ಕಾಳಿಕೆವೆರಸಿ
ಕರಡೆ ಕೌಸಾಳ ಶಂಖಪ್ರಣಾದಂವೆರಸಿ
ಎತ್ತಿರ್ದ ವೃಷಧ್ವಜಂ ನಭದೊಳಾಡುತ್ತಿರಲ್
ಸುತ್ತಿ ಕೇಳಿಸುವ ನಾದಂ ಕೊರ್ವಿ ಪಸರಿಸಲ್
ಪೊರಮಟ್ಟದಲ್ಲಲ್ಲಿ ಸಂಭ್ರಮಂ ಕೈಗಣ್ಮೆ
ಮೆರೆವ ನಾನಾ ವಾದ್ಯರಭಸಂಗಳುಂ ಪೊಣ್ಮೆ
ನಡೆದುದಾ ಗಿರಿಸುತೆಯ ಮನೆಯ ನಿಬ್ಬಣದಂತೆ
ನಡೆದುದಾ ಶಿವಲಿಂಗ ಯಾತ್ರಾ ನಿಕರದಂತೆ
ಬರುತಿರ್ದ ದೂರದಿಂ ಭೋಗಣ್ಣನಂ ಕಂಡು
ಸಾರ ಶಿವಲಿಂಗಂಗಳೊಳಗಿಪ್ಪಿನಂ ಕಂಡು
ಶಿವಲಿಂಗ ಸಾಮ್ರಾಜ್ಯ ಪರಮ ಸುಖಿಯಂ ಕಂಡು
ಶಿವಲಿಂಗ ಸಂಸಾರ ಲೋಲುಪ್ತನಂ ಕಂಡು
ಭಕ್ತಿ ಸುಖದೊಳ್ ಬೆರಸಿ ನೆಲಸಿರ್ಪನಂ ಕಂಡು
ಮುಕ್ತಿಯಂ ಮುಂಡಾಡುತೊಸೆದಿಪ್ಪನಂ ಕಂಡು

ಶಿವನನೊಚ್ಚತವಾಗಿ ಕೈಕೊಂಡನಂ ಕಂಡು
ತೆರಹಿಲ್ಲದಿರ್ಪ ಲಿಂಗದ ಬೀಡನೀಕ್ಷಿಸುತೆ
ಪೊರಗೆ ನಿಂದಿರ್ದ ದೂರದೊಳೆಲ್ಲ ಶಿವಧೀಡುತೆ

ಶಿವನನರಿಯದ ಪಾತಕರ್ಗೆ ಕರುಣಿಪುದಯ್ಯ
ಭವನನರಿಯದ ಭಾಗ್ಯಹೀನರ್ಗೆ ದಮ್ಮಯ್ಯ
ಕರುಣಿಸುವುದೆಮಗೆ ಕಾರುಣ್ಯನಿಧಿ ಭೋಗಣ್ಣ
ನರಕದೊಳ್ ಬಿದ್ದವರನೆತ್ತುವುದು ಭೋಗಣ್ಣ
ಮುಂದರಿಯದಜ್ಞರಿಗೆ ಬುದ್ಧಿಗೊಡು ಭೋಗಣ್ಣ
ಸಂದಣಿಸಿದೆಮ್ಮಮ್ಮ ಮಾಯವಂ ನೀಗಣ್ಣ
ಅನುಪಮೈಶ್ವರ್ಯ ಶಿವಲಿಂಗ ನಿಧಿ ಭೋಗಣ್ಣ
ಘನ ಘನ ಮಹಾಲಿಂಗ ನಿಧಿ ಭೋಗಣ್ಣ
ಎಂದು ಬಾಯಳಿವ ಕಿಂಕುರ್ವಾಣಮುಂ ಕೇಳ್ದು
ಇಂದುಧರನಣುಗನತಿ ಕಾರುಣ್ಯಮಂ ತಾಳ್ದು
ದೇವರಂ ದೇವಿಯರನೊಂದು ಮಾಡುವೆನೆನುತೆ
ದೇವಿಯರನಿಂತಗಲ್ದಿರಬಾರದೆಂದೆನುತೆ
ತಿರುಗಿದಂ ಶಿವಲಿಂಗ ಸಹಿತಲಾ ಭೋಗಣ್ಣ
ಉರವಣಿಸಿ ಬರುತಿರ್ದನಕ್ಕರಿಂ ಭೋಗಣ್ಣ
ಎನಗೆ ತನಗೆಂಬಂತೆ ಮುಂಚಿದವು ಶಿವಲಿಂಗ
ಅನುರಾಗದಿಂದೆ ಸಂಭ್ರಮಿಸಿದವು ಶಿವಲಿಂಗ
ಅಲ್ಲಿ ಭಕ್ತಂ ಬಂದನೆಂಬ ಸಂತೋಷದಿಂ
ಅಲ್ಲಲ್ಲಿ ಪರಿಪರಿಯಲಾನಂದ ವೇಷದಿಂ
ಭರದೊಳರಿಯದೆ ನಿಜಸ್ಥಾನಂಗಳಂ ಮರೆದು
ಪರಮ ಸುಖವೇರುತುರವಣಿಸುತಂ ಹೊಳೆಹೊಳೆದು
ಭೋಗಣ್ಣನಂ ಮೆರೆಯಿಸಲ್ಕೆ ಕುರುಹೆಂಬಂತೆ
ರಾಗದಿಂ ಸ್ಥಾನ ಪಲ್ಲಟಮುಮಾದಂತೆ
ಪಿರಿಯ ಪೀಠಂಗಳೊಳ್ ಸೂಕ್ಷ್ಮ ಶಿವಲಿಂಗವಿರೆ
ನೆರೆದು ಕಿರಿಯವರಲ್ಲಿ ಪಿರಿಯ ಶಿವಲಿಂಗವಿರೆ
ಶರಣ ಸಂಕುಳದ ಕೇಳಿಕೆಯ ವಾದ್ಯಂ ಮೆರೆಯೆ
ಶರಣನ ಮನದೊಳಿರ್ದ ಮುಳಿಸೆಂಬ ತೆರೆ ಸರಿಯೆ



ಆನಂದಜಲವೆ ಕೈನೀರಾಗಿ ಸುರಿವುತಿರೆ
ನಾನಾ ಶಿವೋತ್ಸವಂ ಕಿಕ್ಕಿರಿಂ ಪೆಚ್ಚುತಿರೆ
ಶಿವಶಕ್ತಿ ಪ್ರವಾಹವಾದುದಾ ಪುರದೊಳಗೆ
ಶಿವಭಕ್ತಿ ಸಂಪದಂ ಬೆಳೆದುದಾ ಪುರದೊಳಗೆ

ಆಗಳೆರಗಿದವು ಪೂವಿನ ಮಳೆಗಳಂತಲ್ಲಿ
ರಾಗದಿಂ ದುಂದುಭಿಧ್ವಾನ ಉಣ್ಮಿದವಲ್ಲಿ
ಬಂದುದೊಂದತಿಶಯದ ಪುಷ್ಪಕಂ ಸಭಯಿಂದೆ
ಸಂದಣಿಪ ನವರತ್ನಖಚಿತ ವಿಭ್ರಮದಿಂದೆ
ಆ ವಿಮಾನದ ನಡುವೆ ಭೋಗಣ್ಣನೊಪ್ಪಿದಂ
ಭೂವಳಯದೊಳು ಚೋದ್ಯವೆನೆ ಶರಣನೊಪ್ಪಿದಂ
ನಂಬಲರಿಯದ ಪಾರ್ವ ಕುಲವೆಲ್ಲ ನೋಡುತಿರೆ
ಡಂಬಳಿದು ಶರಣನಂ ಕೊಂಡಾಡಿ ನಲಿಯುತಿರೆ
ಚಂದಿಮರಸಂ ನೋಡಿ ಕೌತುಕಂ ಬಡುತಮಿರೆ
ನಿಂದು ಭಕ್ತವರ್ಗಸಗಿ ಕೆಯ್ಯೆತ್ತಿ ಕುಣಿವುತಿರೆ
ಚಂದ ಚಂದದ ವಾದ್ಯ ಮೊಳ್ಗೆ ಪೆಚ್ಚುತಿರೆ
ನೆಗೆದುದು ವಿಮಾನವಾ ಗಗನವಳಯಕ್ಕಾಗಿ
ನೆಗೆದುದತ್ತತ್ತಲಾ ದೇವಲೋಕಕ್ಕಾಗಿ
ಬಂದು ನಂದೀಶ್ವರನ ಬಾಗಿಲೊಳ್ ನಿಂದಿರ್ದು
ಇಂದುಧರನೋಲಗಕ್ಕೆತುಳ ಸುಖದಿಂ ಸಾರ್ದು
ಮೆಯ್ಯಿಕ್ಕಿ ಮೆಯ್ಯಿಕ್ಕಿ ಸುಖವಿಡಿದು ಪೊಡಮಟ್ಟು
ಕೆಯ್ಯೆತ್ತಿ ಕೆಯ್ಯೆತ್ತಿ ನಿಂದಿರ್ದು ಪೊಡಮಟ್ಟು
ಪಟ್ಟಿರ್ದ ಭೋಗಣ್ಣನಂ ಕಂಡು ಶಂಕರಂ
ನಿಷ್ಠೆವಂತನ ನೋಡಿ ನೋಡಿ ಶಶಿಶೇಖರಂ
ತನಿನೇಹದಿಂದಪ್ಪಿ ಮನದಕ್ಕರೆಡೆಗೊಂಡು
ಮನಸಿಜಹರಂ ನೋಡಿ ಕರುಣಸುಧೆ ಎಡೆಗೊಂಡು
ಶಿವಭಕ್ತರಿಂತು ನಂಬಿದರುಂಟೆ ನಂದೀಶ
ಶಿವಲಿಂಗ ಸೊಬಗರಿನ್ನಿಂತುಂಟೆ ನಂದೀಶ
ಎಂದು ಕೊಂಡಾಡುತುಂ ಸಾರೂಪ್ಯಪದವಿತ್ತು
ನಿಂದಿರ್ದ ಗಣಕುಲದ ಭರಭಾರಮಂ ನೊತ್ತು

ನತ ಸುರಾಸುರರಾಜಚರಣನಿಂತೊಪ್ಪಿದಂ
ಅತಿಶಯದ ಶ್ರೈಪದ ಸಾಮರ್ಥ್ಯನೊಪ್ಪಿದಂ
ನಂಬಿರ್ದ ಶರಣರೊಡನೊಕ್ಕಲಿಂತೊಪ್ಪಿದಂ
ಅಂಬರಸ್ಥಿರ ಕೇಶಪಾಶನಿಂತೊಪ್ಪಿದಂ
ಸುರರಾಜ ರಾಜರಾಜಾಭರಣನೊಪ್ಪಿದಂ
ಪುರಕಾಲ ಕಾಮವನದಾವಾಗ್ನಿಯೊಪ್ಪಿದಂ
ದೇವಗತಿ ದೇವಮತಿ ದೇವಪತಿಯೊಪ್ಪಿದಂ
ದೇವ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ ॥ ಶ್ರೀ ಗೌರೀವಲ್ಲಭನೆಮ
ಗೀಗೆ ಸದಾ ತನ್ನ ಚರಣ ಭಕ್ತಿಯ ನೊಲವಿಂ ।
ರಾಗಂ ಮಿಗೆ ಕಂಭಾವಿಯ
ಭೋಗಣ್ಣನ ಕಂದನೆಂದು ಹಂಪೆಯ ದೇವಂ ॥

# ಕೇಶಿರಾಜ ದಣ್ಣಾಯಕರ ರಗಳೆ.

ಕಂದ ॥ ತುರುಗಿದ ಪೊಸ ಕೆಂಜೆಡೆಗಳ ।
ಮಿರುಗುವ ಶಶಿಕಳೆಯ ಹಂಪೆಯ ವಿರೂಪಾಕ್ಷಂ ।
ಕರೆಗೊರಲಂ ಬಿಸುಗಣ್ಣಂ ।
ಪೊರೆದಂ ವಿಭುಕೇಶಿರಾಜದಣ್ಣಾಯಕರಂ ॥

## ರಗಳೆ

ಉತ್ತರ ದಿಶಾಭಾಗದೊಳಗೊಂದು ಶಿವಪುರಂ
ಚಿತ್ತರಿಸಲೆನ್ನಳವೆ ಮಿಗೆ ರಂಜಿಪುದು ಕರಂ
ಭಕ್ತಿಯನೊಳಗುಮಾಡಿ ಕೊಂಡಗುಳಿಯಂತೆಸೆದು
ಯುಕ್ತವೆನೆ ಕೊಂಡಗುಳಿಯೆಂಬ ಪೆಸರಿಂದೆಸೆವು
ಇರ್ಪ ಪುರದೊಳಗೋರ್ವ ಸದ್ಭಕ್ತನೊಪ್ಪುವಂ
ಸರ್ವಭೂಷಣನ ಭಕ್ತಿಯ ಬರವನಪ್ಪುವಂ
ತನ್ನ ನಾಮಂ ಕೇಶಿರಾಜನೆಂಬುದು ದಿಟಂ
ತನ್ನ ಶಿವಭಕ್ತಿಯುರವಣೆ ಧರಣಿಗುತ್ಕಟಂ
ಶ್ರೀ ವಿರೂಪಾಕ್ಷದೇವರ್ತಮಗೆ ಗುರುವಾಗಿ
ಭಾವಿಸುತಿರ್ಪನವರಂಘ್ರಿಯಂ ದೃಢವಾಗಿ
ಪ್ರಾಣನಾಥಂ ತನಗೆ ಸೋಮನಾಥಂ ನೋಡ
ಜ್ಞಾನರತ ನಿಜಮರಿತು ಬಿಡದರ್ಚಿಪಂ ನೋಡಿ
ಬುದ್ಧಿವಂತಂ ಸುರಾಸುರ ಗುರುಗಳಳವಲ್ಲ
ಶುದ್ಧಿಮಾನಗ್ನಿ ಜಲವಾಯು ಗಳಿಗಳವಲ್ಲ

ಇಂತಪ್ಪ ಕೇಶಿರಾಜಯ್ಯಂಗಳೊಪ್ಪದೊಳ್
ಕಂತುಹರನಂ ಪೊಗಳಲನುವಾಗಿ ಚಿತ್ತದೊಳ್
ಪುಳಕಂಗಳೊಡನೊಡನೆ ಬೆಮರ ಬಿಂದುಗಳೊಗೆಯೆ
ಇಳಿವ ಗದ್ಗದದೊಡನೆ ಕಂಪನಂ ಮಿಗೆ ನೆಗೆಯೆ
ಆನಂದ ಜಲದೊಡನೆ ಅಟ್ಟಹಾಸಂ ನಿಮಿರೆ

ಏನೆಂಬೆನುಬ್ಬರದ ಭಕ್ತಿ ಚಿತ್ತಮನಡರೆ
ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿ ಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖ ನಾಮದಭಿಧಾನ ಬುದ್ಧಿಯದಾಗೆ
ಶಿವ ವಾಕ್ಯ ಶಬ್ದ ಶುದ್ಧಿ ವ್ಯಾಕರಣ ಮಾಗೆ
ಶಿವಭಕ್ತಿ ವೃತ್ತಕ್ಕಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರ ಸ್ತೋತ್ರದೊಳೆ ಬಾಳುತಂ

ಇರಲಿತ್ತಲಾ ಕಲ್ಯಾಣ ಪುರದೊಳಗೆ
ಧರಣೀಶ ಪೆರ್ಮಾಡಿರಾಯನೋಲಗದೊಳಗೆ
ಹರುಷದಿಂ ಸಿಂಹಾಸನಾರೂಢನಾಗಿರ್ದು
ಪರಿಪರಿಯ ಮಂತ್ರಿಗಳ ಮೊಗವನೀಕ್ಷಿಸುತಿರ್ದು
ತನ್ನಯ ಮನಕ್ಕೆರಗುವನರೊರ್ವರಿಲ್ಲದಿರೆ
ತನ್ನಯ ಚಿತ್ತಕ್ಕೆ ತಕ್ಕನುಕೂಲರಿಲ್ಲದಿರೆ
ಬಂದನೋಲಗದೊಳಗೆ ಪಿರಿಯರ ಮೊಗಂ ನೋಡಿ
ಬಂದ ಬಂದಗ್ರಹಾರದ ವಿಪ್ರರಂ ನೋಡಿ
ನಿಮ್ಮಗ್ರರ್ಗಳೊಳ್ ಬುದ್ಧಿವಂತರಪ್ಪವರೊಳರೆ
ಸುಮ್ಮಾನಿಗಳ್ ಕೋವಿದರ್ ನೀತಿವಿದರೊಳರೆ
ಎನೆ ಕೊಂಡಗೂಳಿಯ ಮಹಾಜನಂಗಳ್ ಕೇಳ್ದು
ಮನವೊಸೆದು ನುಡಿದರತ್ಯುತ್ಸಾಹಮಂದಾಳ್ದು
ದೇವ ಎಮ್ಮಯ ಪುರದೊಳೊರ್ವ ಸಜ್ಜನರುಂಟು
ಭಾವಜ್ಞರತಿಸಿಯತರನುಪಮಾಸ್ಪದರುಂಟು
ಅವರ ನಾಮಂ ಕೇಶಿರಾಜನೆಂಬುದು ಧರೆಗೆ
ಅವರ ಶೀಲಂ ವಿಚಿತ್ರ ಸೊಗಯಿಪುದು ನಿಮಗೆ

ಎನೆ ನೃಪಂ ಚಾರರಂ ಕಳುಪಿಯವರಂ ಕರಿಸಿ
ಮನವೊಲ್ದು ಹರುಷದಿಂದುಚಿತಾಸನದೊಳಿರಿಸಿ
ನವರತ್ನ ಖಚಿತ ನವ್ಯಾಭರಣವಂ ತೊಡಿಸಿ



ನವದುಕೂಲ ಪ್ರಕರದಿಂದೆ ಮಿಗೆ ಸಿಂಗರಿಸಿ
ಸಮಗದ್ದುಗೆಯನಿತ್ತು ಚಮರಸಿಗುರಿಯನಿತ್ತು
ವಿಮಳತರವೆನಿಪ ಧವಳಛತ್ರಮವನಿಗಿತ್ತು
ಹಿರಿಯ ಪ್ರಧಾನಿಕೆಯನೊಲ್ಮೆಯಿಂದಂ ಕುಡಲ್
ಪುರದೊಳಗೆ ಪೊಸತೆನಿಸುವರಮನೆಯನಿಂಬಿಡಲ್
ಅಲ್ಲಿ ಪೊಕ್ಕರ್ ಕೇಶಿರಾಜದಣ್ಣಾಯಕರ್
ಸಲ್ಲೀಲೆಯಿಂದೆ ಪರಿಸಲ್ಕೆ ಗಣನಾಯಕರ್
ಗುಡಿಗಟ್ಟಿ ತೋರಣಂಗಟ್ಟಿ ಪಟ್ಟಣದೊಳಗೆ
ಮೃಡಭಕ್ತರೆಲ್ಲರ್ ಹಿಗ್ಗುತಿರೆ ಮನದೊಳಗೆ
ಅರಸ ಪೆರ್ಮಾಡಿರಾಯಂ ಸಂತಸಂಬಟ್ಟು
ಧರಣೀತಳದ ಸಂಪದಂ ತನ್ನ ಕೈವಟ್ಟು
ಮಂತ್ರಕ್ಕೆ ನೆರೆ ಕೇಶಿರಾಜ ದಣ್ಣಾಯಕರ್
ತಂತ್ರಕ್ಕೆ ಮಿಗೆ ಕೇಶಿರಾಜ ದಣ್ಣಾಯಕರ್
ಮಾತಿಗೆಲ್ಲಂ ಕೇಶಿರಾಜದಣ್ಣಾಯಕರ್
ನೀತಿಗೆಲ್ಲಂ ಕೇಶಿರಾಜದಣ್ಣಾಕರ್
ತಾವಾಗಿ ಪೆರ್ಮಾಡಿರಾಯ ನೊಲವಿಂದಿರಲ್
ಭೂವಧೂಧರನಾಗಿ ನಿಶ್ಚಿಂತಮಿರುತಿರಲ್

ಸಂಪದಂಮಿಗೆ ಕೇಶಿರಾಜದಣ್ಣಾಯಕರ್
ಸೊಂಪೇರಿ ಶರಣರಂ ನೋಡಿ ದಣ್ಣಾಯಕರ್
ಚಂದನಂ ಕಸ್ತುರಿಯ ಪರಿಮಳಂ ಶರಣರ್ಗೆ
ಸಂದ ಕರ್ಪೂರವಗಿಲ ಪರಿಮಳಂ ಶರಣರ್ಗೆ
ನಟಿಯಿಸುವ ನರ್ತನದ ನಾದಮುಂ ಶರಣರ್ಗೆ
ಕಟಕ ಮಕುಟಾದಿ ಕೇಯೂರಮುಂ ಶರಣರ್ಗೆ
ನೆನಹು ಶರಣರ ಮೇಲೆ ನಿಟ್ಟೆ ಶರಣರ ಮೇಲೆ
ಮುನಿಸು ಶರಣರ ಮೇಲೆ ನೇಹ ಶರಣರ ಮೇಲೆ
ಶರಣರೊಡತಣ ಸುಖಂ ಶರಣರೊಡತಣ ಲೀಲೆ
ಗುರುತರ ಸ್ನೇಹದಾತುರತೆ ಶರಣರ ಮೇಲೆ
ಕುಡಿಗೊಂಡು ಕೊಬ್ಬುತಿರಲಿರಲೊಂದು ದಿವಸದೊಳ್
ಎಡೆಗೊಂಡು ಶಿವಗೋಷ್ಠಿಯುಬ್ಬುತಿರೆ ಛಂದದೊಳ್

ಪಾಡುವ ಪುರಾತನರ ಗೀತದೊಳ್ಪರಗುತಂ
ಕೂಡೆ ಜಂಗಮದ ಚರಣಕ್ಕೆರಗಿ ನೆರೆವುತಂ
ಶಿವನ ಪದ್ಯವನೋದಿ ಮಿಗೆ ಬೀಗಿ ಬಿರಿವುತಂ
ಭವನ ಶರಣಾವಳಿಯ ಸಂಗದೊಳ್ಪರಗುತಂ
ಪುಳಕಾವಳಿಗಳಡರಲಾಹಾ ಎನುತ್ತಲ್ಲಿ
ಬೆಳೆವ ಪರಮಾನಂದದೊಳಗೆ ಹೆಚ್ಚುತ್ತಲ್ಲಿ
ಪಸಿವು ತೃಷೆ ನಿದ್ರೆನುಡಿ ನೋಟಂಗಳಂ ಮರೆದು
ದೆಸೆವಾಯುವಾಗಸಂ ಧರೆ ಎಂಬುದಂ ಮರೆದು
ಅರಸನೋಲಗರಾಜ ಕಾರ್ಯಂಗಳಂ ಮರೆದು
ನೆರೆಹೊರೆ ಕೆಲಂಬಲಂ ಹಿಂದುಮುಂದಂ ಮರೆದು
ಘಳಿಗೆ ಜಾವಂ ದಿವಂ ರಾತ್ರೆಗಳನುಂ ಮರೆದು
ಒಳಗು ಹೊರಗತ್ತಿತ್ತಲೆಂದೆಂಬುದಂ ಮರೆದು
ಶರಣರ ಸುಗೀತಗೋಷ್ಠಿಯೊಳೇನುವರಿಯದಿರೆ
ಉರವಣಿಪ ಸಂಗದಿಂದೇನುವಂ ನೆನೆಯದಿರೆ

ಆ ಸಮಯದೊಳ್ ಬಂದರರಸಾಳ್ಗಳಂತಲ್ಲಿ
ಭಾಸುರದ ಪೆರ್ಮಾಡಿರಾಯಂ ಕಳುಪಲಲ್ಲಿ
ಬಂದು ದಣ್ಣಾಯಕರೆ ಬನ್ನಿರೇ ಕರೆದಪರು
ಸಾದಣಿಪ ರಾಜಕಾರ್ಯಕ್ಕಂಸುತಿರ್ದಪರು
ಎನಲದಂ ಕೇಳದಾಸಂಗದಿಂದಿರುತಮಿರೆ
ತನುತೀವಿ ಪುಳಕಿಸುತೆ ಶರಣರೊಡನೊಪ್ಪುತಿರೆ
ಮತ್ತೆ ಮತ್ತರಸಾಳ್ಗಳುರವಣಿಸುತಂ ಬಂದು
ಎತ್ತಿದಾಗ್ರಹದಿಂದ ಬರವೇಳುತಂ ನಿಂದು
ಇರಲಲ್ಲಿ ಶರಣರೊಡತಣ ಗೋಷ್ಠಿ ನೆರೆ ಕಿಡಲ್
ಉರವಣಿಪ ಸಂಗಸುಖಲತೆಯು ಕುಡಿ ನಡೆಗಿಡಲ್
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಸುತ್ರನೆ ಸುಯ್ದು
ನೆಲೆಗೊಂಡ ಸುಖವಳಿಯೆ ಬೈದು ನೆಲನಂ ಹೊಯ್ದು
ಮುಗ್ಧ ವಿಯೋಗದಂತೊಳಗೊಳಗೆ ಬೇವುತಂ
ದಗ್ಧಾಂತರಂಗ ಒಡನೊಡನುರಿಯೆ ನೋವುತಂ
ಸಂಗಸುಖವಳಿದು ಹರಣಂಗಳೆವ ತೆರನಾಗೆ



ಅಂಗವಿಸಿ ನುಡಿದನಾ ಶರಣತತಿ ಬೆರಗಾಗೆ
ಸಿರಿಯ ಸಂಗಂ ಶರಣ ಸಂಗಕ್ಕೆ ಪಗೆಯಾಯ್ತು
ನರನೋಲಗದಪರಾಧವು ಮರುಳುಮಾಡಿತ್ತು
ಅಯ್ಯಯ್ಯ ಸೋಮನಾಥಯ್ಯ ಕರುಣಿಪುದೆನಗೆ
ಅಯ್ಯಲಾ ಶರಣ ಸದ್ಗೋಷ್ಠಿಯಂ ಕರುಣಿಪುದು
ದೇವ ಕಲ್ಯಾಣದಧಿದೈವ ತ್ರಿಪುರಾಂತಕಾ
ದೇವ ಮನ್ಮಥದರ್ಪ ಮಥನದುರಿತಾಂತಕಾ
ಸಿರಿಹಾರಿ ಹೋಗೆ ನಿಮಗರ್ಚನೆಯ ಮಾಡುವೆಂ
ಶರಣತತಿ ಪುರಜನಂ ಮೆಚ್ಚಿ ಕೊಂಡಾಡುವೆಂ
ಎನುತಲ್ಲಿ ಪರಸಿಕೊಳುತಂ ಸುಯ್ದು ನಿಂದಿರ್ದು
ಮನದೊಳಗೆ ಕುಕ್ಕಳಂಗುದಿದು ಬಳಲುತಿರ್ದು
ಸೇವಕಾ ಪರಿಕರಾವಳಿಯು ಸಂದವನಾಗಿ
ಭಾವಿಸಲು ಸೋಮನಾಥ ಸ್ನೇಹಸಂಯೋಗಿ
ಬರುತಿರ್ದನರಮನೆಗೆ ದಣ್ಣಾಯ್ಕರುಂ ನಡೆದು

ಅರಸ ಪೆರ್ಮಾಡಿ ರಾಯಂ ಕೇಳ್ದುವಿಗೆ ಮುಳಿದು
ಕೆಲಬಲದೊಳಿರ್ದ ವಿಪ್ರರ ವದನವಂ ನೋಡಿ
ಒಲಿದು ವಿಪ್ರನಿಂದಿಸಲ್ ತೊಡಗಿದಕ್ರೋಡೆ
ದೇವ ಚಿತ್ತೈಸುವುದು ನಿಮ್ಮ ದಣ್ಣಾಯಕರು
ಭಾವಿಸುವಡೆಂದೆಂದುವುಂ ವಿಷ್ಣುನಿಂದಕರು
ಶರಭರೂಪಿಂ ವೀರಭದ್ರದೇವರು ಬಂದು
ನರಸಿಂಗ ಕೇಸರಿಯು ಕೊಂದು ಚರ್ಮವ ತೆಗೆದು
ತಂದಿತ್ತನೆಂಬ ಕಥನವನಾಡಲಾಗದೆನೆ
ನಿಂದು ಕಟಕಿಯನಾಡಿದನಿರ್ಮ್ಮ ಮುಂದಿದನೆ
ಆಗದಾಗದು ಮುಡಿಗೆ ಯೋಗ್ಯವಲ್ಲೆಂದೆನುತೆ
ಆಗ ಲಂಬಿಕೆಯು ಕರ್ಪಿಂಗೆ ಕೆರ್ಲಿಂಗೆ ಸರಿಯಲ್ಲೆನುತೆ
ಕಟಕಿಗಳನಾಡುತಿರ್ಪಂದವಂ ಮರೆದಿರೆ
ದಿಟದಿಂದೆ ನಿಮ್ಮನಂ ಬಗೆಯನವಧರಿಸಿರೇ
ದೇವ ಗುರುಪಾದಮುದ್ರಿಕೆಯುಂಟು ಕರದೊಳಗೆ
ದೇವ ನಿಮಗೇಂದುವುಂ ಪೊಡಮಡಂ ಮನದೊಳಗೆ

ಆ ಉಂಗರಕ್ಕೆ ಪೊಡೆವಡುತಿರ್ಪನರಿಯಿರೇ
ದೇವ ನಿಮಗೆಂದು ಮೈಕೊಂಬುದಂನರಿಯಿರೇ
ನಿಮ್ಮನೋಲೈಸಿರ್ದು ನಿಮಗೆ ಗರ್ವಿಸುತಿರ್ಪ
ಎಮ್ಮನಾರ್ಬಲ್ಲರೈ ಧರೆಗುತ್ಕಟದ ದರ್ಪ

ಎಂದು ನಿಂದಿಸುತಿರಲು ದಣ್ಣಾಯಕರ್ಬಂದ
ರಿಂದುಧರನತುಳಕೀರ್ತಿಯ ಮಾಳ್ಕೆಯಿಂ ನಿಂದ
ರಲ್ಲಿ ನಿಂದಿರೆ ಕಂಡು ಕರೆದು ಗದ್ದುಗೆಗೊಟ್ಟು
ಮೆಲ್ಲನುಪಚಾರಮಂ ಮನದೊಳಗೆ ಮುಂದಿಟ್ಟು
ಮಾತುಮಾತಿಂ ಸರಸದಿಂದುಂಗುರಂದೆಗೆದು
ನೂತನವಿದೆಂದು ನೋಳ್ಪಂತೆ ಮನದೊಳ್ಮಲಿದು
ತನ್ನಂಗುಲಿಯೊಳುಂಗುರವನಿಕ್ಕಿ ಕೊಳುತಲ್ಲಿ
ಮನ್ನಿಸುತ್ತವರೊಡನೆ ಮಾತಾಡುತಂತಲ್ಲಿ
ಪೊಡೆಮಡಲ್ಮನ್ನಿಸುವೆನೆಂದು ಮನದೊಳಗೆನುತೆ
ಪೊಡೆಮಡದೊಡೀಗಳೇ ದಂಡಿಸುವೆನೆಂದೆನುತೆ
ಮನೆಗೆ ಬಿಜಯಂಗೈಯ್ಯಿರೇ ದಂಡನಾಥರೇ
ಎನಲೆದ್ದು ಪೊಡೆವಡದೆ ಗಳಗಳನೆ ಪೋಗುತಿರೆ
ಮುನಿದು ಕರೆಕರೆ ಎಂದು ಚಾರರಿಂ ಕರೆಯಿಸುತೆ
ಕೊನೆಮೀಸೆ ಕೆತ್ತೆ ಕಣ್ಕೆಂಪೇರೆ ಕೋಪಿಸುತೆ
ಕಂಡಿರೇ ಎನ್ನಿಂದಮೋ ಸಂಪದಂ ಬಡೆದು
ಅಂಡಲೆವ ದಾರಿದ್ರ್ಯವೆಲ್ಲವಂ ನೆರೆ ತೊಡೆದು
ಎನಗೆ ಪೊಡೆಮಡದುದಾಸೀನಮಂ ಮಾಳ್ಪರೇ
ಮನವಾರೆ ಎಮ್ಮವಂ ಲಘುಮಾಡಿ ನೋಳ್ಪರೇ
ಸಿರಿ ಹೊರಗುಯೆಂದೆಂಬ ಬೇಸರೇನಿಂತಿಲ್ಲಿ
ಸಿರಿ ನಿಮಗೆ ಹೊರೆಯಾದಡೆಮಗೇಕೆ ತಾನಿಲ್ಲಿ
ದಿಟದಿಂದಲೊಲ್ಲಿರೇ ಸಂಪದವನೆಂದೆನಲು
ಕಟಕಟಾ ಎನ್ನಲ್ಲಿ ತಪ್ಪಿಲ್ಲವೆಂದೆನಲು

ಲಿಂಗಾಭಿಮಾನಿ ಲಿಂಗೈಕ ನಿಷ್ಠಂ ಕೇಳ್ದು
ಸಂಗ ಸುಖ ಸಾರಾಯ ಶರಣ ಚಿತ್ತಂ ಕೇಳ್ದು



ನರಪದಂ ಸುರಪದಂ ಲೆಕ್ಕಿಸದ ಕಲಿ ಕೇಳ್ದು
ಹರಿ ಬೊಮ್ಮ ಪದವಿಯಂ ತೃಣವೆಂಬ ಕಲಿ ಕೇಳ್ದು
ಶಿವಭಕ್ತಿ ಸಿರಿಯುಳ್ಳ ಪುಣ್ಯಾಧಿಕಂ ಕೇಳ್ದು
ಶಿವನ ಸಾಮರ್ಥ್ಯನಿಧಿ ದಣ್ಣಾಯಕರ್ ಕೇಳ್ದು
ಕೇಳರಸ ನಿನ್ನ ಸಿರಿ ನಿನಗಿಕ್ಕೆ ನಿನಗಿಕ್ಕೆ
ಶೂಲಿಯುಣುಗರ ಸಂಗಸಂಪದವದೆನಗಿಕ್ಕೆ
ಒಲ್ಲೆನೊಲ್ಲೆಂ ತೆಗೆ ಇದೇಕೆ ಬೇಡೆಂದೆನುತೆ
ಒಲ್ಲೆನೊಲ್ಲೆಂ ಭಕುತಿ ಸಿರಿಗೆ ಸರಿಯಲ್ಲೆನುತೆ
ಕಂಕಣಂ ,ಮುದ್ರಿಕೆಯನುಚ್ಚಿ ಬೀಸಾಡುತ್ತೆ
ಶಂಕಿಸದೆ ಕೇಯೂರಮಂ ತೆಗೆದು ಬಿಸುಡುತ್ತೆ
ಹಾರಮಂ ಕರ್ಣಪೂರಮನೊಲಿದು ಕಳೆಯುತ್ತೆ
ಹೀರಾವಳಿಯುಮನುತ್ತರಿಗೆಯಂ ತೆಗೆಯುತ್ತೆ
ಹೊಳೆವ ನವ್ಯಾಭರಣವೆಲ್ಲವಂ ನೆರೆ ತೆಗೆದು
ಪಳಿಯ ಬೀರಣೆ ಕುಪ್ಪಸಂಗಳಂ ಮಿಗೆ ಕಳೆದು
ಹೊನ್ನ ಕರಡಿಗೆ ಸೆಜ್ಜೆ ನಿನ್ನವೆಂದವನಿತ್ತು
ಚಿನ್ನ ವಸ್ತ್ರಂಗಳಂ ನಿನ್ನ ಸೊಮ್ಮೆಂದಿತ್ತು
ಅಂಗಯ್ಯ ಸೆಜ್ಜೆಯೊಳು ಸೋಮನಾಥನನಿರಿಸಿ
ಮುಂಗಯ್ಯ ನಾಗವೇದಿಕೆಗೆ ಬಿಜಯಂಗೈಸಿ
ಆಸೆಗೆಡೆಗುಡದೆ ತನ್ನಯ ವಸ್ತ್ರಮಂ ಬಿಟ್ಟು
ಆಶಾಂಬರನ ಸುತಂ ಕೇಶಾಂಬರವನುಟ್ಟು
ಸೇವಕಾವೃತ್ತಿಯಂ ಮನದ ಕಾಲಿಂದೊದೆದು
ದೇವ ಸೋಮಯ್ಯನಂ ಚಿತ್ತಹಸ್ತದಿ ಪಿಡಿದು
ಪೊರಮಟ್ಟನುನ್ನತೈಶ್ವರ್ಯ ನಿಧಿ ನಿಷ್ಠೆಯೊಳ್
ಪೊರಮಟ್ಟನಳ್ತಿಯಿಂ ನಿಸ್ಪೃಹದ ಬಟ್ಟೆಯೊಳ್
ಪೊರಮಟ್ಟನಲ್ಲಿ ವೈರಾಗ್ಯ ಸಂಪದವರಂ
ಪೊರಮಟ್ಟನಮ್ಮಮ್ಮ ಭವತಿಮಿರ ಭಾಸ್ಕರಂ
ಇಂತು ಕೇಶಿರಾಜದಣ್ಣಾಯಕರ್ತೆರಳೆ
ಸಂತತಂ ನೃಪತಿ ಬೆರಗಾಗುತ್ತಮಿರೆ ತೆರಳೆ

ಪ್ರಥಮಸ್ಥಲಂ ಸಮಾಪ್ತಂ.

# ದ್ವಿತೀಯಸ್ಥಲ.

ವೃತ್ತಃ— ಸಿರಿಯಂ ಲೆಕ್ಕಿಸದಾಧಿಪತ್ಯವನದಂ ಕೈಕೊಳ್ಳದಾಶ್ಚರ್ಯದಿಂ ।
ವರವೈರಾಗ್ಯ ವಿಭೂಷಣಂ ಶರಣಸಂಗಾನಂದದೊಳ್ ಲೋಲನಾ ।
ದರದಿಂ ಶಂಕರನಂ ಶಶಾಂಕಧರನಂ ಸರ್ವಜ್ಞನಂ ಶಂಭುವಂ ।
ಕರದೊಳ್ನಿಮ್ಮಿಸಿ ಕೇಶಿರಾಜಮಹಿಮಂ ಬಂದಂ ಮಹೋತ್ಸಾಹದಿಂ ॥

## ಗದ್ಯ.

ಇಂತು ಪೊರಮಟ್ಟು ವೀರಭಕ್ತಿಗೊಡಂಬಟ್ಟು ಏಕ ನಿಷ್ಠೆಯಂ ಮುಂದಿಟ್ಟು ಸಾಹಿತ್ಯಸಾರ್ವಭೌಮಂ ಸುಕೃತಕುಲಸೇವ್ಯಂ ಪುಳಕಾವಳಿಯ ಸರ್ವಾಂಗಂ ಸುಖಜಲಭರಿತವಿಲೋಚನಂ ತೃಣೀಕೃತಜಗಜ್ಜಾಲಂಕರತಳಸಿಂಹಾಸನಸುಖಾಸೀನಂ ಸೋಮನಾಥನುಮಾಗಿಂದುಧರನಾಜ್ಞೆಯಿಂ ಕೈಕೊಂಡೊಂದೇ ಮನದೊಳು ಬಿಜಯಂಗೈದರೆಂಬ ವೈರಾಗ್ಯವಾರ್ತೆಯಂ ನಿಜಮಂದಿರದೊಳಿರ್ದ ಪರಮಭಕ್ತೆ ಪತಿವ್ರತಾಗುಣಭೂಷಣೆಯಪ್ಪ ಗಂಗಾದೇವಿಯಕೇಳ್ದು ಪೇರ್ಮಾಡಿರಾಯನ ಸೊಮ್ಮಪ್ಪ ಕಟಕಮಕುಟಕೇಯೂರಾದಿ ಸಮಸ್ತಾಭರಣಮಂ ಸಕಲವಸ್ತುವಂ ಭಂಡಾರಮಂ ಕಾಪಿನವರ್ಗೊಪ್ಪಿಸಿ ವೇತ್ರಮನುಟ್ಟು ಭಸಿತಮನಿಟ್ಟು ಕರಕಮಲಸ್ಥಿತಶಿವಲಿಂಗಸಂಪನ್ನೆಯಾಗಿ ನಿಳಯಮಂ ಪೊರಮಟ್ಟು ರತ್ನದೊಡನೆ ಕಾಂತಿ ಚಂದ್ರನೊಡನೆ ಬೆಳ್ದಿಂಗಳು ಏಕನಿಷ್ಠೆಯೊಡನೆ ಶಿವಭಕ್ತಿಬರ್ಪಂತೆ ಕೇಶಿರಾಜರೊಡನೆ ಗಂಗಾದೇವಿಯುರ್ಬರುತಿರೆ.

ತಪರಾಜದ ಸವಿಯನುಂಡವಂ ಹಗಿನವನೊಲ್ಲದಂತೆ ಕಲ್ಪತರುವಂ ಸಾರ್ದವಂ ಮುಳ್ಳುಮರನಂ ಬಗೆಯದಂತೆ ಸುರಭಿದೊರೆಕೊಂಡವಂ ಪಯವನೆಳಸದಂತೆ ಶಿವಭಕ್ತಿವೈರಾಗ್ಯವನೊಳಕೊಂಡ ದಣ್ಣಾಯಕರು ಸಂಸಾರಾಲ್ಪಸಂಕಲ್ಪ ಸುಖವನೊಲ್ಲದೆ ಕಲ್ಯಾಣಪುರವಂ ಪೊರಮಟ್ಟು ಅಲ್ಲಿಗೊಂದು ಯೋಜನಾಂತರದೊಳೊಂದು ಕೃತಯುಗದ ಧರ್ಮಗೂಳಿಯಂ ತೆಗೆದಿರ್ಪಂತೆ ಪುಣ್ಯದೊಬ್ಬುಳಿಗೊಂಡಂತೆ ಸಂಸಾರವಂ ನೋಂಕದ ಪೊಸಲ ಭಕ್ತಿ ಓಸರಿಸಿದಂತಿರ್ದ ಬಿದಿರಕಾಯಕದ ವಂಶವರ್ಧನನೆಂಬ ಸದ್ಭಕ್ತನ ಶಿವಪುರದ ಮುಂದೆ ನಡೆತರ್ಪಾಗಳ್ ದಣ್ಣಾಯಕರ ನಿರ್ಲೇಪಾಗಮನಮಂ ಮಹಾಮಹೇಶ್ವರನಪ್ಪ ವಂಶವರ್ಧನಂ ಕಂಡಿದಿರೇಳ್ದು ಬಂದು ಪದತಳಕ್ಕೆರಗಿ ನಿಜಭಕ್ತಿಯಿಂ ಬಿಜಯಂಗೈಸಿತಂದು ಶಿವಭಕ್ತಿಯೊಗ್ಗಿನಂತಿರ್ದ ತನ್ನ ಗುಡಿಸಿಲ ಮುಂದಣ ಸಹಕಾರದ ಹೊಸ ಹಸಲೆಯ ಮೇಲೆ ಬಾಲವೇಣುವಿರಚಿತ ಮೃದುತರಾಸನಮನಿತ್ತು ಚರಣಮಂ ತೊಳೆದು ಪಾದೋದಕಮಂ ತಳೆದು ಕೇಶಾಂಬರಮಂ ಬಿಡಿಸಿ ಧವಳದುಕೂಲಮನುಡಿಸಿ ಗಂಗಾದೇವಿಯರನೊಳಯಿಂಕೆ ಬಿಜಯಂಗೈಸಿ ಪ್ರೇಮದಿಂ ಸೋಮನಾಥಂಗೆ ಬೋನಮಂ ಸವೆವುದೆಂದು ತಮ್ಮರಸಿಯರ್ಗೆ ಪೇಳುತ್ತೊಡನೊಡನೆ ಬಿಡಲಾರದೆ ಪಟ್ಟಣದಿಂ ಸಾಲ್ಗೊಂಡು ಬಂದ ಭಕ್ತಜನಮಂ ಕೆಲಬಲದೊಳಿರಿಸಿ ತಾಂ ಬಂದು ದಣ್ಣಾಯಕರ ಪದತಳದ ಕೆಳಗೆ ವಂಶವರ್ಧನಂ ಕುಳ್ಳಿರ್ದು ದೇವ ದೇವ ಸವಿಯನಡಂಗಿಸಿ ಸಂಸಾರವಂ ಪಿಂಗಿಸಿ ಭವಿಗಳಂ ಭಂಗಿಸಿ ಆಸೆಯನುಲ್ಲಂಘಿಸಿ ನಿರ್ಲೇಪವನೊಳಕೊಂಡು ನಿಸ್ಪೃಹತೆಯ ಕೆಳೆಗೊಂಡು ನಿಷ್ಪ್ರಪಂಚಮನೆಡೆಗೊಂಡು ಶಿವಸಾಮ್ರಾಜ್ಯಕ್ಕನುಕೂಲಮಪ್ಪ ಶ್ರೀಯನಿಂಬುಗೊಂಡು ಬಿಜಯಂಗೈದೆನ್ನಂ ಕೃತಾರ್ಥನಂ ಮಾಡಿದಿರೆಂದು ಬಿನ್ನೈಸಿದ ವಂಶವರ್ಧನನಂ ಕಾರುಣ್ಯಕಟಾಕ್ಷದಿಂ ನೋಡಿ

ಮಾತುಮಾತಿಂ ಪುರಾತನರ ಗೀತಮಂಕುರಿಸೆ ನಿರ್ಮಳಚಿತ್ತಂ ನಿಮಿರ್ದು ನಿಡುಸುಯ್ಯೆ ಬೆಳೆದು ಶಾಂತಿಪಲ್ಲವಿಸಿ ಸತ್ಯಂ ಪೂತು ಪರಿಣಾಮಂ ಫಲಿತವಾಗಿ ಸಮಸುಖಸಂಗದೊಳ್ಗಿಲ್ಲಕ್ಕೆ ಹೋರಡೆ ತರ್ಕಕ್ಕೆ ತಲೆಯೊತ್ತದೆ ವಾಸೆಗೆ ಘಾಸಿಯಾಗದೆ ಮತ್ಸರಕ್ಕೆ ಮಲೆಯದೆ ಗೀತಕ್ಕೊಮ್ಮೊಮ್ಮೆ ಪೊಡೆವಡುತೆ ಉಷ್ಪೆಯಕ್ಕೊಮ್ಮೆ ಉಬ್ಬುತ್ತೆ ಭೋಗಕ್ಕಾನಂದಾಶ್ರುವಂ ಸುರಿಸುತ್ತಿರೆ ಭಕ್ತಿಭರಂ ಮುಂದೈಸಿದ ಸಂಗದಿಂ ಮುಂದುಗೆಟ್ಟು ಮೇರೆಗೆಟ್ಟೋರಂತೆ ಹಾರೈಸಿ ಹಬ್ಬಿ ಬೆಳೆದು ಶಿವಮರುಳ್ಗೊಂಡು ಜೇನ ಸೊನೆಯೊಳ್ಮಿಂದಂತೆ ಇರುಳ್ ಪಗಲುಮನರಿಯದೆ ನಿದ್ರೆ ಪಸಿವಂ ಮರೆದು ತಮ್ಮಿಷ್ಟಲಿಂಗಕ್ಕಾನಂದರಸದ ಮಜ್ಜನಂ ಪುಳಕದ ಪೂಜೆ ನಿಜಶ್ವಾಸಮೆ ಪರಿಮಳಧೂಪಂ ಗೀತದಾರತಿ ಗೋಷ್ಠಿಯಾರೋಗಣೆಯಾಗಿ ಶಿವಭಕ್ತಿ ಸುಖಪ್ರಸಂಗಪ್ರಸಾದ ಸಂತುಷ್ಟರಾಗಿರ್ಪಲ್ಲಿ ಹರಭಕ್ತಿಯಂ ಶಿವಜ್ಞಾನಾಂಗನೆ ಎಚ್ಚರಿಸಲ್ ಬರ್ಪಂತೆ ಗಂಗಾದೇವಿಯುರ್ಬಂದು ದೇವ ದೇವ ಸೋಮನಾಥಂ

ಗೇಳು ದಿನಂ ಶರಣಸಂಗ ಸುಖಮುಖಾರೋಗಣೆಯಾಗಿರ್ದುದಿಂ ನಿಮಂಗೆ
ಲ್ಲರರಿವಂತಾರೋಗಿಸಲ್ ಪ್ರಸಾದಮಂ ಕರುಣಿಸವೇಳ್ಕುಮೆಂದೆಚ್ಚರಿಸಿದ
ಸಮಯಮೇ ಲಿಂಗಸಮಯಮಾಗೆ

ದಣ್ಣಾಯಕರೆಚ್ಚತ್ತು ಹಾ! ಸಿರಿಯಂ ಹಾರಿಸಿ ಭವಿಗಳಂ ಮೀರಿಸಿ
ಸತ್ಯಶರಣರಂ ತೋರಿಸಿ ಸಂಗಸುಖಲತೆಯಂ ಬೇರೂರಿಸಿ ಕರುಣಿಸಿದ
ಕಂತುಮದಹರ ಸೌರಾಷ್ಟ್ರದೊಡೆಯ ಸೋಮೇಶ ತಂದೆ ಸೋಮನಾಥಾ
ಸೊಡ್ಡಳ ಪ್ರಭುವೇ ಎಂದೆಂದು ಸವಿನುಡಿಗಳಂ ಬಣ್ಣಿಸಿ ಕರೆಕರೆದು ಕರ
ಸ್ಥಲದ ಲಿಂಗಮನುರಸ್ಥಲದೊಳಪ್ಪಿ ಕಂಠದೊಳೊತ್ತಿ ಭಾಳದೊಳೊತ್ತಿ ಕೆಲ
ಬಲದ ಮಾಹೇಶ್ವರರ ಮೊಗಮಂ ನೇಹದಿಂ ನೋಡಿ ತೂಗಾಡಿ ತುಳುಂಕದೆ
ತಿಳಿದು ತೀವಿದಗ್ಗವಣಿಯ ತಂಪಂ ಮಜ್ಜನಕ್ಕೆರೆದು ನವಪುಷ್ಪದ ಪರಿ
ಮಳಮಂ ಸೂಡಿ ಧೂಪದ ಕಂಪನಿತ್ತಾರತಿಯ ಬೆಳಗನೆತ್ತಿಯಮೃತಾ
ನ್ನದ ಸವಿಯನೂಡಿ ಚಂದನದಿಂಪಂ ನೀಡಿ ವೀಳೆಯದ ಸೊಗಸಂ ಕೂಡಿ
ಸತ್ಯಪ್ರಸಾದಮಂ ಸಾದರದಿಂ ಕೈಕೊಂಡು ಪ್ರಸಾದ ತಾಂಬೂಲ ಮುಖ
ನಾಗಿ ಪರಕೆಯಂ ಕೈಗೂಡಿದ ತ್ರಿಪುರಾಂತಕ ದೇವರ್ಗಾರ್ಚನೆಯುದ್ಯೋ
ಗಮಂ ನೆನೆವಲ್ಲಿಂ ಮುನ್ನ ತನತನಗೆ ತಂದಾರಾಧಿಸಿದ ಪೊಂಗಳಿಗೆ
ಮೇರೆ ಇಲ್ಲದಿರೆ ಸರ್ವವಸ್ತು ಸನ್ನಿಧಾನ ಸಂಪನ್ನನಾಗಿ ಮಾಹೇಶ್ವರ ಕೋಟಿಗೆ
ಮನ್ನಣೆ ಸಹಿತಾರೋಗಣೆಯಿತ್ತು ವಂಶವರ್ಧನನ ಪುರಂ ಮೊದಲಾಗಿ
ತ್ರಿಪುರಾಂತಕ ದೇವರ ರಂಗಮಂಟಪಂಬರಮರ್ಚನೆಯ ಮಂಟಪಮಂ
ನಿಮಿರ್ಚಿ ನಡುವೆಕಟ್ಟಿದ ಮೇಲ್ಕಟ್ಟಿನ ಹೊಕ್ಕುಳ ಪುಲ್ಲಿಯ ತೊಂಗಲ್ಗಳಂ
ಪಚ್ಚೆಯ ಪಂಕ್ತಿಯ ಮೇಘ ವರ್ಣದ ವೀಥಿಯ ಹಂಸಾವಳಿಯ ಚೌಕದ
ಲತಾವಳಿಯ ವೀದಿಯ ವೀದಿಯ ವಿಳಸಚ್ಚಂದ್ರಿಕಾ ಮಂಟಪದೊಳ್
ಸಾಲ್ಗೊಂಡ ಗಣಕುಲಂ ಲಾಮಂಚದ ಕೀಲ್ಗಟ್ಟಂ ನೆಮ್ಮಿ ನಿಂದ ಪಿಡಿದೆಳೆ
ಯಡಕೆಯ ಸಸಿಗಳ ಹೊದರ ಹೊಂಬಾಳೆಯ ಬಹಳ ಸಹಕಾರಂಗಳ
ಕುಳಿಯ ಹಣ್ಣ ತೆಕ್ಕೆಯ ಬಾಳೆಯ ಹಣ್ಣಿನಿಕ್ಕೆಯ ಮಧೂ ಫಲದ ಮಂತ
ಣದ ನಾರಿಕೇಳದ ನೆರವಿಯ ಸರ್ವ ಫಲ ವಸ್ತು ಸಂತಾನಮಂ
ಮಂಗಳ ದ್ರವ್ಯ ಸಕೀರ್ಣವಾದ ಮೇಲ್ಕಟ್ಟಿನ ತಳದೊಳಾವುಜದ ಸಂಭ್ರ
ಮದ ಆ ಪೂಜೆಯ ಮದ್ದಳೆಯ ಮುಸಕದ ಕರಡೆಯ ಕಡುಪಿನ ಕೌಸಾಳ
ದುರವಣೆಯ ತಾಳದ ತವಕದ ಮೇಳವಣೆಯ ಗಿರುಗಟಿಯ ಗಾಢದ
ಬೊಂಬುಳಿಯ ಭರವಸದ ಕೊಂಬಿನ ಕೋಳಾಹಳದ ನಿತ್ಯ ಕೇಳಿಕೆಯ



ಕೊಟ್ಟ ರುದ್ರಾಕ್ಷೆಯ ವಜ್ರಾಂಗಿಯಂ ಕದಂಬ ಕುಸುಮದೋಳ್ ದೊರೆ
ವಂತೆ ಕಟ್ಟಿದ ಬಂದುಗೆಯ ಬಾಸಿಗದ ಸಣ್ಣ ನನೆಯ ಸುರಹೊನ್ನೆಯ
ಸಂಪಿಗೆಯ ಜೊಂಪದ ದಾಡಿಮದ ಬೀಜದ ಕರ್ಣಾಭರಣದ ಮಲ್ಲಿ
ಗೆಯ ನನೆಯ ಹಾರದ ಮೊಲ್ಲೆಯ ಮುಗುಳ್ಗಳ ಕಂಕಣದ ಮರುಗದ
ಬಾಹುಪೂರದ ದ್ರಾಕ್ಷೆಯ ಮುದ್ರಿಕೆಯ ತಾವರೆಯ ನೂಲ ದುಕೂಲದ
ಹೊಂಬಾಳೆಯ ಚಾಮರದ ಮಡಿವಾಳದ ಸೀಗುರಿಯ ದವನದ ಧವಳ
ಛತ್ರದ ಶಿವಾರ್ಚನೆಯ ಹರವರಿಯ ಶರಣರ ಶಿವತಿಂಥಿಣಿಯ ಭಾರವ
ಣೆಯ ಮೇಲೆ ಮೆಲ್ಲಮೆಲ್ಲನೆ ನರ್ತನದ ನಟಣೆ ಮೈಸಂದು ಕೈವೀಸಿ
ನಡೆದುಬರೆ ನಡುವಣ ಕೇಳಿಕೆಯ ಮಹಾಧ್ವನಿ ದೆಸೆಯಂ ಸುತ್ತಿನ
ಭವಂ ಮುತ್ತಿ ಘೋರೆಂದೋರಂತೆ ಮಸಗೆ ಭವಿಶ್ರೀಯಂ ಹಾರಿಸಿ ಭಕ್ತಿ
ಶ್ರೀಯನೊಳಕೊಂಡ ಕೇಶಿರಾಜದಣ್ಣಾಯಕರ ಶಿವಾರ್ಚನೆ ಹರಿಬ್ರಹ್ಮಾ
ದಿಗಳ ಪದವಿಯಂ ರೋಡಾಡಿಸುತ್ತಂ ಬರೆ

ಬರ್ಪ ಸಂಭ್ರಮಮಂ ಕಂಡು ಕೇಳ್ದುಮಿದೆಲ್ಲಿಯಾನಂದಮಿದೆಲ್ಲಿ
ಯದ್ಭುತದ ಮಹಿಮೆಯೆಂದು ಪೆರ್ಮಾಡಿರಾಯನುಪ್ಪರಿಗೆಯಿಂದಿಳಿದಾ
ನೆಯ ಮೇಲಿರಲಮ್ಮದೆ ಮಾರುವನೊಲ್ಲದೆ ಪರಿಮಿತ ಪರಿವಾರನಾಗಿ ಕಾಲ್ನ
ಡೆಯೊಳ್ ಬಂದು ದಣ್ಣಾಯಕರಿರವಂ ಕಂಡು ನೋಡಲಮ್ಮದೆ ಕಣ್ಮುಚ್ಚಿ
ಮೈಯಿಕ್ಕಿ ನಿಂದು ಕಿಂಕರಭಾವದಿಂದೊಂದೆಸೆಯಜ ಪದ ಕಡೆಯಂ ಪಿಡಿದು
ಬರೆ ಅರ್ಚನೆಯ ಮಹೋತ್ಸಹದೊಳ್ ಪೆರ್ಮಾಡಿರಾಯನನಾರೆಂ
ದರಿಯದೆ ನಡೆದು ಬಂದು ತ್ರಿಪುರಾಂತಕದೇವರ್ಗೆ ಪರಕೆಯಂ ಕೊಟ್ಟು
ತಿರುಗಿ ಬರ್ಪಾಗಳ್ ನಡನಡನೆ ನಡುಗಿ ತನಗಂಜಿ ಪೆರ್ಮಾಡಿರಾಯಂ
ಮೈಯಿಕ್ಕಿ ಪಟ್ಟಿರ್ದಿರಲೀತನಾರೆಂದು ಕೇಳಲೊಡಂ ದೇವ ದೇವಾ
ಭೂಮಂಡಲವನೇಕ ಚ್ಛತ್ರದಿಂದಾಳ್ವ ನಮ್ಮ ಕಲ್ಯಾಣದರಸು ಪೆರ್ಮಾ
ಡಿರಾಯನೆಂದು ಬಿನ್ನೈಸಲೇಳ್ಕೈ ಎಳೆಂದು ಬೆಸಸಲೆದ್ದು ನಿಂದಿರ್ದ ಭಯ
ಭಕ್ತಿಯಂ ದೇವ ನಿಮ್ಮಡಿಗಳ ಸಾಮರ್ಥ್ಯಮನರಿಯದೆ ಇನಿತು ದಿನ
ಮೋಲೈಸಿಕೊಂಡುದಲ್ಲದೆಯುಂ ಪಟ್ಟಣದಿಂ ಬಿಜಯಂಗೈಯಲ್ವೇಳ್ದ ಕೋ
ಪಾಂಧಂ ದುಶ್ಶೀಲಂಗೆ ದೋಷಿಗೆ ಪಿರಿಯರನರಿಯದ ನರಕಜೀವಿಗೆ ಪೂಜ್ಯರ
ನರಿಯದ ಪುಣ್ಯ ಹೀನಂಗೆ ಕರುಣಿಸಿ ನಿಮ್ಮಡಿಗಳ ರಮಾನೆಯ ಮಹಾ
ಮನೆಯಾಗಿ ಎನ್ನ ಭಾಂಡಾರವೇ ನಿಮ್ಮದಾಗಿ ಭಕ್ತಗಾರ್ರಾಧಿಸಿ ನಿಶ್ಚಿಂ
ತನಾಗಿ ನಿರುಪಮಶಿವಗೋಷ್ಠಿಯಿಂ ಬಿಜಯಂಗೈದೆನ್ನಂ ಕೃತಾರ್ಥನಂ

ಮಾಡಿರೆಂದು ಮತ್ತೆ ಸೈಗೆಡೆದು ನಿಂದಿರ್ದ ಸೇಮಾಡಿರಾಯಂಗೆ ಸದ್ಭಕ್ತರ ವಚನದಿಂ ಕರುಣಿಸಿಯರ್ಚನೆಯಂ ತೀರಿಸಿ ಮಾಹೇಶ್ವರರ ಕೇಳಿಕೆಯಂಮೆರಸಿ ತಿರುಗಿ ಕಲ್ಯಾಣಮಂ ಪೊಕ್ಕು ನಿಜನಿಕೇತಪ್ರವಾಸರಾಗಿ ಪೇಮಾಡಿರಾಯನಾರಾಧಿಸಿದ ಸರ್ವಾಭರಣ ರತ್ನಭಾಂಡಾರಮಂ ಕೈಕೊಂಡಾತನರಮನೆಗೆ ಬೀಳ್ಕೊಟ್ಟು ಶರಣರ್ಗೆ ಮನದಣಿಯೆ ಆರಾಧಿಸಿ ವಂಶವರ್ಧನಂಗುಡ ಕೊಟ್ಟು ಮನಂ ತೀವೆ ಸಮಸ್ತ ವಸ್ತು ನಿವಹಮಂ ವಿತ್ತಂಗಳಂ ಕಳುಪಿ ಶಿವಗೀತಾಮೃತ ಶರಧಿಯೊಳವಗಾಹವಿರ್ದು ಸೇಮಾಡಿರಾಯನಿಂದೋಲೈಸಿ ಕೊಳುತ್ತಂ ಕೇಶಿರಾಜದಣ್ಣಾಯಕರು ಇರೆ ಇರೆ.

—:ದ್ವಿತೀಯ ಸ್ಥಲಂ ಸಂಪೂರ್ಣಂ:—

## ತೃತೀಯ ಸ್ಥಲ.

ವೃತ್ತ॥ ಶರಣವ್ರಾತನಿವಾತ ನಿಶ್ಚಲ ಶಿವಾನಂದ ಪ್ರಸಂಗೋದ್ಭವ
ಸ್ಫುರಿತಪ್ರೊಲ್ಲಸಿತಾಂತರಂಗ ಸುಖಭಾವೋಜ್ಜೀವ ರಾಜೀವ ಭಾ
ಸ್ಕರದ್ಯೋತಿತ ಸೋಮನಾಥ ಚರಣಾಂಭೋಜಾತ ಸೌಗಂಧ ಭಾ
ಸುರಭೃಂಗಂ ಪ್ರಭು ಕೇಶಿರಾಜ ವಿಭುಪೊಪ್ಪಿರ್ದಂಮಹೋತ್ಸಾಹದಿಂ

### ರಗಳೆ.

ಇಂತು ಸುಖದಿಂದಿರ್ದ ದಣ್ಣಾಯಕರ್ನಲಿದು
ಸಂತತಂ ಸೋಮನಾಥನ ಕರುಣಮಂ ತಳೆದು
ಜೊಮ್ಮಣ್ಣನೇಕ ನಿಷ್ಠೆಯ ಛಲದ ಬಲುಮೆಯಂ
ಜೊಮ್ಮಣ್ಣನುನ್ನತ ಶಿವ ಕೃಥಾ ವಿಭವಮಂ
ಕೇಳ್ದು ಪರಮಾನಂದ ಸುಖದಿಂದಲುಬ್ಬೆತ್ತಿ
ಜೊಮ್ಮಣ್ಣನಂ ನೋಡೆ ಶರಣತತಿವೆರಸುತಂ
ಇಂದುಧರನಾಜ್ಞೆಯಂ ಮನದ ಮೊದಲೊಳಗಿಟ್ಟು
ಬಂದು ಭಕ್ತಾಲಯವ ಹರುಷದಿಂ ಪುಗುತಂದು
ನಿಂದು ಜೊಮ್ಮಣ್ಣನೆಲ್ಲಿಗೆ ಪೋದನೆಂದೆನುತೆ
ಎನುತೊಳಗೆ ಪುಗುತೆ ಪಿಶಿತಾವಳಿಗಳಿರೆ ಕಂಡು
ಮನದೊಳಗೆ ಕೊಕ್ಕರಿಸಿ ಹೇಸಿಕೆಯ ಕೈಕೊಂಡು
ತಿರುಗಿ ಬಂದಾ ಪುರದ ದೇವಾಲಯದೊಳಿರಲು
ಕರೆಯಬಾರದ ತೆರದಿ ಹರನ ಪೂಜೆಯೊಳಿರಲು
ಬಂದನಲ್ಲಿಗೆ ಜೊಮ್ಮತಂದೆ ಭರದಿಂ ನಡೆದು
ಸಂದಣಿಸಿಕೊಂಡೊರ್ಬರೊರ್ಬರಿಗೆ ಕೈಮುಗಿದು
ಬನ್ನಿರೇ ಎನ್ನಯ ಮಹಾಮನೆಗೆ ನೀವೆಂದು
ಎನ್ನ ಪುಣ್ಯದ ಫಲಂ ಲೇಸಾದುದಿಂದೆಂದು
ಕರೆಯಲನುವಾಗಿರ್ದ ದಿದೆ ಸಾಲ್ವುದೆನಲಲ್ಲಿ
ಪುರಹರಂ ಜೊಮ್ಮಣ್ಣನಿಷ್ಟೆಯೊಳ್ ನಿಲಲಲ್ಲಿ

ಸೊಮನಾಥಂ ಮಾನಂ ನೋಡಿದೊಡೆ ಬೆರಗಾಗಿ
ಭೂಮಿಗತಿ ಕೌತುಕವಿದೆಂದೆನುತೆ ತಲೆದೂಗಿ
ಜೊಮ್ಮಣ್ಣನನುಮತಿಯೊಳಭವನುಂ ಕೈಕೊಂಡು
ಸುಮ್ಮಾನದಿಂದವರ ಮನೆಗೆ ಬೆಂಬಳಿಗೊಂಡು
ಬಂದು ತಮ್ಮಿಚ್ಛೆಯಿಂದಾರೋಗಿಸಲ್ಕಿಕ್ಕಿ
ಇಂದುಶೇಖರನ ಪ್ರಸಾದದಿಂ ಮನವುಕ್ಕಿ
ಶಿವಗೋಷ್ಠಿಯೊಳಗಿರ್ದು ಪರಮ ಸುಖಮಂ ದಾಳ್ದು
ಶಿವಧಿಡಾವ ಮೃಗಸಂಕುಳದ ಹುಯ್ಯಲಂ ಕೇಳ್ದು
ಶಿವನ ಸ್ವತಂತ್ರಿಕೆಗೆ ದಣ್ಣಾಯಕರ್ಮೆಚ್ಚಿ
ಶಿವಭಕ್ತ ಜೊಮ್ಮಣ್ಣನಿರವಿಂಗೆ ಮೈವೆಚ್ಚಿ
ತಿರುಗಿದಂ ಕಲ್ಯಾಣಪುರದತ್ತ ರಾಗದಿಂ

ಹರಭಕ್ತರೊಡನೆ ಬರುತಿರೆ ಮಹೋತ್ಸಾಹದಿಂ
ಕಳುಪಲ್ಕೆ ಬಂದ ಜೊಮ್ಮಣ್ಣನಂ ಸಿಲಿಸುತಂ
ಅಳವಲ್ಲದಕ್ಕರಿಂ ಮಿಕ್ಕು ಕೊಂಡಾಡುತಂ
ನಡೆತಂದರೊಲವಿಂದೆ ಶಿವಭಕ್ತರುತ್ಸವಿಸೆ
ಎಡೆಗೈದ ಹರಪುರದ ಶರಣತತಿ ಹಾರೈಸೆ
ಪೊರಮಟ್ಟು ಬೆಟ್ಟಗಟ್ಟಂಗಳಂ ದಾಂಟುತಿರೆ
ಕೆರೆತೊರೆಬನಂಗಳಂ ನೋಡುತಂ ಬರುತಮಿರೆ
ನರಲೋಕದಿರವಿಂಗೆ ತಾನಡ್ಡಲಾದಂತೆ
ಅರಸನಲ್ಲಿಗೆ ಹೋಗಲೀಯೆ ನಾನೆಂಬಂತೆ
ಮುಂದೊಂದು ನದಿಯಡ್ಡವಾಯ್ತು ಭೋರೆಂದೊಪ್ಪಿ
ಛಂದ ಛಂದದ ಪುಳಿನ ಸಂತತಿಗಳಿಂದೊಪ್ಪೆ
ತಡೆವಿಡಿದು ನಡೆತರ್ಪ ರಾಜಹಂಸಂಗಳಿಂ
ಬಿಡದೆ ದುಮ್ಮಿಡಿವುತಿರ್ಪ ನಿಮಿಷಕುಲಂಗಳಿಂ
ಕೆಲಬಲದೊಳಿರ್ಪ ಚಮರೀಸಮೂಹದಿಂ
ನೆಲೆಗೊಂಡು ಬೆಳೆವ ಸುಮನಸವಿಪ್ರ ಘೋಷದಿಂ
ದೇವನದಿಯಂತಿರ್ದ ನದಿಯ ನೊಲವಿಂ ಕಂಡು

ಭಾವಿಸಲ್ಕಲ್ಲಿ ರಮಣೀಯತೆಯನೊಳಕೊಂಡು
ಪಿರಿವಶೋಕೆಯ ಮಾವಿನ ತಳದ ನೆಳಲೊಳಗೆ



ಹೆರೆಸೂಡಿದನನರ್ಚಿಸಲ್ಕೆಂದು ಮನದೊಳಗೆ
ಬಂದು ಪುಳಿನ ಸ್ಥಳದ ಮೇಲೆ ತಳಿರಂ ಹಾಸಿ
ನಿಂದು ನಲವಿಂದೆ ಹೊಳ ಕುಸುಮದೆಸಳಂ ಪಾಸಿ
ಸೋಮನಾಥಂಗೆ ನದಿಯುಗ್ಗವಣೆಯುಂ ಕೊಟ್ಟು
ಕಾಮಹರನಂ ನೋಡಿ ಹರುಷಮುಂ ಮುಂದಿಟ್ಟು
ತಳಿರ ಸಿಂಹಾಸನದ ಮೇಲೆ ಬಿಜಯಂಗೈಸಿ
ಹೊಳೆವ ಗಂಧಾಕ್ಷತೆಗಳಿಂದೊಲಿದಲಂಕರಿಸಿ
ದಾಸಣದ ಪೂವಿಂದೆ ಹೊಸಪೂಜೆಯಂ ಮಾಡಿ
ಭಾಸುರಮೆನಲ್ಕೆ ಮನದುತ್ಸವಮನೊಡಗೂಡಿ
ಪಂಚಮುಖನಂ ಚಿತ್ತದೊಳ್ನೆರೆವುತಿರಲಲ್ಲಿ
ಪಂಚಾಕ್ಷರಿಯ ಜಪವನೆಣಿಸುತ್ತಲಿರಲಲ್ಲಿ

ಗಗನದೋಳ್ದೂರದಳತೆಯೊಳು ಗರುಡಂ ಕಂಡು
ಆಗಲದನುರಾಗವೇರಿರ್ದುದಂ ಬಗೆಗೊಂಡು
ತನ್ನೊಡೆಯನೆನಿಪ ಹರಿ ಕಣ್ಣೇರಿಸಿದನಲ್ಲಿ
ಮನ್ನಣೆಯೊಳಭವನಿಂ ಚಕ್ರಂಬಡೆದನಲ್ಲಿ
ಅನಂತೆ ಲಿಂಗಾರ್ಚನೆಯ ಮಾಳ್ಪೆನೆಂದೊಲಿದು
ನಾನಾ ಸುಖದೊಳಿರ್ಪೆನೀ ಮಾಯೆಯಂ ಗೆಲಿದು
ಖಗನತ್ತವಂ ಬಿಟ್ಟು ಯಂತ್ರವಾಹಕನಲ್ಲಿ
ಅಘಹರನ ಕಾರುಣ್ಯದಿಂ ಪಡೆವೆನೆನುತಲ್ಲಿ
ಹರಿಯಜರ ಪದವಿಗೆಳಸುತ್ತಿಳಿದು ಬರ್ಪಂತೆ
ಗರುಡನಿಳಿದುದು ಗಗನದಿಂದೊಲಿದು ತಾನಿಂತೆ

ಬಂದು ಮುಖ ಸೆಜ್ಜೆಯೊಳ್ನಾಲಗೆಯ ಹಾಸನೊಳ್
ನಿಂದೊಯ್ಯನವಧರಿಸಿಕೊಂಡು ತಾನೊಲ್ಮೆಯೊಳ್
ಅಂಬರಸ್ಥಳಕೆ ನೆಗೆವುತ್ತಮಿರ್ಪನಿತಕ್ಕೆ
ನಂಬಿ ಗರುಡಂ ಕೊಂಡು ಪೋಗುತಿರ್ಪನಿತಕ್ಕೆ
ನದಿಯಿಂದೆ ಗಂಗೆ ಪೊರಮಟ್ಟು ನೋಡುತ್ತಲ್ಲಿ
ಸದಮಲ ಶಿವಾರ್ಚಕ ವಿಹಂಗ ಪತಿಯಂತಲ್ಲಿ
ವಲ್ಲಭನನಾಲಿಂಗಿಸುವೆನೊಮ್ಮೆ ಕೊಡು ಮಗನೆ

ಸಲ್ಲಲಿತ ವಿಮಳ ಲಿಂಗವನೆನಗೆ ಕೊಡು ಮನೆ
ಎಂಬ ಮಾತಂ ಕೇಳ್ದು ತೆರದಿ ನದಿಯಂ ನೋಡಿ
ತ್ರ್ಯಂಬಕಂ ತನ್ನ ವಶವಲ್ಲದಿರೆ ತಾಂ ನೀಡಿ
ಭರದಿಂದೆ ನದಿಯ ನಡುವಿಂಗೆ ಬಿಜಯಂಗೈಸಿ
ಗರುಡನೊಲವಿಂ ನೆಗೆದನಾಗಸಕೆ ಹಾರೈಸಿ
ಬಿಡೆ ಶಿವಂಗಂಗೆಯಾಲಿಂಗನದೊಳೊಡಗೂಡೆ
ಎಡಬಲದ ಮಾಹೇಶ್ವರರು ಭೀತಿಯೊಳ್ಮೂಡೆ

ಕಂಡು ದಣ್ಣಾಯಕರು ಭೋಂಕೆನೆ ಕಠಾರಿಯಂ
ಕೊಂಡು ಕುಬುಬುಬುಎನುತೆ ನಿಷ್ಠೆಗುಪಕಾರಿಯಂ
ನೋಡಿ ಶರಣರ್ಪರಿದು ಬಂದು ಕೈಯ್ಯಂ ಪಿಡಿದು
ಬೇಡ ಬೇಡೆಲೆಲೆ ಹಿರಿಯಾಣೆಯೆನುತಂ ಜಡಿದು
ಸ್ವೈವಧರ್ಮದ ವಿಚಾರಕ್ಕೆ ತಾನೆಡೆಯುಂಟು
ಮೈವಳಿಯೊಳೆಮ್ಮೊಂದುದಂ ಕೇಳಿ ಲೇಸುಂಟು
ಸೋಮನಾಥಂ ನದಿಯೊಳಿರ್ದಪಂ ನಾವರಿಯೆ
ಈ ಮಾತು ಸಂದೇಹವಿಲ್ಲವದು ನೀವರಿಯೆ
ನಾವೆಲ್ಲರುಂ ಹೊಕ್ಕು ನೋಡಿಯರಸಿದ ಬಳಿಕ
ಕೀವಿರ್ದ ನದಿಯೊಳಗೆ ಪೊಕ್ಕು ನೋಡಿದ ಬಳಿಕ
ನೀವೆಂದುದಂ ಮಾಳ್ಪುದುಚಿತ ಮೆಂದೆನುತಮಿರೆ
ಆವೆಲ್ಲರುಂ ಸಹಾಯಂ ನಿಮಗೆನುತ್ತಮಿರೆ
ನುಡಿದನಪ್ರತಿಮನಮ್ಮಮ್ಮ ಕೇಶವರಾಜ
ನಡೆಗುಡದ ಛಲಿಕಲಿ ಶಿವಾಚಾರ ಕುಲರಾಜ
ಇನ್ನೊಂದನವಧರಿಸಿರೇ ಎನ್ನ ಭಾಷೆಯಂ
ಪನ್ನಗಾಭರಣನೊಡಗೂಡುವ ನಿರಾಸೆಯಂ
ನೀವೆಲ್ಲರಾಯಸಂಗೊಳ್ಪುದೆನಗದು ಬೇಡ
ದೇವನೊಲವಿಂ ಮೆಚ್ಚಲಿಂತು ಮಾಳ್ಪೆಂ ನೋಡ
ಒಂದು ಹರಿಗೋಲ ನಾನೀತಡೆಯೊಳಿಕ್ಕುವೆಂ
ಮುಂದೆಯಾ ಕಡೆಗೆ ಭರದಿಂ ದಾಳಿಯಿಕ್ಕುವೆಂ
ನಡುವೆ ಬಾರದೆ ನಿಲಲು ಬೇಡಿಕೊಂಬೆಂ ಬಳಿಕ
ಪೊಡವಿಗತ್ಯದ್ಭುತಂ ಮಾಡಿ ತೋರ್ಪೆಂ ಬಳಿಕ



ಎಂದೊಡಂಬಡಿಸಿ ಹರಿಗೋಲ ಹತ್ತಿರೆ ಬಂದು
ಸಂದಣಿಸಿ ನುಡಿದನಾ ಸೋಮನಾಥಂಗಂದು
ಮತ್ತೊಂದು ದೈವಮುಂಟೆಂಬುದಂ ಬಗೆದೊಡಂ
ಮತ್ತೊಂದು ಸಮಯಮುಂಟೆಂದು ನಾಂನುಡಿದೊಡಂ
ಎನ್ನಸತಿಯಲ್ಲ ದನ್ಯಕ್ಕೆಳಸಿ ನಿಂದೊಡಂ
ನಿನ್ನವರ್ಗಳಲ್ಲದನ್ಯರ್ಗಿನಿತನಿತ್ತೊಡಂ
ನುಡಿವಲ್ಲಿ ಸತ್ಯವಲ್ಲದೆ ಬೇರೆ ನುಡಿದೊಡಂ
ನಡೆವಲ್ಲಿ ನಾ ದುರಾಚಾರದಿಂ ನಡೆದೊಡಂ
ಮನಸಿನೊಳ್ನೀನಲ್ಲದನ್ಯವಂ ನೆನೆದೊಡಂ
ಕನಸಿನೊಳ್ ನೀನಲ್ಲದನ್ಯವಂ ಕಂಡೊಡಂ
ಇದು ದಿಬ್ಯವೆಂದೆನುತೆ ಹರಿಗೋಲನೇರಿದಂ
ಅದಿರಳ್ಕದ ಶಿವವ್ರತಿ ಕರಂ ಮೀರಿದಂ
ನಿರ್ಮಳಂ ನಿಶ್ಚಳಂ ವೀರಕಳೆಯೇರಿದಂ
ನಿರ್ಮಳಂ ನಿರುಪಮಂ ನಿಷ್ಠೆಯಂ ಹೇರಿದಂ
ಭವಜಳಧಿಯಂ ದಾಂಟುವಂತೆ ಹೋಗುತ್ತಮಿರೆ
ಶಿವನೇಕ ನಿಷ್ಠೆ ನಡೆವಂತೆ ನಡೆವುತ್ತಮಿರೆ
ನಡುವೆ ನಿಂದೆಲೆ ಸೋಮನಾಥ ಬಾರೈ ಬಾರ
ವೃಡಭಕ್ತ ಭೀಮ ಭಾಳಾಕ್ಷ ಬಾರೈ ತಂದೆ
ಎನ್ನ ತವನಿಧಿಯೆ ಬಳಲಿಸದೆ ಬಾರೈ ತಂದೆ
ಎನ್ನ ಸುಖನಿಧಿಯೆ ಕಾಡದೆ ಕರುಣಿಸೆಲೆ ತಂದೆ
ಚಂದ್ರಧರ ಮದನಹರ ನಿನ್ನ ಮೊಗಮಂ ತೋರ
ಇಂದ್ರಾದಿ ಸುರನಿಕರವಂದ್ಯ ಪದಮಂ ತೋರ
ತೋರದಿರ್ದೊಡೆ ನಿಲುವನಲ್ಲೆಂದು ನಿಶ್ಚೈಸಿ

ಮೀರಿರ್ದ ನುಡಿ ಶಿವನ ಕಿವಿಗಳೊಳ್ಕೈಳ್ಕೈಸಿ
ಕೇಳ್ದು ಸದ್ಯೋಜಾತನಿರಬಾರದೆಂದಲ್ಲಿ
ತಾಳ್ದು ಕಾರುಣ್ಯಮಂ ಮೇಲೆ ನೆಗೆವುತ್ತಲ್ಲಿ
ಭಕ್ತನೊಲವಿನ ಹರಣಮೊಲಿದು ನೆಗೆತರ್ಪಂತೆ
ಭಕ್ತಿರಸದಿಂ ಮುಕ್ತಿಪದ ಮೊಗೆದು ಬರ್ಪಂತೆ
ಹಸಿಯ ಬೆಳ್ದಿಂಗಳಂ ಕರೆವುತಂ ಮೆರೆವುತಂ

ಎಸೆವ ರವಿಕಿರಣಮಂ ಬೆಳಗುತಂ ತೊಳಗುತಂ
ಜನನ ವರ್ಜಿತನಲ್ಲಿ ಹುಟ್ಟಿನೊಳ್ತೋರುತಿರೆ
ಮನಸಿಜ ಹರ ಕರುಣಮಂ ದೆಸೆಗೆ ಬೀರುತಿರೆ

ಕಂಡಾಗಳನುಕೂಲ ಮಾಹೇಶ್ವರರ್ಕೂಡೆ
ಕೊಂಡಾಡಿ ಗುಡಿಗಟ್ಟಿ ಹರುಷಮಂ ತಳೆದಾಡೆ
ದಣ್ಣಾಯಕರ್ಕಂಡಿದೇನೆಂಬ ಪರಿ ದೇವ
ಬಣ್ಣವಣ್ಣಿಗೆಯ ಪೂಜೆಯನುಳಿದೆ ಎಲೆ ದೇವ
ಗಂಧವಕ್ಷತೆ ಪೂಗಳಂ ಬಿಟ್ಟು ಬರ್ಪರೆ
ಬಂಧುರರೊಯ್ಯನುಳಿದೊರ್ವರೈತರ್ಪರೆ
ಎಂದಲ್ಲಿ ಶರಣಸತಿ ಮುಳಿದು ಹುರುಡಿಸುವಂತೆ
ಅಂದು ಶಿವನ ಸ್ನೇಹಮಂ ಘನಂ ಮಾಳ್ಪಂತೆ
ಶರಣರೆಲ್ಲಂ ನೋಡಿ ಕೌತುಕಂ ಬಡುತಮಿರೆ
ಪರಿಜನವಿದೇನಿದೇನೆನುತ ನೋಡುತ್ತಮಿರೆ
ಮತ್ತೆ ಬಿಜಯಂಗೈಸಿದಂ ಸೋಮನಾಥನಂ
ಉತ್ತಮ ಸ್ನೇಹ ವರಗಣನಾಥ ಯೂಥನಂ
ನೋಡ ಬಿಜಯಂಗೈಸಿ ವೀರನಾರುತ್ತಮಿರೆ
ನೀಡಾಗದಂತಲ್ಲಿ ಬರವನೆಳಸುತ್ತಮಿರೆ
ಭಕ್ತನ ಪರಿಚ್ಛೇದದತಿ ಭಾಷೆಗಂಜುತಂ
ಭಕ್ತಿಸುಲಭಂ ತನ್ನ ಮನದೊಳಗೆ ಪೆರ್ಚುತಂ
ಏಕನಿಷ್ಠೆಗೆ ಮೆಚ್ಚಿ ದಾಸಣದ ಪೂವೆರಸಿ
ಲೋಕೈಕನಾಥನಕ್ಷತೆ ಗಂಧ ಕುಳವೆರಸಿ
ಶಂಕರಂ ಭೋಂಕನನುರಾಗವೇರುತ್ತಲ್ಲಿ
ಮನ್ನಣೆಯ ದಣ್ಣಾಯಕರ ಕರದೊಳಿರಲಲ್ಲಿ
ನಳನಳಿಸಿ ಬೆಳಬೆಳಪ ಧವಳಾಂಗನಂ ಕಂಡು
ಎಳೆದಿಂಗಳೆಸೆವ ಜಡೆಗಳ ನೀರನಂ ಕಂಡು
ಪಾರಿಜಾತ ಪ್ರಸೂನಾಮೋದನಂ ಕಂಡು
ಮಾರಾರಿಯಂ ಕಂಡು ಕಾರುಣಿಕನಂ ಕಂಡು
ತಣಿದು ತೂಗಾಡುತಂ ಮಿಗೆ ಕುಳಿಕೋಡುತಂ
ಎಡೆಯುಗಲ ದೊಪ್ಪುತಂ ಹರುಷದಿಂದಪ್ಪುತಂ



ಮುದದಿಂದ ಶರಣತತಿ ನಿಬ್ಬಣಿಗರಾಗುತಿರೆ
ನದಿಯು ಸುಣ್ದೆರೆ ಸರಿದು ನೋಟ ಒಂದಾಗುತಿರೆ
ಕೈಗೂಡಿ ಶರಣಸತಿ ಲಿಂಗಪತಿಯೊಡನೆಂದು
ಸೈಗೆಡೆದು ಶರಣರೆಲ್ಲುತ್ಸವಿಸುತಿರಲಂದು
ಕರೆವ ಪೂಮಳೆಯೊಳಗೆ ಮೊಯ್ವ ದುಂದುಭಿಯೊಳಗೆ
ಮೊರೆವ ಬಿರುದಿನ ಕಹಳೆಗಳ ಘನ ಧ್ವನಿಯೊಳಗೆ
ಬಂದ ಪುಷ್ಪಕವನೀಕ್ಷಿಸುತ ದಣ್ಣಾಯಕರು
ನಿಂದು ಹಾರೈಸುತಂ ಸದುಭಕ್ತಿವಾಹಕರು
ಶರಣರೆಲ್ಲಾಘೆ ಚಾಂಗು ಬೊಲ್ಲೆಂದು ಪೊಗಳುತಿರೆ
ಧರಣಿಯ ಜನಂ ಜಯಜಯೆಂದು ಪೊಡೆವಡುತಮಿರೆ

ಹೊಸವಿಮಾನವನೇರಿ ನೆಗೆದ ಕೈಲಾಸಕ್ಕೆ
ದಶಭುಜತ್ರಿಣಯನನ ಸುಖತರ ನಿವಾಸಕ್ಕೆ
ಬಂದು ನಂದೀಶ್ವರನ ಬಾಗಿಲೊಳಗಂ ಪೊಕ್ಕು
ಇಂದುಧರನಂ ಕಂಡು ಭಕ್ತಿಭರದಿಂ ಮಿಕ್ಕು
ಪದ್ಯಂಗಳೋದುತಂ ಮೈಯಿಕ್ಕಿ ನಿಂದಿರಲು
ಚೋದ್ಯಕ್ಕೆ ಚೋದ್ಯವೆನಲೀಶ್ವರನ ಮುಂದಿರಲು
ಕಂಡು ಸರ್ವೇಶ್ವರಂ ನಂದೀಶನಂ ಕರೆದು
ಅಂಡಲೆವ ಮಾಯೆಯಂ ಗೆಲಿದ ಭರವಿಂತರಿದು
ಸಿರಿಯನೊಲ್ಲದೆ ಹಂಸಿಕೊಂಡರೇ ನಿಂತುಂಟೆ
ಪರಮ ಭಕ್ತಿಯ ಶ್ರೀಯನೆಡೆಗೊಂಡರಿಂತುಂಟೆ
ಅಮ್ಮಮ್ಮ ನೋಡಲಮ್ಮದೆ ನಿಂದರಿಂತುಂಟೆ
ಸುಮ್ಮಾನವೇರಿ ಮತ್ತೊಮ್ಮೆ ಬರಿಸಿದರುಂಟೆ
ಎಂದು ನಂದೀಶಂಗೆ ಹೇಳುತಂ ಹಿಗ್ಗುತಂ
ಬಂದ ಗಣಸಂಕುಳಕೆ ತೋರಿ ಮನವೊಗ್ಗುತಂ
ಕೇಶಿರಾಜಯ್ಯಂಗೆ ಗಣಪದವಿಯಂ ಕೊಟ್ಟು
ಭಾಸುರ ಸ್ನೇಹಮಂ ಮನದೊಳಗೆ ಮುಂದಿಟ್ಟು
ಅಮರಗಣ ಹೃತ್ಕಮಳ ವಿಮಲಾರ್ಕನೊಪ್ಪಿದಂ
ಕುಮುದಸಖ ಕಮಳಸಖ ಶಿಖಿನಯನನೊಪ್ಪಿದಂ
ನಾಗಕುಂಡಲ ನಾಗಪಾತರ್ಕ್ಯನೊಪ್ಪಿದಂ

ನಾಗಾಜಿನಾಂಬರ ಮಹಾಕಾಯನೊಪ್ಪಿದಂ
ತ್ರಿಣಯನಂ ಗಣಕುಲಂ ಫಣಿ ಕಟಕನೊಪ್ಪಿದಂ
ಅಣಿಮಾದಿ ಸಿದ್ಧಿಗುಣಗಣಸೇವ್ಯನೊಪ್ಪಿದಂ
ಪರ್ವತಾಧೀಶ ತನಯಾರ್ಧಾಂಗನೊಪ್ಪಿದಂ
ಗರ್ವಿತನೃಸಿಂಹ ಚರ್ಮಾವರಣನೊಪ್ಪಿದಂ
ಪಂಪಾಮುಖಾಬ್ಜ ವಿಳಸಿತ ತರಣಿಯೊಪ್ಪಿದಂ
ಹಂಪೆಯ ವಿರೂಪಾಕ್ಷನನವರತನೊಪ್ಪಿದಂ

ಕಂದ॥ ತುರುಗಿದ ಕೆಂಜೆಡೆಯರಸಂ
ಕರಿಗೊರಲಂ ಕೇಶಿರಾಜ ದಣ್ಣಾಯಕರಂ ॥
ಮೆರೆದಂ ಭಕ್ತಿಯನೆ ಮಗುಮೆ।
ಯೆರೆಯಂ ಕರುಣಿಪುದು ಹಂಪೆಯ ವಿರೂಪಾಕ್ಷಂ ॥೧॥

—:ಕೇಶಿರಾಜ ಕಥನಂ ಸಂಪೂರ್ಣಃ:—

**ಸಮಾಪ್ತ.**

---

# ಕುಂಬರ ಗುಂಡಯ್ಯನ ರಗಳೆ.

ಕಂ॥ ಅಂಡಲೆವ ಮಾಯೆಯಂ ಬೆಂ
ಕೊಂಡನನಂತಮಾಷ್ಯೈಕ ಪೂಜೆಯನೊಲವಿಂ।
ಕಂಡನನಿಳೆಯೊಳ್ಕುಂಬರ
ಗುಂಡನನುರೆ ಮೆರೆವನೆಂದು ಹಂಪೆಯರಾಯಂ ॥

**ರಗಳೆ**

ಎಂತೆನಲುತ್ತರ ಭಾಗದೊಳಿರ್ಪುದು
ಸಂತತ ಬಲ್ಲುಕೆ ಎಂದೆನಿಸಿರ್ಪುದು
ಅಲ್ಲಿರ್ಪಂ ಶಿವಪೌಳಿಯ ಶರಣಂ
ಸಲ್ಲಲಿತಂ ಮಾಯಾನಿರಹರಣಂ
ಘಟಕಾಯಕಮಾಯುತಮಾಗಿಪ್ಪುದು
ನಿಟಿಲಾಕ್ಷನ ನಟಣೆಗೆ ನಲಿವಪ್ಪುದು
ನಾಮಂ ಕುಂಬರಗುಂಡನೆನಿಪ್ಪುದು
ಸೋಮಧರನ ಕಿವಿಗಿನಿದಾಗಿಪ್ಪುದು
ನೇಮಸ್ತಂ ನೇಮಸ್ತಂ ಶಿವಶಿವ
ಭೂಮಿಯೊಳುತ್ತಮ ಭಕ್ತಂ ಶಿವಶಿವ
ಮಾಡುವ ಕಾಯಕವದನೇನೆಂಬೆಂ
ನೋಡಮೊಡೆನಗರಿದಿನ್ನೆಂತೆಂಬೆಂ

ಆಧಾರಮೆಯಾಧಾರಮದಾಗಿರೆ
ಮೇಧೆಯೆ ಚಕ್ರದ ನೊಳೆ ತಾನಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ವೃತ್ತಿಕೆಯಾಗಿರೆ

ನೆನಹಂ ಜಟಿದಾರಂಗಳವಾಗಿರೆ
ನಿಷ್ಠೆಯೆ ತಿರುಹುವ ದಂಡವದಾಗಿರೆ
ಮುಷ್ಟಿ ತಿರುಗುವುದು ಜೀವವದಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂ ದಾಹಿಸಿ
ಆನಂದ ಜಲಂ ಪಾವನಮಾಗಲು
ನಾನಾ ಭಕ್ತಿ ಕಟಾಹಮದಾಗಲು
ಶಿವಕಾರುಣ್ಯಾಂಬುಗಳಿಂ ತೀವುತೆ
ಶಿವಭಕ್ತರ್ಗಾನಂದದೊಳೀವುತೆ
ಇಂತೊಳಗಣ ಘಟಕಾಯಕಮೊಪ್ಪಲು
ಸಂತತ ಹೊರಗಣ ಮಾಟಮದೊಪ್ಪಲು
ಕುಂಬರನೆನಿಸಿರ್ಪಂ ಗುಂಡಯ್ಯಂ
ತ್ರ್ಯಂಬಕನಾಜ್ಞೆಯನೊಳಕೊಂಡಯ್ಯಂ

ಆಗಿರುತೊಂದೆವಸಂ ನಡೆತಂದಂ
ನಾಗಾಭರಣಾಲಯಕ್ಕೈತಂದಂ
ಶಿವನಿರ್ದಂ ಪೊಸ ಪೊಸ ಪೂಜೆಗಳಿಂ
ಭವನಿರ್ದಂ ಸಿಂಗರದೋಜೆಗಳಿಂ
ಶಿವಪೂಜೆಯನಚ್ಚರಿ ಮಿಗೆ ನೋಡುತೆ
ಭವಪೂಜೆಯನಕ್ಷಿಗಳಿಂ ಸವಿವುತೆ
ಪೂಜೆಗಳಕ್ಷಿಗಳೊಳ್ಪರಿದಂತಿರೆ
ಪೂಜೆಗಳಂತಸ್ಥಲದೊಳಗೆರಗಿರೆ
ನೋಡುತೆ ನೋಡುತೆ ನೋಡುತ್ತಿರ್ದಂ
ನೋಡಿದ ನೋಟದೊಳೆವೆ ಮರೆದಿರ್ದಂ
ಕಿರಿದಂ ಪೊತ್ತಂತಿರುತಂ ಮೆಲ್ಲನೆ
ಕರೆಗೊರಲನ ಹತ್ತಿರೆ ಸಾರ್ದೊಯ್ಯನೆ
ಜಳಪೂರಿತ ಲೋಚನದಿಂ ನೋಡುತೆ
ಪುಳಕಿಸುತಂ ಪರುಶನಮಂ ಮಾಡುತೆ



ಪಾದೋದಕಮಂ ಪ್ರಿಯದಿಂ ಕೊಳುತಂ
ಆದರದಿಂ ಕರುಣಮನೊಳಕೊಳುತಂ
ಪೊಡಮಡುತೊಯ್ಯನೆ ಪೊರಮಡುವಾಗಳು
ಮೃಡನಂ ಬೀಳ್ಕೊಂಡೈತರ್ಪಾಗಳು
ಮನದೊಳ್ ಕಣ್ಣೊಳ್ ಪೂಜಾಭಾವಂ
ನೆನಹಿನಲೊಪ್ಪುವ ಶಂಕರ ಭಾವಂ
ಬಿಡದಿರೆ ತನ್ನಯ ಮನೆಗೈತಂದಂ
ಕಡು ನಿಷ್ಠೆಯ ಭರದಿಂದೈತಂದಂ

ಊಟಂ ನಿದ್ರೆಗೆ ಮನವಿಲ್ಲಿಲ್ಲಂ
ನೋಟಂ ನುಡಿಗೆಡೆ ಇಲ್ಲೆಡೆ ಇಲ್ಲಂ
ಶಿವಪೂಜೆಯ ಕರಡಿಗೆಯಂತಿರ್ದಂ
ಶಿವಪೂಜೆಯ ಗವಸಣಿಗೆಯೊಲಿರ್ದಂ
ಇರುತೊಂದೇ ಸೊಗಯಿಸುತಿರೆ ನೋಡುತೆ
ಚರಿತದೆ ಘಟಕಾಯಕಮಂ ಮಾಡುತೆ
ಪಿಡಿಗುಂಡಂ ತಳದೊಳಗಳವಡಿಸುತೆ
ಎಡಗೈಯ್ಯಂ ಪೊಸ ಕೊಡದೊಳಗಿರಿಸುತೆ
ಕಲುವಲಿಗೆಯನಂತಳವಡೆ ಪಿಡಿಯುತೆ
ಚೆಲುವೆನಿಸುವ ಪೊಸ ಘಟಮಂ ಮಾಡುತೆ

ಬಾರಿಸುವಿಚ್ಛೆಗೆ ತನುವಲ್ಲಾಡಲು
ಸೇರಿಸುತೊಳಗಣ ಲಿಂಗಮದಾಡಲು
ಹೆಚ್ಚಿದನುಬ್ಬಿದನುತ್ತಮ ಭಕ್ತಂ
ಮುಚ್ಚಿದನಾಡಿಸುವದನಾ ಭಕ್ತಂ
ಅಂತಸ್ಥಲದೊಳ್ ಕಂಡಂ ಗುಂಡಂ
ಸಂತೋಷವನೊಳಕೊಂಡಂ ಗುಂಡಂ
ಇರುಳೆಲ್ಲಂ ನಿಲ್ಲದೆ ಬಾರಿಸುತಿರೆ
ಕರಣದೊಳಗೆ ಹರನೊಲಿದಾಡುತ್ತಿರೆ
ಮತ್ತಂ ಮತ್ತಂ ಹಿಂಗದೆ ಪೊಂಗುತೆ
ಸುತ್ತಂ ಸುಳಿವುತ್ತುರ್ಬುತೆ ಕೊರ್ಬುತೆ
ಬಾರಿಪ ಕೈಮುಚ್ಚಿದ ಕಣ್ಣೊಪ್ಪಿರೆ

ತೀರದ ಪುಳಕಂ ಮೆಯ್ಯೊಳ್ಕಿಕ್ಕಿರೆ
ನೆನೆದಂದದಿ ಮುಡಿಕೆಗಳಾಗುತ್ತಿರೆ
ಮನದಂದದಿ ಶಿವನೋಗಾಡುತ್ತಿರೆ
ಒಳಗಣ ಶಿವನಾಟಕ್ಕೆಡೆ ಮಾಡುತೆ
ಬೆಳಗಪ್ಪಂನ್ನಂ ಬಾರಿಸಿ ನೋಡುತೆ
ಇದು ನೇಮವೆನಗೆ ನೇಮವೆನುತ್ತಂ
ಮುದದಿಂದಾಡಿಸುತಿರ್ಪೆನೆನುತ್ತಂ
ಶಿವನಾಟದ ಸವಿಗಂಡಂ ಗುಂಡಂ
ಭವಭಕ್ತಿಯನೊಳಕೊಂಡಂ ಗುಂಡಂ
ಉದಯದ ನೇಮಕೆ ನುತ್ತ್ರೈತಂದಂ
ಸದಮಳ ಹೃತ್ಕಮಳಂ ನಡೆತಂದಂ

ಬಂದು ಶಿವಾಲಯದೊಳಗಂ ಪುಗುತಿರೆ
ಇಂದುಧರಂ ಬೇರಂದದೊಳಿರುತಿರೆ
ಪರಮಂ ಮುನ್ನಿನ ಪೂಜೆಯದೊಲ್ಲದೆ
ಇರೆ ಪೊಸ ಪೂಜೆ ಮನಂಗೊಂಬಂದದೆ
ಆ ಪೂಜೆಯನೆಡೆಗೊಂಡಂ ಮನದೊಳು
ತಾಪತ್ರಯರಹಿತಂ ಸನ್ಮನದೊಳು
ನೇಮಂ ಮಾಡಿಯೆ ತಿರುಗಿದನಾಗಳು
ಸೋಮಧರನನೊಳಗಿರಿಸುತ್ತಾಗಳು

ಬಂದೆಂದಿನ ತೆರದಿಂದಂ ಮಾಡುತ್ತಿರೆ
ಸಂದೊಪ್ಪುವ ಘಟಕಾಯಕದಿಂದಿರೆ
ನೇಮದ ಪೂಜೆಗಳೊಳಗಳವಡುತಿರೆ
ಕಾಮಹರಂ ನಲಿನಲಿದಾಡುತ್ತಿರೆ
ತಟಪಟ ಧಂಧಣದಿಂ ಧಿಮಿಕೆನಿಸುವ
ತಟಕಂ ಕಟ ದಿಕ್ಕಟ ತಟಕೆನಿಸುವ
ಹಲಗೆಯ ಶಬ್ದಂ ಕರಡೆಯ ಶಬ್ದಂ
ಹಲಗೆಯ ಶಬ್ದಂ ಮುರುಜೆಯ ಶಬ್ದಂ
ಮಡಕೆಯ ದನಿಯಾವುಜದ ಸುನಾದಂ
ಮಡಕೆಯ ದನಿ ಪೊಸ ಕಹಳೆಯ ನಾದಂ



ತಾಳಂ ಕೌಸಾಳದ ಹೊಸ ನಾದಂ
ಶೂಲಿಗೆ ಮೇಳವಣೆಯ ಮೃದು ನಾದಂ
ತಃನಾಗರಿ ಮಧುರತೆಯಂ ಬೀರುತೆ
ನಾನಾ ವಿಧ ನವಗತಿಯಂ ತೋರುತೆ
ಹೊರಗಲ್ಲಾಡಲು ಶಿವನೊಳಗಾಡಲು
ತೆರಹಿಲ್ಲದ ಪುಳಕಂಗಳ್ಮೂಡಲು
ಬಂದರನರಿಯದೆ ಹೋದರನರಿಯದೆ
ನಿಂದರನರಿಯದೆ ನೆರೆದರನರಿಯದೆ
ನಾಟವನರಿಯದೆ ನಿದ್ರೆಯನರಿಯದೆ
ನೋಟವನರಿಯದೆ ನೆನೆವುದನರಿಯದೆ
ತೂಗಾಡುತ ಮುಡಿಕೆಗಳಂ ಬಾರಿಸಿ
ಜಾಗಂಬೋಗುತ್ತಂ ನೆರೆ ಬಾರಿಸಿ
ಅಷ್ಟಂ ತ್ರಿಕಟಂ ಬಲಿವುತೆ ಬಾರಿಸಿ
ಅಷ್ಟಂ ಚಿತ್ತರಿಸುತ್ತಂ ಬಾರಿಸಿ
ಕುಣಿವುತೆ ಕೂಗುತೆ ನಲಿವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ
ಒಳಗಣ ಶಿವನಂ ನೆರೆ ಸಾಗಿಸುತಂ
ಬೆಳಗುವ ಬೆಳಗಂ ನೆರೆ ಜೋಗಿಸುತಂ
ನೃತ್ಯದ ನೆಲೆಯೊಳ್ ಮನವೆರಗುತ್ತಂ
ಸತ್ಯದ ಸುಖದೊಳ್ಮುಳುಗಾಡುತ್ತಂ
ಬಾರಿಸಿ ಬಾರಿಸಿ ನಿಲುತಂ ನಿಲುತಂ
ಸೇರಿದ ಸುಖದೊಳ್ಸಲುತಂ ಸಲುತಂ
ಪಲವುಂ ದಿನಸಂ ಸಲೆ ಬಾರಿಸುತಿರೆ
ಒಲವಿಂ ಸರ್ವೇಶನನಾಡಿಸುತಿರೆ
ನಂಬಿದ ಭಕ್ತನನರಿಯದುದೆಲ್ಲಂ
ಕುಂಬರನೆಂದಿಪ್ಪುದು ಜಗವೆಲ್ಲಂ

ಇರುತೊಂದೆವಸಂ ಘಟಕಾಯಕದೊಳು
ಪರಮನನಾಡಿಸುತಿರ್ಪವಸರದೊಳು
ತನ್ನಂ ಮರೆದೊಲವಿಂ ಬಾರಿಸುತಿರೆ

ಬಿನ್ನಂದೊರೆವ ಸುಖಿ ಬಾರಿಸುತಿರೆ
ಬಾರಿಪ ದನಿಗೀಶಂ ಹಾರೈಸುತೆ
ಕಾರುಣ್ಯಾಂಬುಧಿ ತನ್ನಂ ಮರೆವುತೆ
ಕೈಲಾಸದೊಳಿಸವೊಡ್ಡೋಲಗದೊಳು
ಶೈಲಜೆ ಕೆಲದೊಳಗಿಪ್ಪವಸರದೊಳು
ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಮಂ ಮರೆವುತೆ
ಶಿವಪದ ದಂದುಗೆ ಘಲಘಲಕೆಂದೆನೆ
ನವ ಕಟಕಧ್ವನಿ ಝುಂಝುಣಕೆಂದೆನೆ
ಮರ್ತ್ಯದ ದನಿ ಕೈಲಾಸದ ನೃತ್ಯಂ
ಸತ್ಯದ ದನಿ ಶಿವಲೋಕದ ನೃತ್ಯಂ
ದೇವನು ಭಕ್ತರೊಳೆಡದೆರಹಿಲ್ಲದೆ
ತಾವರೆ ನಾಳದ ನೂಲಿರ್ಪಂದದೆ
ಮಸಗುತ್ತಿರೆ ಇರೆ ಗಿರಿಸುತೆ ಕಾಣುತೆ
ಹೊಸ ಪರಿ ಕರುಣಿಪುದೆನುತಂ ಕೇಳುತೆ
ಇರೆ ಛೊಂಕನೆ ಶಿವನೆಚ್ಚತ್ತಿಂದಂ
ಹರುಷಂ ಮಿಗೆ ಗಿರಿಜೆಗೆ ತಾನೆಂದಂ

ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳ್ಮೂಡುತ್ತಿರ್ದೆಂ
ಇರುತಂ ಸ್ಥಾನದ ಭೇದಮನರಿಯದೆ
ಸುರನರಲೋಕದ ವಿವರಣೆಯರಿಯದೆ
ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ
ಸಲ್ಲೀಲೆಯೊಳೆನ್ನಂ ಮರೆದಿರ್ದೆಂ
ಎಂದು ಬೆಸಸೆ ಗಿರಿಸುತೆ ಬೆರಗಾದಳ್
ಇಂದುಧರಂಗೊಲವಿಂ ತಾನೆಂದಳ್

ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮುವ ಮೆಚ್ಚಿಪ ಶರಣನದಾವಂ
ದೇವಾ ಎನಗಿದು ಕೌತುಕವೆಂದೆನೆ
ದೇವಾ ಮರ್ತ್ಯದೊಳಿಂತಿದು ಪೊಸತೆನೆ



ನಡೆ ತೋರಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಂಟ್ಯದ ಫಲವಂ
ಎಂದಿರ್ವರುಮೊಂದಾಗಿ ಬರುತ್ತಂ
ಬಂದೀ ಮರ್ತ್ಯದೊಳವತರಿಸುತ್ತಂ
ಗಗನದೊಳಂಬಿಕೆಯಂ ಸ್ಥಿತಿರಿಸುತೆ
ಜಗದೀಶಂ ಸುಖಮಂ ಸಂತೈಸುತೆ
ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿರೆ

ಒಳಗಣ ಸುಖದಿಂ ಹೊರಗೆಲ್ಲಾಡದೆ
ಪುಳುಕಿಸುತಂ ಬಾರಿಸುತಂ ಮಾಣದೆ
ಕಂಡಭವಂ ಕಡು ನಿಷ್ಠೆಗೆ ಮೆಚ್ಚುತೆ
ಗುಂಡಯ್ಯನನೆಚ್ಚರಿಸಲ್ಬಗೆವುತೆ
ಒಳಗಾಡುವ ಲಿಂಗವನಾಕರುಷಿಸಿ
ಒಳಗಣ ಲಿಂಗವ ಶಿವನೋಳ್ಕೈಸಿ
ಲಿಂಗದೊಡನೆ ಕಣ್ದೆರೆದಂ ಗುಂಡಂ
ಹಿಂಗದೆ ಹೊರಗಣ ಲಿಂಗವ ಕಂಡಂ
ಕೊರ್ಬಿದನುರ್ಬಿದನುಲಿದಾಳ್ದಿರ್ದಂ
ಸರ್ಬ ಸುಖಂಗಳ್ಸಲೆ ಬರುತಿರ್ದಂ
ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಶಿವನಂ ಸುತ್ತಿ ಬರುತ್ತಂ ಬಾರಿಸಿ
ಭವನಂ ಬಲವಂದೊಲವಿಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆ ತೂಗುತೆ
ಕೊನೆವುತೆ ತೂಗಾಡುತೆ ಸುಖಿಯಾಗುತೆ
ಕೊಂಕುತೆ ಬಂಕುತೆ ಹಾರೈಸುತ್ತಂ
ಬಿಂಕಂಬೆತ್ತು ಬುಜಿಂದಾಡುತ್ತಂ
ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ
ಸುಖದಾಟಂ ತನ್ನಂ ಬೆಂಬತ್ತಲು

ಸುಖಮುಖದಿಂದಂ ಮನಮುಂ ಸುತ್ತಲು
ಒಳಗಾಡಿದೆನಿನಿತುಂ ದಿನವೆನುತುಂ
ಇಳೆಯುರಿಯಲ್ ಹೊರಗಾಡುವೆನೆನುತುಂ
ದಶಭುಜಮುಂ ದಿಕ್ತಟಕಂ ಪಸರಿಸಿ
ಎಸೆವ ಕರಂಗಳನೆತ್ತಲ್ಕೇಮಿಸಿ
ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೆತ್ತಲ್
ಜಡೆಗಳ್ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿಕಳೆಯುಲ್ಲಾಡುತ್ತಿರೆ
ಕಡು ಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಥಂ ಥಂ ಡಣಲೆನೆ
ತಿಸುಳದಿ ಹರಿಯುವ ತಾರಂ ತಿರ್ರನೆ
ತಿರುಗುತ್ತಿರೆ ಅಹಿಗಳ್ಹೆಡೆ ಎತ್ತಲು
ಕರಿಯ ತೊವಲ್ನಭವಂ ಚೋಹರಿಸಲು
ಸರಸಿಜಭವನ ಶಿರಂ ಜೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳ ರವಂ ಘುಲುಘುಲುಕೆನೆ
ತೊಂಗಲ ಘಂಟೆ ಥಣಂ ಥಂ ಥಣಲೆನೆ
ಆಡಿದನಾಡಿದನಾಹಾ ಶಂಕರ
ನಾಡಿದನಾ ಗುಂಡನ ಮುಂದೀಶ್ವರ
ನಾಗಸ್ವರಲೋಕದ ವಾದ್ಯಂ ಬರೆ
ಬೇಗಂ ತುಂಬುರರುಪ್ಪಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮುಡಕೆಯ ವಾದ್ಯಂ ಸಾಲ್ಗೆಂದೆನುತಿರೆ
ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಈರ್ವರನೀಕ್ಷಿಸಿ ಗಣಪತಿ ಕುಣಿಯಲು
ಸರ್ವಸ್ಥಾವರಜಂಗಮವಾಡಲು



ಮುಡಕೆಯ ಶಬ್ದಕ್ಕಾಡುತ್ತಿರ್ದಂ
ಮೃಡನಮೀರ ಬೆರಸಾಡುತ್ತಿರ್ದಂ
ನಾನಾ ಮುಖದಾನಂದಂ ಪುಟ್ಟಲು
ನಾನಾ ರವವಂಬರವಂ ಮುಟ್ಟಲು

ಗಿರಿಸುತೆ ಕಂಡತಿ ಚೋದ್ಯವೆನುತ್ತಂ
ನರಲೋಕಂ ಕೆಡಲಾಗದೆನುತ್ತಂ
ಮೀರಿದೊಡರಿದೀಶನ ಪರಿ ಎನುತುಂ
ಮೀರದ ಮುನ್ನಂ ಮಾಣಿಪೆನೆನುತುಂ

ದೇವ ಸದಾಶಿವ ಶಾಂತಪ್ರಭುವೇ
ದೇವ ಸುಧಾಕರ ಧರ ಮನುವಿಭುವೇ
ದೇವ ಕೃಪಾಕರ ಶಂಕರ ಶಂಕರ
ದೇವ ನತಜ್ಜನವರದಾಭಯಕರ
ಕರುಣಿಸನಂತವಿಭೂಷವಿಭೂಷಿತ
ಕರುಣಾಕರ ಸಜ್ಜನವರಪೋಷಿತ
ಕರುಣಿಸು ಶೂಲಧರಪ್ರತಿಶೂನ್ಯನೆ
ಕರುಣಿಸು ಶಿವಭಕ್ತಾಳಿಗನನ್ಯನೆ
ಭರ್ಗನೆ ಭೀಮನೆ ಭಾಳೇಕ್ಷಣನೇ
ದುರ್ಗತ್ರಯಕಾನನಹುತವಹನೇ
ಕರುಣಿಸೆನುತ್ತಂ ಗಿರಿಸುತೆ ಹೊಗಳಲು
ಕರುಣಾರ್ಣವವಂಬಿಕೆಯೊಕ್ಕೆಗಳಲು

ಕೇಳುತೆ ಮೆಲ್ಲನೆ ನಾಟ್ಯವನುಡುಗುತೆ
ಶೈಲಜೆಯಿಚ್ಚೆಗೆ ಸಮತೆಗೆ ಸೇರುತೆ
ಆಡುವ ಗಣಕುಲವಂ ಸ್ಥೈತಿರಿಸುತೆ
ನೋಡುವ ಪಾರ್ವತಿಗಭಯಮನೀವುತೆ
ಕುಣಿದಾಡುವ ಗುಂಡಯ್ಯನನೀಕ್ಷಿಸಿ
ತ್ರಿಣಯ ಸದಾನಂದದೊಳಾಲಿಂಗಿಸಿ
ಬಂದು ವಿಮೂರ್ಧ್ನಿಘ್ರಾಣಂ ಮಾಡುತೆ
ಇಂದುಧರಂ ಸಂತೋಷದೊಳಾಡುತೆ

ಭುಜಗಾಭರಣಂ ಕರುಣಂ ಮಾಡುತೆ
ಅಜಶಿರಕರಸಂತೋಷಂ ಮಾಡುತೆ
ಜಳಪೂರಿತಲೋಚನದಿಂ ನೋಡುತೆ
ನಳನಳಿಪಂಗದಿ ಬಿಗಿಬಿಗಿದಪ್ಪುತೆ

ಹೊಸ ಪುಸ್ತಕದೊಳು ಹರುಷದೊಳೀರುತೆ
ಪಶುಪತಿ ದೇವಗಣಾಳಿಗೆ ತೋರುತೆ
ತರದಿಂ ಸೂಸುವ ಹೊಸ ಹೂಮಳೆಯೊಳ್
ನೆರೆದು ವಿರಾಜಿಪ ಮುರುಜದ ಧ್ವನಿಯೊಳ್
ನೆಗೆದಂ ಗಗನತಳಕ್ಕೆ ಮಹೇಶಂ
ಬಗೆ ಮಿಗೆ ನಡೆತಂದಂ ಗಿರಿಜೇಶಂ

ನಲವಿಂ ಕಲಧೌತಾದ್ರಿಯೊಳೊಪ್ಪುವ
ನಿಳಯದೊಳನುಪಮ ಕಾಂತಿಯೊಳೊಪ್ಪುವ
ಭದ್ರಾಸನದೋಳ್ಕ್ರೀಳ್ಳೈಸುತ್ತಂ
ರುದ್ರಂ ಗುಂಡಯ್ಯನನೋವುತ್ತಂ
ಜಗವೆಲ್ಲವನೊಲಿದಾಡಿಸುವೆನ್ನಂ
ಸೊಗಯಿಪ ತನ್ನ ಸುನಾದಕ್ಕೆನ್ನಂ
ಮಡಿಕೆಯ ದನಿಗಾಡಿಸಿದವರುಂಟೇ
ಪೊಡವಿಯೊಳಿಂತಪ್ಪುನ್ನತರುಂಟೇ
ಎಂದನವರತಂ ಕೊಂಡಾಡುತ್ತಂ
ಇಂದುಧರಂ ನೆರೆ ಮುಂಡಾಡುತ್ತಂ
ಗಣಪದಮಂ ಗುಂಡಯ್ಯಂಗೀವುತೆ
ಗಣಸಂಕುಳದೊಳು ಸುಖದಿಂದೋವುತೆ
ಹರನೊಪ್ಪಿದ ಪುರಹರನೊಪ್ಪಿರ್ದಂ
ಗಿರಿಜಾಪತಿಯೊಪ್ಪಿದನೊಪ್ಪಿರ್ದಂ
ಭಕ್ತರ ಭಾಗ್ಯದ ನಿಧಿಯೊಪ್ಪಿರ್ದಂ
ಭಕ್ತರ ಕಣ್ಣಿಂ ಸುಖಿಯೊಪ್ಪಿರ್ದಂ
ಶರಣರ ಸಂಗದ ಗತಿಯೊಪ್ಪಿರ್ದಂ
ಹರಿಯಜರರಿಯದ ಶಿವನೊಪ್ಪಿರ್ದಂ



ಹೆಂಪಿನ ಹೆಜ್ಜಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

**ಕಂದ**॥ ಖಂಡಶಶಿಮೌಳಿಕುಂಬರ
ಗುಂಡನ ಸುತನೆಂದು ಭಕ್ತಿಯಂ ಕುಡುಗೆಮುಗು
ದ್ದಂಡತರ ದಂಡಧರ ಹರ
ಮಂಡಿತನಯನಂ ಪುರಾರಿ ಹಂಪೆಯುಂರಾಯಂ

# ಹಾವಿನಹಾಳ ಕಲ್ಲಿದೇವ.

ಕಂ॥ ಬಲ್ಲಿದನೆಲ್ಲಾದೇವರ
ವಲ್ಲಭ ನಿಳೆಗೆಲ್ಲರ ಪೊರೆದವನೆನಗಂದೆಂತುಂ ।
ನಲ್ಲಿಂ ಹಾವಿನಹಾಳಿನ
ಕಲ್ಲೈಯ್ಯನ ಸುತನೆನಿಸು ಹಂಪೆಯ ವಿರುಪಾಕ್ಷಾ.

**ಟೀಕು:— ಪದ್ಯ ಅಶುದ್ಧವಾಗಿದೆ.**

## ರಗಳೆ.

ಧರೆಗೆ ಹಾವಿನಹಾಳ ಕಲ್ಲೈಯ್ಯನೊಪ್ಪುವಂ
ಹರಭಕ್ತರಿಂ ವಿಪ್ರರಿಂದಧಿಕಲೊಪ್ಪುವಂ
ಅಲ್ಲೀ ಸ್ವಯಂಭು ಕಲಿದೇವರಿರ್ಪರು ನೋಡ
ಎಲ್ಲರ್ಗೆ ತಾಯಿ ತಂದೆ ಗುರುವೆನಿಪಂ ನೋಡ
ಇಂತಪ್ಪ ಪುರದೊಳಗೆ ಶಿವನೈಯ್ಯನೊಪ್ಪುವಂ
ಅಂತವರ್ಗೆ ಪುಣ್ಯಸತಿ ಸೋಮವ್ವೆಯೊಪ್ಪುವಳ್
ಪೆಸರಾಗೆ ಸುಖದಿಂದಲಿರ್ಪರಾ ಊರೊಳಗೆ
ಎಸೆಯುತಿರೆ ಹೊನ್ನಕಾಯಕದೊಳಗೆ ತೊಳತೊಳಗೆ
ಧನದೊಳುಂ ಧಾನ್ಯದೊಳು ಕೊರತೆ ಇಲ್ಲದೆ ಪೆರ್ಚೆ
ಘನಸಂಪದಕ್ಕೆ ಸಂತೋಷದಿಂ ವೈವೆಚ್ಚೆ
ಪುತ್ರನಿಲ್ಲದ ಚಿಂತೆ ಚಿತ್ತದೊಳು ನೆಲೆಗೊಂಡು

ನೇತ್ರತ್ರಯನು ಕಲ್ಲಿನಾಥನಲ್ಲಿಗೆ ಬಂದು
ದೇವ ಕರುಣಿಪುದೈಯ್ಯ ಎನಗೋರ್ವ ಪುತ್ರನಂ
ದೇವ ನಿಮ್ಮಡಿಯು ನೆಚ್ಚಿನ ಸಚ್ಚರಿತ್ರನಂ
ಕೊಡು ನಿನ್ನಪೆಸರನಿಟ್ಟಪೆನೆಂಬ ನುಡಿಯೊಡನೆ
ಮೃಡನ ಸಿರಿ ಮುಡಿಯಿಂದ ಒಂದು ಹೂ ಬರಲೊಡನೆ
ಕೊಂಡಾ ಪ್ರಸಾದಮಂ ಸತಿಯುದರದೊಳಗಿರಿಸಿ



ಕೊಂಡು ಪಾದೋದಕಮನೀರ್ವರುಂ ಸತಗರಿಸಿ
ಹರುಷದಿಂ ತಿರುಗಿ ನಿಜನಿಳಯಕ್ಕೆ ನಡೆತಂದು
ಇರೆ ಗರ್ಭ ಉದ್ಭವಿಸಿತಾ ಮಾನಿನಿಯೊಳಂದು

ಒಳಗೆ ಗರ್ಭಂ ಬೆಳೆಯೆ ಹೊರಗೆ ತನು ನಳನಳಿಸೆ
ತಿಳಿದು ಮೆಲ್ನಡೆ ಜಘನಭಾರದಿಂ ತೀರ್ದೈಸೆ
ತ್ರಿವಳಿ ತಲೆಗರೆಯೆ ನಾಭಿಯು ವಿಕಾಸಮನೇರೆ
ನವಬಾಸೆಯಡರೆ ನೆಲೆಮೊಲೆಯ ಕುಡಿ ಕಪ್ಪೇರೆ
ಮೊಗವಲರ್ದು ಮೆಲು ನುಡಿಯ ಪರಿಮಳವ ಬೀರುತಿರೆ
ನಗೆಗಂಗಳೊಯ್ಯನೆ ಬಳಲ್ಕೆಯಂ ಬೆಳಸುತಿರೆ
ಕೇಶಪಾಶಂ ಕೊರ್ವಿ ಕುಡಿ ನಿಮಿರ್ದು ಬೆಳೆವುತಿರೆ
ಆಶೆ ಪುತ್ರನ ಮೇಲೆ ಪರ್ವಿ ಪಲ್ಲೈಸುತಿರೆ
ನವಮಾಸವಾಯ್ತು ಸತಿ ಸಂತಸದೊಳೊಳ್ಪಾದೆ
ನವಮಾಸದೊಡನೆ ಶುಭದಿನ ಮುಹೂರ್ತಂ ಕೂಡೆ
ಪಡೆದಳಾನಂದಮಯನೆಂದೆನಿಪ ಕಂದನಂ

ಪಡೆಯೆ ಶಂಕರನ ಭಕ್ತಿಜ್ಞಾನಸ್ಪಂದನಂ
ಕಲ್ಲಿನಾಥನ ಪ್ರಸಾದದ ಬೆಣ್ಣೆಯಂ ತಂದು
ಅಲ್ಲಿ ಶಿಶುವಿಂಗಿಕ್ಕಿದರು ಲೀಲೆಯಿಂ ನಿಂದು
ಕಡು ನೇಹದಿಂ ಬಳಿಕ ಜಾತಕರ್ಮವ ಮಾಡಿ
ಬಿಡದೊಡನೆ ಹರುಷದಿಂ ನಾಮಕರಣಂ ಮಾಡಿ
ಕಲ್ಲಿನಾಥನ ಪೆಸರನಿಟ್ಟರಾನಂದದಿಂ
ಅಲ್ಲಿ ಬೆಳೆವುತ್ತಿರ್ದನಿಂದು ಕಳೆಯಂದದಿಂ
ಒಂದೆರಡು ಮೂರು ನಾಲ್ಕೈದಾರು ವತ್ಸರಂ
ಸಂದಣಿಸಿ ಪತ್ತು ಪದಿನೈದು ಸಂವತ್ಸರಂ

ನೆರೆದ ಮಗನಂ ಕಂಡು ಪೆಸರೊಪ್ಪಿಸಲ್ಕೆನೆದು
ಹೆರೆ ಸೂಡಿದನ ಭಕ್ತಸಂತಾನಮಂ ಕರೆದು
ಹರುಷದಿಂದಾರಾಧನೆಯನಿತ್ತು ರಾಗದೊಳು
ತರದಿಂ ಸುವಾಸಿನಿಯರಂ ಕರೆದು ಬೇಗದೊಳು
ಕಲಶ ಕನ್ನಡಿವೆರಸಿ ಹೊಳೆವ ಲಲನೆಯರೊಳಗೆ

ಫಲಪುಷ್ಪನವ್ಯವಸ್ತ್ರಾಭರಣತತಿಯೊಳಗೆ
ಶಿವಭಕ್ತರೊಲಿದೊಲಿದು ನಡೆವ ಕೇಳಿಕೆಯೊಳಗೆ
ತವೆ ಗಗನದೊಳು ಕುಣಿವ ವೃಷಭಕೇತನದೊಳಗೆ
ನಡೆತಂದು ಕಲ್ಲಿನಾಥನ ನಿಳಯಮಂ ಪೊಕ್ಕು
ಮೃಡನ ಶಂಕರನ ಶಿವಶುಭನಿಳಯಮಂ ಪೊಕ್ಕು
ಪೆಸರೊಪ್ಪಿಸಲ್ಕೆ ಶಿವಭಕ್ತರೆಲ್ಲಂ ಬಂದು
ಪಶುಪತಿಯ ಮುಂದೆ ಸದ್ಭಕ್ತಿಯಿಂದಂ ನಿಂದು
ದೇವಂಗೆ ಭಕ್ತನಂ ಭಕ್ತಂಗೆ ದೇವನಂ
ಭಾವಶುದ್ಧಿಯೊಳೈದೆ ತೋರುತ್ತ ನತಜನಂ
ಕಲ್ಲಿನಾಥಂ ನಿನಗೆ ಗತಿ ನಿನಗೆ ಮತಿ ನಿನಗೆ
ಕಲ್ಲಿನಾಥಂ ಕಲ್ಪತರು ನಿನಗೆ ಗುರು ನಿನಗೆ
ಕಲ್ಲಿನಾಥನನರಿದು ಪೂಜಿಪುದು ಕಲ್ಲೈಯ್ಯ
ಎಲ್ಲಾ ಮನುಷ್ಯರೋಪಾದಿ ನೀನಲ್ಲೈಯ್ಯ
ಎಂದೆನುತೆ ಕಲ್ಲಿನಾಥನನಲ್ಲಿ ಬೀಳ್ಕೊಂಡು
ಬಂದರಾನಂದದಿಂ ಸಂತಸವನೊಳಕೊಂಡು
ಬಂದು ಪುರಮಂ ಪೊಕ್ಕು ಪರಮಸುಖದಿಂದಿರಲು

ಅಂದು ಕಲ್ಲೈಯ್ಯನಾ ಮನ ಶರ್ವನೊಳಗಿರಲು
ನಿಚ್ಚನಿಚ್ಚಂ ಬಂದು ನೇಮಮಂ ಮಾಡುತ್ತ
ಅಚ್ಚರಿಯು ಮಿಗೆ ಭಕುತಿ ಘನಕೆ ಘನವಾಗುತ್ತ
ನಿಂದೆಡೆಯೊಳುಂ ಕಲ್ಲಿನಾಥ ಶರಣೆಂದೆನುತೆ
ಬಂದೆಡೆಯೊಳುಂ ಕಲ್ಲಿನಾಥ ಶರಣೆಂದೆನುತೆ
ವಿಪ್ರರೆಲ್ಲಂ ಬಂದು ಕೀರ್ತಿಸಲು ನೋವುತಂ
ಅಪ್ರಸ್ತುತಂಗಳಂ ಗಳಪುತಿರೆ ಕೊರಗುತಂ
ಉತ್ತರಂಗ.ಡಲರಿಯದಲ್ಲಿ ಖಾತಿಗೆ ಸಂದು
ಒತ್ತರಿಪ ತರ್ಕದೊಡನೊದಗಲಾರದೆ ನಿಂದು
ಮನದೊಳೆಲ್ಲವನರಿದು ಮಾತು ಬಾರದೆ ನಿಂದು
ಅನುಗೆಟ್ಟ ವಿಪ್ರರಂ ಗೆಲುವ ಛಲದಿಂ ನಿಂದು
ಕಲ್ಲಿನಾಥಂಗೆ ನಿಚ್ಚಂ ಬಿನ್ನಪಂಗೈದು
ಅಲ್ಲಿ ಶಿವನುಸುರದಿರೆ ಮನದೊಳಗೆ ಬಿಸುಸುಯ್ದು



ಪೂಜೆಯಂ ನೋಡುತಂ ನೋಡಿ ನೆರೆ ಬಾಳುತಂ
ಓಜೆಯಂ ಮೀರುತಂ ತರ್ಕೈಸಿಯಾಗುತಂ
ಅಗಲದಾರೈಸುತಂ ನೇಹದಿಂ ಸಲುಹುತಂ
ಮಿಗೆ ನೆಚ್ಚಿ ಮೆಚ್ಚುತಂ ಕುಣಿದು ಕುಕಿಲಿರಿವುತಂ
ಇಂತು ಪುರದೊಳಗೆ ಕಲ್ಲೈಯ್ಯಂಗಳಿರುತಮಿರೆ
ಸಂತತಂ ಕಲ್ಲಿನಾಥನ ಭಕ್ತಿ ಸುಖದೊಳಿರೆ

ಇತ್ತಲಾ ಬಿಜ್ಜಳನ ಮನೆಯ ನಾಯಕನೆನಿಪ
ಉತ್ತಮರನರಿಯದತಿ ದುರ್ಜನಂ ತಾನೆನಿಪ
ಪೆಸರ ಕಸಿಕಿಲ ನಾರಣಂ ಬಂದು ಪುರದೊಳಗೆ
ಎಸೆಯೆ ಕುಳ್ಳಿರ್ದು ಕರೆಯಿಸಿದನಾ ಕ್ಷಣದೊಳಗೆ
ಬಂದ ಶಿವನೈಯ್ಯಂಗೆ ನುಡಿದನಾ ನಾರಣಂ
ಚಂದದಾಭರಣಮನಲಂಕರಿಪ ಕಾರಣಂ
ಕೇಳೈಯ್ಯ ಶಿವನೈಯ್ಯ ನಿನ್ನ ಕೆಲಸಕ್ಕೆ ಪಡಿ
ಕೇಳಲಿಲ್ಲೀ ಜಗದೊಳಗೆಲ್ಲರ್ ಹತ್ತು ಮಡಿ
ನಿನ್ನ ಪವನಾಲ್ಲ ನಿನ್ನಯ ಸುತನು ಕೌಶಲಂ
ಇನ್ನೊರ್ವನುಂಟೆ ಮಾಳ್ಪೆಯ ಜಾಣನುಜ್ವಳಂ
ಎಂದೊಂದು ಸಾವಿರದ ಘಟ್ಟಿಯಂ ಕೊಟ್ಟಲ್ಲಿ
ಒಂದು ಚಲ್ವುತ್ತರಿಗೆಯಂ ಮಾಳ್ಪುದೆನುತಲ್ಲಿ
ಹೋದನಾ ನಾರಣಂ ಶಿವನೈಯ್ಯನೊಲ್ದಿತ್ತ

ಸಾದರಂ ಮನೆಗೆ ಬಂದಲ್ಲಿ ಸಡಗರಿಸುತ್ತ
ಉತ್ತರಿಗೆಯಂ ಮಾಡಲೆಂದು ಸಂಭ್ರಮಿಸುತಿರೆ
ಬಿತ್ತರಿಸುವಡೆ ತನ್ನ ವಶವಲ್ಲದಿರುತಮಿರೆ
ಕಲ್ಲೈಯ್ಯನೊಮ್ಮೆಯುಂ ಕಲ್ಲಿನಾಥನೊಳಿರಲು
ಎಲ್ಲ ತೆರದಿಂ ತನಗೆ ಕೆಲಸವಪ್ಪಡದಿರಲು
ಚಿಂತಿಸಿ ಮನಂ ಮರುಗಿಯುರಸುಗೆಲಸಂ ಮಗನೆ
ಇಂತು ಬಂದುದು ಮಾಳ್ಪುದತ್ಯಂತವರಿದೆನಗೆ
ಮಗನಾವುದುಮನೊಲ್ಲನಾವಗಂ ಶಿವ ಮರುಳು
ಬಗೆಯನೀ ಮನೆವಾರ್ತೆಯಂದಮಂ ಮಿಗೆ ಮರುಳು

ಬಳಿಕ ಬರ್ಪುದು ರಜತಪರ್ವತಕೆ ಕಲ್ಲಯ್ಯ
ತೊಳತೊಳಪ ಗಣಪದದೊಳಿರ್ಪುದೆಲೆ ಕಲ್ಲಯ್ಯ
ಎಂದು ಕಲ್ಲಯ್ಯಂಗೆ ಬುದ್ಧಿಗಲಿಸುತ್ತಮಿರೆ

ಬಂದನಾ ಪೂಜಾರಿಯಂದೊಳಗೆ ಪುಗುತಮಿರೆ
ಕಲ್ಲಿನಾಥನ ಸುತ್ತಲುಂ ನೆತ್ತರೊಕ್ಕಿರಲು
ಕಲ್ಲಯ್ಯನಲ್ಲಿ ತಲೆಯಿಟ್ಟು ಮೂರ್ಛಿಸುತಿರಲು
ಕಂಡು ನಿಲಲಂಜಿ ಪರಿತಂದೂರ್ಗೆ ಪೇಳುತಿರೆ
ತಂಡದಿಂ ತವಕಿಸುತ್ತಲ್ಲಿ ಭಕ್ತಾಳಿ ಬರೆ
ಶಿವನಯ್ಯನುಂ ಸತಿಯುಮಾಳಲಿಂದೆ ಬರುತಮಿರೆ
ತವತವಗೆ ಪುರಜನಂ ಕೌತುಕಂಬಡುತಮಿರೆ

ಬಂದು ಶಿವಲಿಂಗದೊಳಗಿರ್ದ ಕಲ್ಲಯ್ಯನಂ
ನೊಂದು ಶಿವನಂ ಕೂಡಿಕೊಂಡ ಕಲ್ಲಯ್ಯನಂ
ಕಂಡು ಮೆಲ್ಲನೆ ಬಿಡಿಸಿ ತನುವನಾನಿಸಿಕೊಂಡು
ಇಂಡೆಗಳ ಕರುಳೆಲ್ಲವಂ ತೆಗೆದು ಕೈಕೊಂಡು
ಬಸಿರೊಳಗೆ ಕೂಡಿ ಪ್ರಸಾದಮುಮನೊಳಗಿಕ್ಕಿ
ಭಸಿತಮಂ ಮೆಯ್ಯೊಳುದ್ಧೂಳಿಸುತೆ ಮೆಯ್ಯಿಕ್ಕಿ
ಶಿವಭಕ್ತರೆಲ್ಲರುಂ ಕೇಳಿಕೆಗಳಂ ಮಾಡೆ
ಶಿವನ ಮುಂದೆಲ್ಲರುಂ ಪರಿಕೈತದೊಳ್ ಕೂಡೆ
ಮೆಲ್ಲನೆಚ್ಚತ್ತು ಕಣ್ದೆರೆದನಾ ಕಲ್ಲಯ್ಯ
ಎಲ್ಲರುಂ ಗುಡಿಗಟ್ಟಿ ಕುಣಿವುತಿರೆ ಕಲ್ಲಯ್ಯ
ಎಳ್ದು ಶಿವಲಿಂಗಮಂ ಬಲವಂದು ಪೊಡಮಟ್ಟು
ತಾಳ್ದು ಪುಳಕಂಗಳಂ ಗಣಕುಲಕೆ ಪೊಡಮಟ್ಟು
ಹರನ ಶರಣರ ನಡುವೆ ಮೆರೆಯುತಂ ನಡೆತಂದು
ಪರಮ ಹರುಷಂ ಮಿಕ್ಕು ಪುರದೊಳಗೆ ಪುಗುತಂದು
ವೇದದಿಂ ಶಾಸ್ತ್ರದಿಂ ಗೀತಮಂ ಪಾಡುತಂ
ವಾದದಿಂ ವಿಪ್ರರಂ ಗೆಲಿದು ನಲಿದಾಡುತಂ
ಲೋಕಾಯತರನಲ್ಲಿ ಬೌದ್ಧರಂ ಸೋಲಿಸುತೆ
ಲೋಕದೊಳ್ ಚಾರ್ವಾಕರಂ ಗೆಲ್ದು ರಂಜಿಸುತೆ



ಇರುತಮಿರೆ ಬಂದನಾ ಸಿದ್ಧರೇವಣದೇವ
ನರರ್ಗೆ ಪರಮಾನಂದಮೂರ್ತಿ ಶಿವಸದ್ಭಾವ
ನಲ್ಲಿ ಬರೆ ಕಂಡು ಕಲ್ಲಯ್ಯನಾನಂದದಿಂ
ಪಲ್ಲವಿಸೆ ಪುಳಕವಿದಿರೇರುತಿರೆ ರಾಗದಿಂ
ನಡೆತಂದು ಪರಿತಂದು ಪದಯುಗಳಮಂ ಪಿಡಿದು
ಕಡು ಲಲ್ಲೆಗರೆದು ಕಿಂಕುರ್ವಾಣಮಂ ತಳೆದು
ದೇವ ಶಿವಸಿದ್ಧ ಸದ್ಗುರುವೆ ಶಾಶ್ವತ ಗುರುವೆ
ದೇವ ಸಿದ್ಧರ ಚಕ್ರವರ್ತಿ ನತಸುರತರುವೆ
ಶಿವಯೋಗಿಗಳ ಗತಿಯೆ ನೆನೆವರ ಮಹಾಮತಿಯೆ
ಶಿವನಂತೆ ಭುವನದೊಳ್ ಬೆಳಗುತಿಪ್ಪನ್ನತಿಯೆ
ಕರುಣಿಸೆನಗೊರ್ವ ಗುರುವಂ ಪರಮ ಗುರುಮೂರ್ತಿ
ಕರುಣೆಸೆಲ್ಲಂ ಭುವನದೊಳಗುಜ್ಜಳಿಪ ಕೀರ್ತಿ
ಎಂದು ಬಿನ್ನೈಸಲೇಳಯ್ಯ ಕೇಳೆಂದೆನುತೆ
ಮುಂದಿರ್ದ ರುದ್ರಮುನಿದೇವರಂ ಪರಿಕಿಸುತೆ
ಮಗನೆ ಕಲ್ಲಯ್ಯಂಗೆ ಗುರುವಾಗು ಪೋಗಯ್ಯ
ಜಗಗೆ ವೆಗ್ಗಳವಾದ ಮಾಯೆಯಂ ನೀಗಯ್ಯ
ಎಂದಲ್ಲಿ ರುದ್ರಮುನಿದೇವರಂ ಕಳಪುತಿರೆ

ಬಂದನಾ ಕಲ್ಲಿನಾಥಂ ಮನದೊಳೀಸುತಿರೆ
ರಂಗಮಂಟಪದೊಳಗೆ ಶಿವಕಲಶಮುಮನಿರಿಸಿ
ಸಿಂಗದೊಲವಿಂ ಪಂಚ ಶುದ್ಧಿಯಂ ಸಂಗಡಿಸಿ
ಸುರುಚಿರ ವಿಭೂತಿಯಂ ಶಿವಪಟ್ಟಮಂ ಕಟ್ಟಿ
ಶರಣ ಸಂತತಿಯೊಲ್ದು ಸಂತೋಷಮಂ ಮುಟ್ಟಿ
ಗುರುಕಲಶದೊಡನೆ ಶಿವಕಲಶಂಗಳಂ ಪಿಡಿದು
ಪರಮಾನುರಾಗದಿಂ ಕಲಶೋದಕವನೆರೆದು
ಇಂತು ಗುರುರುದ್ರಮುನಿದೇವ ಬಿಜಯಂಗೆಯ್ಯೆ
ಸಿಂತೆ ಕಲ್ಲಯ್ಯನಾ ಶೈವರಾಜ್ಯಂಗೆಯ್ಯೆ
ಗುರುಹಸ್ತದಿಂ ಪಿಡಿಯೆ ಲಘುವಳಿದು ಗುರುವಾಗಿ
ಉರುತರ ಜ್ಞಾನಮಯನಾಗಿ ಸುಖತರವಾಗಿ
ಸಂತಸುಖದಿಂದಮಿರ್ದೊಂದು ದಿವಸಂ ಬಂದು

ಸಂತಸದೆ ಕಲ್ಲಿನಾಥನ ನಿಳಯದೊಳ್ ನಿಂದು
ಹಾರೈಸಿ ಹೊರೆಯೊಳಿರಿ ನೇಮವಮಂ ಮಾಡುತಿರೆ
ತೇಗೈಸಿ ರೋಮಾಂಚವಂಗದೊಳ್ ಬೆಳೆವುತಿರೆ
ಮುಟ್ಟಿ ನೆರೆ ಮುಟ್ಟಿ ಪಿಗೆ ಮುಟ್ಟಿ ಗದ್ಗದಿಸುತಂ
ನಟ್ಟ ಮಾನಸದೊಳಳವಟ್ಟು ದಳವೇರುತಂ
ಪೂಜೆಯೊಳಗಾಳುತ್ತೆ ಏಳುತ್ತಮಿರ್ಪಲ್ಲಿ
ಓಜೆಗೆಟ್ಟಕ್ಕರಿಂದೋಲೈಸುತಿರ್ಪಲ್ಲಿ
ಒಂದೊಂದುಗ್ರಸರ್ಪಂ ಪೂಜೆಗೆಯ್ವೆಡೆಗೆ
ನಿಂದು ಪಿಡಿಯುತ್ತು ಕರವಂ ತನಗೆ ಖಾತಿ ಮಿಗೆ
ಪಿಡಿಯೆ ಮೃಡನಂ ಕಲ್ಲಿನಾಥನಂ ನೋಡುತಂ
ಕಡು ನೊಂದು ಕಲ್ಲಯ್ಯನಲ್ಲಿ ಬಿನ್ನೈಸುತಂ

ನಿಮ್ಮನರ್ಚಿಸುತೆ ಪೂಜಿಸುತಿರ್ಪ ಸಮಯದೊಳ್
ನಿಮ್ಮ ಗೀತಂಗಳಂ ಪಾಡುವೀ ಸಮಯದೊಳ್
ಏನೊಂದು ವಿಘ್ನಂಗಳಾದೊಡಂತೆಲ್ಲವಂ
ನೀನೆ ಪರಿಹರಿಸಲ್ಕೆವೇಳ್ಪುದಂತೆಲ್ಲವಂ
ಎಲೆ ಮಹಾಲಿಂಗ ಕಲ್ಲೇಶ್ವರಾ ಕೇಳಯ್ಯ
ಸಲೆ ನಿಮ್ಮ ದೇವತನವಂ ಮರೆವುದೇನಯ್ಯ
ಇಂತೆಂದು ಗೀತವಮಂ ಪಾಡುತ್ತಮಿರ್ಪಲ್ಲಿ
ಪಿಂತೆ ಕಚ್ಚಿದ ಪಾವು ಜೀವಮಂ ಬಿಡಲಲ್ಲಿ
ಅರ್ಚಿಸುತ್ತಿರ್ದ್ದು ಬರವರಲೆಂದ ಕಲ್ಲಯ್ಯ
ನಚ್ಚರಿ ಮಿಗಲ್ಬರುತ್ತಿರೆ ಭಕ್ತ ಕಲ್ಲಯ್ಯ
ನಲ್ಲಿ ತನ್ನಂ ಕಚ್ಚಿದಹಿ ಸತ್ತು ಬಿಳ್ದಿರಲು
ತಲ್ಲಣಿಸಿ ಬಂದನಭವಂ ಮೆಚ್ಚಿ ನಗುತಿರಲು
ಬಂದು ಕಲಿದೇವ ನೀನಿಂತಿದಂ ಮಾಳ್ಪರೇ
ಇಂದೆನ್ನನತಿ ಕಠಿಣ ದಿಟ್ಟಿಯಿಂ ನೋಳ್ಪರೇ
ಇಂತೀ ನರಪಾವು ಕೋಂಕೆ ಮಿಗೆ ಸಾವರಿನೆ
ಇಂತಪ್ಪ ಸರ್ಪನೆನ್ನಂ ಮುಟ್ಟಿ ಸತ್ತುದೆನೆ
ಆನಿನ್ನದೆಂತಪ್ಪ ವಿಷಮ ವಿಷಕಾಯನೋ
ಏನೆಂದಪೇಂ ವಿಷಕೆ ವಿಷವಾಗಿ ನಿಂದೆನೋ



ಎನ್ನನಿಂತತಿ ಕಷ್ಟನಂ ಮಾಳ್ಪರೆಲೆ ದೇವ
ಎನ್ನನತಿ ನಿಷ್ಠುರ ಗುಣಕ್ಕಿಕ್ಕುವರೆ ದೇವ
ಎಂದು ಬಿನ್ನೈಸುತಿರೆ ಕಲ್ಲಿನಾಥಂ ನಗುತೆ
ಕಂದ ಭಯವೇಕಯ್ಯ ಪಾವು ಬರ್ದುಕಿತ್ತೆನುತೆ
ಸತ್ತ ಪಾವೆದ್ದುದಿನ್ನಂಜವೇಡೆಲೆ ಮಗನೆ
ಉತ್ತಮ ಶಿವಾಚಾರ ಭಯಭಕ್ತಿಯುತ ಮಗನೆ
ಪೊರಮಟ್ಟು ಬಂದು ಪರಿದಾಡುವಹಿಯಂ ಕಂಡು
ಹರೆ ಸೂಡಿದನ ಕೃಪೆಗೆ ಕೌತುಕವನೊಳಕೊಂಡು
ಗೀತವಂ ಪಾಡುತಂ ಸುಕೃತವಂ ಸೂಡುತಂ
ನೂತನ ಶಿವಾನಂದಸುಖದೊಳೋಲಾಡುತಂ
ಮಾರಮದಮರ್ದನನ ಭಕ್ತಿಯೊಳ್ ಬಾಳುತಂ
ವೈರಾಗ್ಯ ಒದಗುತೆ ಶಿವಜ್ಞಾನಿಯಾಗುತಂ
ನಿರುಪಮೈಶ್ವರ್ಯಯುತ ಪರಮಸುಖದಿಂದಮಿರೆ
ಹರನ ಪುರಹರನ ಕಾರುಣ್ಯಜಳನಿಧಿಯೊಳಿರೆ

ತಂದೆ ಶಿವನಯ್ಯನಾ ಕಲ್ಲಯ್ಯನಂ ನೋಡಿ
ಛಂದದಿಂ ಮದುವೆಯಂ ಮಾಡಲ್ ಮನಂಗೂಡಿ
ಎಲೆ ಮಗನೆ ಕಲ್ಲಯ್ಯ ನಿನಗೋರ್ವ ಕನ್ನೆಯಂ
ಲಲಿತಾಂಗಿಯಂ ಮದುವೆಯಂ ಮಾಳ್ಪೆ ಚನ್ನೆಯಂ
ಎಂದು ನುಡಿಯುತ್ತಮಿರೆ ಒಲ್ಲೆನಾಂ ಮದುವೆಯಂ
ನಂದಣಿಪ ಸಂಸಾರದಲ್ಪ ಸುಖಸೀಮೆಯಂ
ಒಲ್ಲೆನೆಂದಲ್ಲಿ ಪೊರಮಟ್ಟನಾ ನಿಶ್ಚಲಂ
ಸಲ್ಲೀಲೆಯಿಂ ಬರುತಮಿರ್ದನಾ ನಿಶ್ಚಲಂ
ತಂದೆ ತಾಯಂ ಬಿಟ್ಟು ಬಂಧುಕುಲಮಂ ಬಿಟ್ಟು
ಪಿಂದೆ ಪುಟ್ಟಿದ ಜನ್ಮಭೂಮಿಯಂ ನೆರೆ ಬಿಟ್ಟು

ಪಿತ ಮಾತೆ ಬಂಧು ಸಿದ್ಧರಾಮನೆ ತನಗೆಂದು
ಗತಿಮತಿಧನಂ ಸಿದ್ಧರಾಮನೇ ಶರಣೆಂದು
ಸೊನ್ನಲಿಗೆಗೈತಂದು ಶಿವಸಿದ್ಧನಂ ಕಂಡು
ಉನ್ನತ ಜ್ಞಾನಿ ವೈರಾಗ್ಯ ನಿಧಿಯಂ ಕಂಡು

ಎಂದಲ್ಲಿ ಚಿಂತಿಸುತ್ತೊಂದುಪಾಯವನರಿದು
ಮುಂದಿರ್ದ ಕಲ್ಲಯ್ಯನಂ ನೋಡಿ ಸುಖವಿಡಿದು
ಕಲ್ಲಯ್ಯ ಕುದುರೆ ಕೆಟ್ಟಿತು ನೋಡಿ ತನ್ನಿರೇ
ಕಲ್ಲಯ್ಯ ಇಲ್ಲಿರದೆ ಬೇಗದಿಂದರಿಸಿರೇ
ಎಂದೊಡಾ ಸಿದ್ಧರಾಮನ ಮಾಯೆಗೊಳಗಾಗಿ
ಬಂದನಿತ್ತಲ್ ಕುದುರೆಯರಸುತಂ ಬೇಳಾಗಿ
ಕುದುರೆಯಂ ಕಂಡು ಮತ್ತತಿ ವೇಗದಿಂ ತಿರುಗಿ
ಸದಮಳಂ ಬಂದನಾ ಗೋಪೆಗೆ ಭಯಂ ಪೊಡಗಿ
ಬರೆ ಗೋಪೆಯಂ ಮುಚ್ಚುಳಿಕ್ಕಿರ್ದುದಂ ಕಂಡ
ವರಸಿದ್ಧನಂ ಕಾಣದುರಿದು ಸಿಡಿಮಿಡಿಗೊಂಡು
ಸಿದ್ಧರಾಮಯ್ಯ ನಿನ್ನಂ ಕಾಣದಿರ್ಪೆನೇ
ಸಿದ್ಧರಾದಿತ್ಯನೇ ಕಾಣದಿರಲಾರ್ಪೆನೇ
ಎಲೆಲೆ ಸಾಕಾರದೊಳ್ ಭಕ್ತಿಸನ್ನಿಹಿತನೇ
ಎಲೆ ನಿರಾಕಾರದೊಳ್ ವ್ಯೋಮಕ್ಕತೀತನೇ
ತೋರಯ್ಯ ಸಿದ್ಧರಾಮಯ್ಯ ನಿನ್ನಯ ರೂಪ
ಆರೆನಿನ್ನಿರಲಾರೆನಳಿವೆನೆನ್ನಯ ರೂಪ
ಎನೆ ಗೋಪೆಯ ಬಾಗಿಲ್ಗೆ ಬಂದ ಸಿದ್ಧರದೇವ
ಅನವಧಿಗುಣಂ ನುಡಿದನಮಮ ಸಿದ್ಧರದೇವ
ಏನಯ್ಯ ಕಲ್ಲಯ್ಯ ಉಮ್ಮಳಂ ಬೇಡಯ್ಯ
ನಾನಗಲ್ದಿರ್ಪೆನೇ ತಾಪವಿನಿತೇಕಯ್ಯ
ಇನ್ನೊಂದು ತಿಂಗಳ್ಗೆ ಕರೆವಪ್ಪೆ ಕೇಳ್ನಿನ್ನ
ಇನ್ನುಂಜಬೇಡೆಲೆಲೆ ಕಲ್ಲಯ್ಯ ನೀಂ ಚೆನ್ನ
ಎಂದು ಬೆಸಸಿದೊಡರಿದು ಸಂತಸಮನೊಳಕೊಂಡು
ಬಂದನಾನಂದದಿಂ ಶಿವಸುಖಮನೆಡೆಗೊಂಡು

ಬಂದು ಮನೆಯಂ ಪೊಕ್ಕು ಕಲ್ಲಪ್ಪೆಯಂ ಕರೆದು
ಒಂದು ತಿಂಗಳ್ಗೆ ಕೈಲಾಸಕ್ಕೆ ಪಯಣಮಿದು
ನಿರುತವೆಂದರಿಪಿ ಲಿಂಗೋಪಚಾರಕೆ ಸಂದು
ಭರದಿಂದಲುದಕಮಂ ಕೊಂಡು ಬಾರಾ ಎಂದು
ಬೆಸಸೆ ಕಡುವೇಗದಿಂ ಬರುತಿರ್ದಳಾ ಭಕ್ತೆ



ಶಶಿಧರನ ಸದ್ಭಾವಮಂ ಚಿತ್ತದೊಳಗೊತ್ತಿ
ಆ ವೇಳೆಯೊಳ್ ಸೋಮಯಾಜಿಗಳ್ ಬರುತಿರಲ್
ತೀವಿ ಬೀದಿಯೊಳು ಮದಗಜವೊಂದು ಬರುತಿರಲ್
ಭರದಿ ಸೋಮಾಜಿಗಳ್ ಸೋಂಕಲಾ ಭಕ್ತೆಯಂ
ಹರಹರ ಮಹಾದೇವ ಪಾತಕವು ಮುಟ್ಟಿಯುಂ
ಉದಕಮಂ ತರಬಹುದೆ ಎನುತ ಹರವಿಯ ನೊಡೆದು
ಮುದವರತು ಊಳಿದಳ್ ಬ್ರಹ್ಮಶಿರಕರಯೆಂದು

ಕಂಡು ಸೋಮಾಜಿಗಳ್ ಭುಗಿಲೆಂಬ ಕೋಪದೊಳ್
ಮಂಡೆದೊನೆಯುತ್ತೆ ಪಾರ್ವರಿಗೆ ಪೇಳುತ್ತಿರಲ್
ಕೇಳುತ ಖತಿಗೊಂಡು ವಿಪ್ರರುಂ ಕೂಡುತಂ
ಭಾಳಲೋಚನನೆನಿಪ ಭಕ್ತನೆಡೆಗೈತಂದು
ಕಲ್ಲಯ್ಯಗಳಿರ ನಿಮ್ಮಯ ಸುತೆಯು ಕಡು ಧೂರ್ತೆ
ಬಲ್ಲಿದಂ ಸೋಮಯಾಜಿಗಳ್ ಸೋಂಕಲು ಮತ್ತೆ
ಹರವಿಯಂ ಪೊಡೆದೂಳಿದಳು ಇಂತುಂಟೆ
ಧರೆಯೊಳಗೆ ಬ್ರಾಹ್ಮಣರ ಮುಟ್ಟೆ ಪೊಲ್ಲಮೆಯುಂಟೆ
ನೀವು ಸದ್ಭಕ್ತರತ್ಯಂತ ಸದ್ಭಾವಿಗಳು
ಈ ವನಿತೆಯತಿ ಧೂರ್ತೆಯಾದಳೀ ಜಗದೊಳಂ
ಅಂದು ಸರ್ಪಂ ಮುಟ್ಟೆ ಮುಡಿಯೆ ಎಬ್ಬಿಸೆ ಪೋಯ್ತು
ಇಂದುಮೀ ಕನ್ನಿಕೆಯ ಚರಿತದೊಳು ಪೊಸತಾಯ್ತು
ನೀವು ಪೇಳಿರೆ ಅಷ್ಟದಶ ವರ್ಣದೊಳು ಶ್ರೇಷ್ಠ
ಆವಗಂ ವೇದನಿತ್ತುಗಳ್ ತಾಂ ಉತ್ಕೃಷ್ಟ
ಇಂತಪ್ಪರಂ ಮುಟ್ಟಬಾರದೇ ನೀನೆನಲ್
ಎಂತು ನಿಮ್ಮಂ ನೋಡಿ ಸೈರಿಸುವೆನಾವೆನಲ್

ಎನಲು ಭುಗಿಲೆಂದು ಕಲ್ಲಯ್ಯನೆಂದಂ ಕೂಡೆ
ಮನದೊಳಗೆ ಕೋಪಾಗ್ನಿ ಮೂಡುತಿರೆ ತಾಂ ಕೂಡೆ
ನೋಡಬಹುದೇ ನುಡಿಸಬಹುದೆ ನಿಮ್ಮೀರ್ವರಂ
ರೂಢಿಯೊಳು ನುಡಿವ ಮಾತುಂಟೆಂತಿದೇ ಸ್ಥಿರಂ
ಶಿವನ ಭಕ್ತರ ಮನೆಯ ಶುನಕ ಮುಟ್ಟವು ನಿಮ್ಮ
ಭವಹರನ ಭಕ್ತರುಂ ಸೋಂಕಲಹುದೇ ನಿಮ್ಮ

ನೋಡಿ ಮುಳ್ಳಂ ತೆಗೆದು ದಸಿಯ ಬಿಟ್ಟಂತಾಯ್ತು
ಕೂಡಿರ್ದ ಭೂಸುರರು ಶುನಕನಿಂ ಕಡೆಯಾಯ್ತು
ಎನೆ ನಿಮ್ಮ ಶುನಕನಿಂ ವೇದವಂ ನೋದಿದೊಡೆ
ಮನವಾಸಿಯಿಲ್ಲ ಸಾರನೆಯಿಂದ ನಾವು ಕಡೆ

ಎನಲುಘೆಯ ಕಾಳನ ಸಹೋದರನ ಜಾಯಿಲನು
ಮನೆವಾರೆ ಕರೆಯೆ ಬಂದುದು ಕೃಷ್ಣ ಶುನಕನು
ನೋಡಿ ಬಾರೆನಲು ಬಾಲವ ಮಿಡಿದು ನಡೆತರಲು
ರೂಢಿಗಪ್ರತಿಮ ಕಲಿದೇವರಿದಿರೊಳು ನಿಲಲು
ಸಚ್ಚರಿತ ಕಲ್ಲಿದೇವಂ ಮನದೊಳೆಚ್ಚುತಂ
ಅಚ್ಚರಿಯ ಜಾಯಿಲನ ನೋಡಿ ಕೊಂಡಾಡುತಂ
ಉಚ್ಚ ಲಿಂಗೋಚ್ಛಿಷ್ಟ ಭೋಗಿಯೇ ಉಚ್ಚರಿಸು
ಉಚ್ಚವೋಂಕಾರಾಂಕ ಯೋಗಿಯೇ ಉಚ್ಚರಿಸು
ಆವ ವೇದದೊಳೊಂದು ಠಾವ ಪೇಳೆಂದೆನಲು
ಭಾವದೊಳು ವಿಪ್ರರು ಯಜುರ್ವೇದವೆನುತಿರಲು
ಹೃದಯ ಕಮಲದಲಿ ಶಿವಮೂರ್ತಿಯಂ ನೆಲೆಗೊಳಿಸಿ
ಮುದದಿಂದ ಲಾಕುಂಚನಂಗೈದು ನೆಲೆಗೊಳಿಸಿ
ಆದಿಶಕ್ತಿಯನಾಂತು ಪೆಟ್ಟೆ ಶಶಿರವಿಗಳಂ
ವೇದಿಸುತ ನಾಸಾಗ್ರದೊಳ್ ನಯದ ಶೃತಿಗಳಂ
ಮಾಧುರ್ಯಮಧುರರಸವಾದ ಸುಸ್ವರಗಳಂ
ವೇದಾಂತದೊಳಗುಳ್ಳ ಅರ್ಥನಿಚಯಂಗಳಂ
ಲಕ್ಷಣೋಪೇತ ಸ್ಥಿರಪ್ರಚಯವೆಂಬಿವಂ
ಅಕ್ಷರತ್ರಯ ಬಿಂದು ನಾದ ಕಳೆಯೆಂಬಿವಂ
ಸುರುಚಿರೋದಾತ್ತಾನುದಾತ್ತ ಪ್ರಚಯಂಗಳಂ
ಬೆರಸಿ ಪದವರ್ಗ ಕ್ರಮಾದಿಯೊಳಗಾಗಳುಂ
ನಿರುತ ಚಾತುಶ್ರುತಿಗಳಿಂದ ವಿಸ್ತರಿಸುತಿರೆ
ಕರಮೆಸೆಯಲರಿದತ್ತಿ ಶುನಕನುಚ್ಚರಿಸುತಿರೆ

ಆಗಳಾ ಕಲಿದೇವನೆಲ್ಲನು ಹರುಷದಿಂದ
ರಾಗದಿಂ ಹೋ ಮಾಣು ವೇದಕಧಿಪತಿಯೆಂದ



ಎನಲಧ್ಯಯನವನಂದುಡಿಗಿ ಮೋಲುಂ ನೋಡೆ
ಮನ ನೊಂದು ಭೂಸುರರ್ ಕಂಬನಿಯೊಳಳ್ದಿಡೆ
ಕೇಳಿರೆ ಈಗ ಕಂಡಿರೆ ವಿಪ್ರರೆಲ್ಲರುಂ
ಫಾಳಾಂಬಕನ ಭಕ್ತಂಲಿಹ ಜಾಯಿಲಕೆ ಸರಿ
ಎನಲು ವಿಪ್ರರು ಸ್ತೋತ್ರವಂ ಮಾಡಿ ವೈಯುಕ್ತಿ
ಅನಘ ಕಲ್ಲಯ್ಯನವರಂ ಕೇಪಿ ಮನವುಕ್ಕಿ
ನಿರುತದಿಂದಿರ್ದು ಲಿಂಗಾರ್ಚನೆಗೆ ಕುಳ್ಳಿರ್ದ
ಆರರೆ ಶಿವನೇಕ ನಿಷ್ಠೆಯ ವೆಸನಿ ಕುಳ್ಳಿರ್ದ
ಅತ್ತಿತ್ತ ಚಲಿಸದಚಲಂ ಪೂಜಿಸುತ್ತಿರ್ದ
ಸತ್ತ್ವಮ ಶಿವಾರಾಧಕಂ ಪೂಜಿಸುತ್ತಿರ್ದ
ನಿರುಳೆನ್ನದಲ್ಲಿ ಪಗಲೆನ್ನದರ್ಚಿಸುತಿರ್ದ
ಉರವಣಿಸಿ ನಿತ್ಯ ಲಿಂಗಾರ್ಚನೆಗೆ ಸಂದಿರ್ದ
ನಿಮ್ಮ ಹಾವಿನಹಾಳ ಕಲ್ಲಯ್ಯನೊಪ್ಪಿರ್ದ
ನಮ್ಮಮ್ಮ ಕಲ್ಲಿನಾಥನ ಶರಣನೆಸೆದಿರ್ದ

ಇಂತು ಶಿವಲಿಂಗಾರ್ಚನಾ ಭರದೊಳೊಪ್ಪುತಿರೆ
ಮುಂತೆ ಮೂವತ್ತನೆಯ ದಿನದಲ್ಲಿ ತೋರುತಿರೆ
ದಿನದೊಡನೆ ದಿವ್ಯ ದೇಹಂ ವಿಮಾನಂ ಬರಲು
ತನತನಗೆ ದೇವಗಣ ಸಂಕುಲಂ ಬರುತಿರಲು
ಕಂಡು ಕಲ್ಲಯ್ಯನುಬುಬೆಂದು ಬೊಬ್ಬಿಡುತಲ್ಲಿ
ಖಂಡೇಂದುಮೌಳಿಯಣುಗರಂ ನಿರೀಕ್ಷಿಸುತಲ್ಲಿ
ಕರೆವ ಪೂಮಳೆಯೊಳಗೆ ಕರೆವ ಕಹಳೆಗಳೊಳಗೆ
ಮೆರೆವ ಜಯರವದೊಳಗೆ ಕುಣಿವ ಗಣತತಿಯೊಳಗೆ
ದಿವ್ಯದೇಹಂಬೊಕ್ಕು ಪುಷ್ಪಕವನೇರುತಂ
ದಿವ್ಯ ಪಥದೊಳ್ ನಡೆದು ಗಗನಕ್ಕೆ ಪಾರುತಂ
ಕೈಲಾಸಮಂ ಪೊಕ್ಕು ಗಣಪದವಿಯಂ ಪಡೆದು
ಶೈಲಜಾಪತಿಯ ಪದಕಮಲಮಂ ಬಲ್ಪಿಡಿದು
ಇರುತಿರ್ದನೆಮ್ಮ ಹಾವಿನಹಾಳ ಕಲ್ಲಯ್ಯ
ಉರುತರ ಶಿವಾನಂದ ಸುಖಿಯಾಗಬಲ್ಲಯ್ಯ
ಇಂತು ಕಲ್ಲಯ್ಯನಂ ಗಣಪದವಿಯೊಳಗಿರಿಸಿ

ಸಂತತಂ ದೇವಗಣದೊಳಗಿರಿಸುತಾದರಿಸಿ
ಶರಣಕುಲ ಕಮಲ ಮಾರ್ತಂಡನಿಂತೊಪ್ಪಿದಂ
ಶರಣಕುಲ ಕುಮುದ ಪೂರ್ಣೇಂದುವಿಂತೊಪ್ಪಿದಂ
ಮಧುರೆ ಮಹಾಗುರು ಮಹಾಮಹಿಮನೊಪ್ಪಿದಂ
ಮಧುಭಾಷು ಹಂಪೆಯ ವಿರೂಪಾಕ್ಷನೊಪ್ಪಿದಂ

**ಕಂದ॥** ಮನವೊಸೆದೆನಗತ್ಯಂತಂ
ಘನಮಹಿಮಂ ನೆರೆದೆನೆಮ್ಮ ಹಾವಿನಹಾಳೊಳು
ವಿನಯದಿ ಕಲಿದೇವನ ಸುತ
ನನೆ ಹೊಗಳ್ವೆಂ ದೇವ ಹಂಪೆಯ ವಿರೂಪಾಕ್ಷಾ

---